Short Bible
Stories
in
Canarese
1863.

G k
VI
66



ದೇವರ ವಾಕ್ಯದ

ಸಂಗಿ ಕಥೆಗಳು

SHORT

BIBLE STORIES

IN

CANARESE



MANGALORE

PFLEIDERER & RIEHM, MISSION BOOKSHOP AND
GOVT. SCHOOLBOOK DEPOT

1863

B

PFL

ದೇವರ ವಾಕ್ಯದ

ಸಣ್ಣ ಕಥೆಗಳು

SHORT

BIBLE STORIES

IN

CANARESE



MANGALORE
PFLEIDERER & RIEHM, MISSION BOOKSHOP
AND GOVT. SCHOOLBOOK DEPOT
1863

Printed by J. Mack,
Basel Mission Press, Mangalore

ಬಾಸೆಲ್ ಮಿಶನ್ ಪ್ರೆಸ್,
ಮಂಗಳೂರು



GKII 66

I.

ಹಳೇ ಒಡಂಬಡಿಕೆಯ ಕಥೆಗಳು

೧ ಸೃಷ್ಟಿ

ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಸೃಷ್ಟಿಸಿದನು. ಭೂಮಿಯು ಹಾಳಾಗಿಯೂ ಬರಿದಾಗಿಯೂ ಇತ್ತು. ದೇವರು ತನ್ನ ವಾಕ್ಯದ ಮುಖಾಂತರ ಸಮಸ್ತವನ್ನು ಸೃಷ್ಟಿಸಿದನು.

ಮೊದಲನೇ ದಿವಸದಲ್ಲಿ ಬೆಳಕನ್ನು ಸೃಷ್ಟಿಸಿದನು.

ಎರಡನೇ ದಿವಸದಲ್ಲಿ ಆಕಾಶವನ್ನು ಸೃಷ್ಟಿಸಿದನು.

ಮೂರನೇ ದಿವಸದಲ್ಲಿ ಒಣನೆಲವನ್ನೂ ನೀರುಗಳನ್ನೂ ವಿಂಗಡಿಸಿದನು; ಮತ್ತು ಒಣನೆಲದಲ್ಲಿ ಹುಲ್ಲನ್ನೂ ಪಲ್ಯಗಳನ್ನೂ ಫಲದ ಮರಗಳನ್ನೂ ಸೃಷ್ಟಿಸಿದನು.

ನಾಲ್ಕನೇ ದಿವಸದಲ್ಲಿ ಸೂರ್ಯ ಚಂದ್ರ ನಕ್ಷತ್ರಗಳನ್ನು ಸೃಷ್ಟಿಸಿದನು.

ಐದನೇ ದಿವಸದಲ್ಲಿ ಮೀನುಗಳನ್ನೂ ಪಕ್ಷಿಗಳನ್ನೂ ಸೃಷ್ಟಿಸಿದನು.



ಆರನೇ ದಿವಸದಲ್ಲಿ ಪಶುಗಳನ್ನೂ ಕ್ರಿಮಿಗಳನ್ನೂ ಭೂಮಿಯ



ಮೃಗಗಳನ್ನೂ ಸೃಷ್ಟಿಸಿದನು. ಕಡೆಯಲ್ಲಿ ಮನುಷ್ಯನನ್ನು ತನ್ನ ರೂಪವಾಗಿ ಸೃಷ್ಟಿಸಿದನು. ಗಂಡು ಹೆಣ್ಣಾಗಿ ಅವರನ್ನು ಸೃಷ್ಟಿಸಿದನು. ಗಂಡಸಿನ ಹೆಸರು—ಆದಮನು, ಹೆಂಣಿನ ಹೆಸರು—ಹವ್ವಳು.

ಮತ್ತು ದೇವರು ತಾನು ಮಾಡಿದ್ದೆಲ್ಲಾ ನೋಡಿದನು; ಆಗ, ಇಗೋ, ಅದು ಬಹು ಒಳ್ಳೇದಾಗಿತ್ತು. ಹೀಗೆ ಆಕಾಶವೂ ಭೂಮಿಯೂ ಪೂರ್ಣವಾಯಿತು.

ಏಳನೇ ದಿವಸದಲ್ಲಿ ದೇವರು ಕೆಲಸ ಮಾಡದೆ, ವಿಶ್ರಮಿಸಿ ಕಾಂ

ಡನು. ಮತ್ತು ಏಳನೇ ದಿವಸವನ್ನು ಆಶೀರ್ವದಿಸಿ, ಪರಿಶುದ್ಧ ಮಾ ಡಿದನು.

ಕರ್ತನೇ, ನಿನ್ನ ಕೆಲಸಗಳು ಎಷ್ಟೋ ಉಂಟು. ಅವುಗಳನ್ನೆಲ್ಲಾ ಜ್ಞಾನ ದಿಂದ ಉಂಟು ಮಾಡಿದ್ದಿ; ಭೂಮಿಯು ನಿನ್ನ ಆಸ್ತಿಯಿಂದ ತುಂಬಿ ಅದೆ (ಕೀರ್ತ. ೧೦೪, ೨೪).

---

೨ ಪಾಪದ ಆರಂಭ

ದೇವರು ಏದೇನಿನಲ್ಲಿ ಒಂದು ತೋಟವನ್ನು ನೆಟ್ಟನು; ಅದರಲ್ಲಿ ಮನುಷ್ಯನನ್ನು ಇಟ್ಟನು. ಮನುಷ್ಯನು ಆ ತೋಟವನ್ನು ವ್ಯವಸಾಯ ಮಾಡಿ, ಕಾಯ ಬೇಕಾಯಿತು. ದೇವರು ಅವನಿಗೆ ಎಲ್ಲಾ ಮರಗಳ ಹಣ್ಣನ್ನು ತಿನ್ನ ಬಹುದೆಂದು ಅಪ್ಪಣೆ ಕಾಟ್ಟನು; ಆದರೆ ತಿಳುವಿಕೆಯ ಮರದಿಂದ ತಿನ್ನ ಬಾರದು, ಅದರಿಂದ ತಿನ್ನುವ ದಿವಸದಲ್ಲಿ ಸಾಯಲೇ ಸಾಯುವಿ ಎಂದು ಹೇಳಿದನು. ಎಲ್ಲಾ ಮೃಗಗಳಿಗಿಂತ ಸರ್ಪವು ಯುಕ್ತಿ ಉಳ್ಳದ್ದಾಗಿತ್ತು. ಅದು ಹವ್ವಳಿಗೆ ಹೇಳಿದ್ದು — ನೀವು ಆ ಹಣ್ಣನ್ನು ತಿನ್ನ ಬಹುದು, ನೀವು ಸಾಯುವದಿಲ್ಲ, ದೇವರುಗಳ ಹಾಗೆ ಆಗುವಿರಿ. ಆಗ ಹವ್ವಳು ಆ ಹಣ್ಣನ್ನು ನೋಡಿದಳು, ಅವಳಿಗೆ ಇಚ್ಛೆ ಹುಟ್ಟಿತು, ಅವಳು ತಿಂದಳು; ಆದಮನಿಗೂ ಕಾಟ್ಟಳು. ಸಾಯಂಕಾಲಕ್ಕೆ ಅವರು ತೋಟದಲ್ಲಿ ಕರ್ತನ ಶಬ್ದವನ್ನು ಕೇ



ಳಿದರು; ಅದಕ್ಕಾಗಿ ಅವರು ಮರಗಳ ನಡುವೆ ಅಡಗಿ ಕಾಂಡರು. ಆ ಗ ಕರ್ತನು ಆದಮನನ್ನು ಕರೆದು — ನೀನು ಎಲ್ಲಿ ಎಂದು ಹೇಳಿದನು. ಮತ್ತು ದೇವರು ಸರ್ಪಕ್ಕೂ ಹವ್ವಳಿಗೂ ಆದಮನಿಗೂ ಅವರ ಪಾ ಪಕ್ಕಾಗಿ ಶಿಕ್ಷೆ ನಿರ್ಣಯಿಸಿದನು. ಸರ್ಪವು ಹೊಟ್ಟೆಯಿಂದ ನಡೆದು, ಮಣ್ಣೇ ತಿನ್ನ ಬೇಕು; ಮತ್ತು ಮನುಷ್ಯರು ಬೇನೆಯೂ ದುಃಖವೂ ತಿಂದು, ಕಷ್ಟ ಮಾಡ ಬೇಕು, ಕಡೆಗೆ ಸಾಯ ಬೇಕು ಎಂಬುವದು ಆ ಯಿತು.

ನೀನು ದುಷ್ಟತ್ವದಲ್ಲಿ ಸಂತೋಷಿಸುವ ದೇವರು ಅಲ್ಲ, ಕೆಟ್ಟತನವು ನಿನ್ನ ಬಳಿಯಲ್ಲಿ ತಂಗದು (ಕೀರ್ತ. ೫, ೪).

---

೫ ಕಾಯಿನನೂ ಹೇಬೆಲನೂ

ಆದಮನಿಗೂ ಹವ್ವಳಿಗೂ ಇಬ್ಬರು ಮಕ್ಕಳು ಇದ್ದರು. ಮೊದಲ ನೆಯವನ ಹೆಸರು — ಕಾಯಿನನು, ಎರಡನೆಯವನ ಹೆಸರು — ಹೇ ಬೆಲನು; ಹೇಬೆಲನು ಕುರಿ ಕಾಯುವವನಾಗಿದ್ದನು, ಕಾಯಿನನು ವ್ಯವಸಾಯ ಮಾಡುವವನಾದನು. ಒಂದು ದಿವಸದಲ್ಲಿ ಕಾಯಿನ ನು ಭೂಮಿಯ ಫಲಗಳಲ್ಲಿ ಕೆಲವನ್ನು ಕರ್ತನಿಗೆ ಕಾಣಿಕೆಯಾಗಿ ತಂ ದನು. ಹೇಬೆಲನು ಸಹ ತನ್ನ ಮಂದೆಯಿಂದ ಕೆಲವನ್ನು ತಂದನು. ಆಗ ಕರ್ತನು ಹೇಬೆಲನನ್ನೂ ಅವನ ಕಾಣಿಕೆಯನ್ನೂ ಲಕ್ಷ ಮಾಡಿದ ನು. ಆದರೆ ಕಾಯಿನನನ್ನೂ ಅವನ ಕಾಣಿಕೆಯನ್ನೂ ಲಕ್ಷ ಮಾಡಲಿ ಲ್ಲ. ಆದ ಕಾರಣ ಕಾಯಿನನು ಬಹು ಕೋಪಗಾಂಡನು. ದೇವರು ಕಾಯಿನನನ್ನು ಎಚ್ಚರಿಸಿದನು. ಆದರೂ ಕಾಯಿನನು ಹಾಗೇ, ಹೇ ಬೆಲನನ್ನು ಕಾಂದು ಹಾಕಿದನು. ಮತ್ತು ಕರ್ತನು ಕಾಯಿನನಿಗೆ— ಹೇಬೆಲನು ಎಲ್ಲಿ ಅಂದನು. ಕಾಯಿನನು ಉತ್ತರ ಕೊಟ್ಟು — ನಾ ನರಿಯೆ ಅಂದನು. ಆದರೆ ಕರ್ತನು ಅವನಿಗೆ — ನಿನ್ನ ತಮ್ಮನ ರಕ್ತದ ಶಬ್ದವು ನನಗೆ ಕೂಗುತ್ತದೆ. ನೀನು ಭೂಮಿಯಿಂದ ಶಪಿಸಲ್ಪಟ್ಟವ ನು ಅಂದನು. ಹೀಗೆ ಕಾಯಿನನು ಕರ್ತನ ಸನ್ನಿಧಿಯಿಂದ ಹೊರಟು ಹೋದನು.



ತನ್ನ ಸಹೋದರನನ್ನು ಹಗೆ ಮಾಡುವ ಪ್ರತಿ ಮನುಷ್ಯನು ನರಹಿಂಸಕನಾಗಿದ್ದಾನೆ. ಮತ್ತು ನರಹಿಂಸಕನಾದ ಯಾವನಿಗೂ ತನ್ನಲ್ಲಿ ನೆಲೆಯಾಗಿರುವ ನಿತ್ಯಜೀವವಿಲ್ಲವೆಂದು ಬಲ್ಲಿರಿ (೧ ಯೋಹಾ. ೩, ೧೫).

---

೪ ಜಲಪ್ರಳಯ

ಭೂಮಿಯ ಮೇಲೆ ಜನರು ಹೆಚ್ಚಿದರು. ಮತ್ತು ಮನುಷ್ಯನ ದುಷ್ಟತ್ವವು ಭೂಮಿಯಲ್ಲಿ ಹೆಚ್ಚಿತು. ಮನುಷ್ಯನ ಹೃದಯದ ಆಲೋಚನೆಗಳ ಕಲ್ಪನೆ ಎಲ್ಲಾ ದಿನಾಲು ಕೆಟ್ಟದ್ದೇ ಎಂದು, ದೇವರು ನೋಡಿದನು. ಅದಕ್ಕೆ ಅವನು ತನ್ನ ಹೃದಯದಲ್ಲಿ ನೊಂದು ಕೊಂಡನು, ಮತ್ತು ಮನುಷ್ಯನನ್ನೂ ಸಮಸ್ತ ಜೀವರಾಶಿಗಳನ್ನೂ ಭೂಮಿಯಿಂದ ಅಳಿಸಿ ನಿರ್ಣಯ ಮಾಡಿದನು. ಆದರೆ ನೋಹನಿಗೆ ಕರ್ತನ ದೃಷ್ಟಿಯಲ್ಲಿ ದಯ ದೊರಕಿತು. ಇವನು ನೀತಿವಂತನೂ ಸಂಪೂರ್ಣನೂ ಆಗಿದ್ದನು. ಆಗ ದೇವರು ನೋಹನಿಗೆ ಹೇಳಿದ್ದು —ನೀನು ಒಂದು ನಾವೆಯನ್ನು ಮಾಡಿಕೋ; ಯಾಕಂದರೆ ನಾನು ಜಲಪ್ರಳಯವನ್ನು ಬರಮಾಡುತ್ತೇನೆ, ಅದರಿಂದ ಎಲ್ಲಾ ಜೀವರಾಶಿಗಳನ್ನು ನಾಶನ ಮಾಡುತ್ತೇನೆ; ಆದರೆ ನಿನ್ನನ್ನು ಉಳಿಸುತ್ತೇನೆ. ನೀನೂ ನಿನ್ನ ಹೆಂಡತಿಯೂ ನಿನ್ನ ಮಕ್ಕಳೂ ನಿನ್ನ ಮಕ್ಕಳ ಹೆಂಡರೂ ನಾವೆಯೊಳಗೆ ಶೇರಬೇಕು. ಬೇರೆ ಜೀವರಾಶಿಗಳಿಂದಲೂ ಒಂದೊಂದು ಜೋಡನ್ನು ನೋ

ವೆಯಾಳಗೆ ತರ ಬೇಕು. ದೇವರು ಆಜ್ಞಾಪಿಸಿದ ಪ್ರಕಾರ, ನಾಹನು ಮಾಡಿದನು. ಆ ಮೇಲೆ ನಾಲ್ವತ್ತು ದಿವಸ ಪರ್ಯಂತರ ಮಳೆ ಬಿತ್ತು. ಎಲ್ಲಾ ಬೆಟ್ಟಗಳು ಮುಚ್ಚಿ ಹಾಗುವ ಹಾಗೆ, ನೀರು ಅಷ್ಟು ಏರಿತು. ಆಗ ಜೀವರಾಶಿಗಳೆಲ್ಲಾ ಮನುಷ್ಯರೆಲ್ಲರೂ ಸಹಿತವಾಗಿ ತೀರಿ ಹಾದರು; ನಾವೆಯಲ್ಲಿ ಇರುವವರು ಮಾತ್ರ ಉಳಿದರು. ಅವ



ರನ್ನು ದೇವರು ಜ್ಞಾಪಕ ಮಾಯಿ, ನೀರು ತಿರುಗಿ ಹಾಗುವ ಹಾಗೆ ಮಾಡಿದನು. ನಾಹನೂ ಅವನ ಸಂಗಡ ಇದ್ದವರೂ ಒಂದು ವರುಷಪರ್ಯಂತರ ನಾವೆಯಲ್ಲಿ ಇದ್ದ ಮೇಲೆ ಭೂಮಿ ಒಣಗಿ ಇತ್ತು; ಮತ್ತು ಅವರು ನಾವೆಯಾಳಗಿಂದ ಹಾರಟರು. ತರುವಾಯ ನಾಹನು ಕರ್ತನಿಗೆ ಒಂದು ಪೀಠವನ್ನು ಕಟ್ಟಿದನು; ಈ ಪೀಠದ ಮೇಲೆ ಆತನು ದಹನಬಲಿಗಳನ್ನು ಅರ್ಪಿಸಿದನು. ದೇವರು ನಾಹನನ್ನೂ ಅವನ ಮಕ್ಕಳನ್ನೂ ಆಶೀರ್ವದಿಸಿದನು. ಮತ್ತು ಜಲಪ್ರಳಯ ಇನ್ನು ಬರುವದಿಲ್ಲ ಎಂಬ ಗುರ್ತಕ್ಕೆ ದೇವರು ಮಳೆಯ ಬಿಲ್ಲನ್ನು ಮೇಘಗಳಲ್ಲಿ ಇಟ್ಟಿದ್ದಾನೆ. ನಾಹನು ಮತ್ತು ವ್ಯವಸಾಯ ಮಾಡುವವನಾದನು.

ಸರ್ವ ಶಕ್ತನಾಗಿರುವ ಕರ್ತನಾದ ದೇವರೇ, ನಿನ್ನ ನ್ಯಾಯತೀರ್ಪುಗಳು ಸತ್ಯವೂ ನೀತಿಯೂ ಆದವುಗಳೇ (ಪ್ರಕಟ. ೧೬, ೭).

ಕರ್ತನು ಅಂತಃಕರಣವೂ ದಯವೂ ದೀರ್ಘಶಾಂತಿಯೂ ಬಹಳ ಕೃಪೆಯೂ ಉಳ್ಳವನಾಗಿದ್ದಾನೆ (ಕೀರ್ತ. ೧೦೩, ೮).

---

೫ ಅಬ್ರಹಾಮನೂ ಲೋಟನೂ

ಭೂಮಿಯ ಮೇಲೆ ಜನರು ತಿರಿಗಿ ಹೆಚ್ಚಾದರು. ಆದರೆ ಅವರು ಸೂರ್ಯ ಚಂದ್ರ ನಕ್ಷತ್ರಗಳಿಗೂ ಮೂರ್ತಿಗಳಿಗೂ ಕೈ ಮುಗಿದು, ಸೇವೆ ಮಾಡಿದರು. ಆಗ ಅಬ್ರಹಾಮನು ಕಸ್ದೀಯರ ದೇಶದಲ್ಲಿ ವಾಸವಾಗಿದ್ದನು. ದೇವರು ಈ ಅಬ್ರಹಾಮನಿಗೆ ಹೇಳಿದ್ದೇನಂದರೆ — ನಿನ್ನ ದೇಶವನ್ನು ಬಿಟ್ಟು, ನಾನು ನಿನಗೆ ತೋರಿಸುವ ದೇಶಕ್ಕೆ ಬಾ, ನಾನು ನಿನ್ನನ್ನು ಆಶೀರ್ವದಿಸುವೆನು, ಮತ್ತು ನಿನ್ನ ಬೀಜದಲ್ಲಿ ಭೂಮಿಯ ಕುಲಗಳೆಲ್ಲಾ ಆಶೀರ್ವದಿಸಲ್ಪಡುವವು. ದೇವರು ಹೇಳಿದ ಪ್ರಕಾರ, ಅಬ್ರಹಾಮನು ಹೊರಟನು. ಲೋಟನು ಅವನ ಸಂಗಡ ಹೋದನು. ಅವರು ಕಾನಾನ್ ದೇಶಕ್ಕೆ ಶೇರಿದರು. ಅಲ್ಲಿ ಅವರ



ಸಂಪತ್ತು ಬಹಳವಾಗಿತ್ತು. ಹೀಗೆ ಅವರು ಏಕವಾಗಿ ವಾಸಿಸುವ ಹಾಗೆ, ಭೂಮಿ ತಾಳಲಾರದೆ ಹೋಯ್ತು. ಅಬ್ರಹಾಮನ ದನ ಕಾಯುವವರಿಗೂ ಲೋಟನ ದನ ಕಾಯುವವರಿಗೂ ಜಗಳವಾಯಿತು.

ಹೀಗಿರಲಾಗಿ ಅಬ್ರಹಾಮನು ಲಾ�lಟನಿಗೆ ಹೇಳಿದ್ದೇನಂದರೆ—ನನಗೂ ನಿನಗೂ ಜುಗಳವಿರ ಬಾರದು. ನನ್ನ ಬಳಿಯಿಂದ ತಾಲಗು; ನೀನು ಎಡಗಡೆಗೆ ಹಾೀದರೆ, ನಾನು ಬಲಗಡೆಗೆ ಹಾೀಗುವೆನು; ಬಲಗಡೆಗೆ ಹಾೀದರೆ, ನಾನು ಎಡಗಡೆಗೆ ಹಾೀಗುವೆನು. ಆಗ ಲಾೀ



ಟನು ಸಾೀದಾೀಮಿನ ಶೀಮೆಗೆ ಹಾೀದನು; ಆದರೆ ಅಬ್ರಹಾಮನು ಕಾನಾನ್ ದೇಶದಲ್ಲಿ ವಸ್ತಿ ಮಾಡಿದನು. ಅದರ ಮೇಲೆ ಕರ್ತನು ಅಬ್ರಹಾಮನಿಗೆ ಒಂದು ವಾಗ್ದತ್ತವನ್ನು ಕಾಟ್ಟಿನು—ನೀನು ನಾೀಡುವ ದೇಶವನ್ನೆಲ್ಲಾ ನಿನಗೂ ನಿನ್ನ ಬೀಜಕ್ಕೂ ನಿತ್ಯವಾಗಿ ಕಾಡುವೆನು ಎಂದು ಹೇಳಿದನು.

ಸಮಾಧಾನ ಮಾಡುವವರು ಭಾಗ್ಯವಂತರು, ಯಾಕಂದರೆ ಅವರು ದೇವರ ಮಕ್ಕಳೆಂದು ಕರೆಯಲ್ಪಡುವರು (ಮತ್ತಾ. ೫, ೯).

---

೬ ಸೋದೋಮೂ ಗೊಮೋರವೂ

ಸಾೀದಾೀಮಿನಲ್ಲಿಯೂ ಗಾಮೋರದಲ್ಲಿಯೂ ಇರುವ ಮನುಷ್ಯರು ದುಷ್ಟರೂ, ಕರ್ತನಿಗೆ ವಿರಾೀಧವಾಗಿ ಬಹು ಪಾಪಿಷ್ಠರೂ ಆಗಿದ್ದರು. ಅವರು ಮಾಂಸದ ಮನಸ್ಸಿನಿಂದ ನಡೆದು ಕಾಂಡರು. ಅ

ದಕ್ಕಾಗಿ ದೇವರು ಸೊದಾಮನ್ನೂ ಗೊಮೋರವನ್ನೂ ನಾಶನ ಮಾಡಲಿಕ್ಕೆ ಇಬ್ಬರು ದೂತರನ್ನು ಕಳುಹಿಸಿದನು. ಈ ದೂತರು ಸೊದಾಮಿಗೆ ಹೋಗಿ, ಲೋಟನ ಮನೆಯಲ್ಲಿ ಬಿಡಾರ ಮಾಡಿದರು. ಇವನು ಐಶ್ವರ್ಯವುಳ್ಳವನಾಗಿದ್ದನು. ದೂತರು ಅವನಿಗೆ ಹೇಳಿದ್ದು—ನೀನೂ ನಿನ್ನ ಹೆಂಡತಿಯೂ ನಿನ್ನ ಇಬ್ಬರು ಕುಮಾರ್ತೆಗಳೂ ಬೇಗ ಇಲ್ಲಿಂದ ಹೊರಟು ಹೋಗಿರಿ. ಇಲ್ಲವೆ ನೀನು ಈ ಪಟ್ಟಣದ ಅಕ್ರಮದಿಂದ ನಾಶನವಾಗುತ್ತೀ. ನಿನ್ನ ಪ್ರಾಣಕ್ಕಾಗಿ ಓಡಿ ತಪ್ಪಿಸಿಕೋ; ನಿನ್ನ ಹಿಂದೆ ನೋಡ ಬೇಡ; ಈ ಶೀಮೆಯಲ್ಲಿ ನಿಂತು ಕೊಳ್ಳ ಬೇಡ. ತರುವಾಯ ಕರ್ತನು ಸೊದಾಮಿನ ಮೇಲೆಯೂ ಗೊಮೋರದ ಮೇಲೆಯೂ ಗಂಧಕವನ್ನೂ ಬೆಂಕಿಯನ್ನೂ ಸುರಿಸಿದನು. ಹೀಗೆ ಆ ಪಟ್ಟಣಗಳನ್ನೂ ಅವುಗಳ ನಿವಾಸಿಗಳನ್ನೂ ಭೂಮಿಯ ಬೆಳೆಯನ್ನೂ



ಹಾಳು ಮಾಡಿದನು. ಆದರೆ ಲೋಟನ ಹೆಂಡತಿ (ದೂತರ ಮಾತನ್ನು ಕೇಳದೆ) ತನ್ನ ಹಿಂದಕ್ಕೆ ನೋಡಿದಳು, ಆದದರಿಂದ ಉಪ್ಪಿನ ಸ್ತಂಭವಾದಳು.

ಕರ್ತನು ತನ್ನನ್ನು ಪ್ರೀತಿ ಮಾಡುವವರೆಲ್ಲರನ್ನು ಕಾಪಾಡುತ್ತಾನೆ, ಆದರೆ ದುಷ್ಟರೆಲ್ಲರನ್ನು ನಾಶ ಮಾಡುತ್ತಾನೆ (ಕೀರ್ತ. ೧೪೫, ೨೦).

---

೭ ಅಬ್ರಹಾಮನೂ ಈಸಾಕನೂ

ಅಬ್ರಹಾಮನೂ ಅವನ ಹೆಂಡತಿಯಾದ ಸಾರಳೂ ಬಹಳ ಮುದುಕರಾದರು. ಆದರೆ ಅವರಿಗೆ ಮಕ್ಕಳು ಇರಲಿಲ್ಲ. ಕರ್ತನು ಅಬ್ರ

ಹಾಮನಿಗೆ ಕಾಣಿಸಿ ಕಾಂಡು — ಅಬ್ರಹಾಮನೇ, ಜಯ ಪಡ ಬೇಡ, ನಾನೇ ನಿನಗೆ ಗುರಾಣಿಯೂ ಬಹಳ ದಾಡ್ಡ ಬಲವೂ ಆಗಿದ್ದೇನೆ. ಮತ್ತು ನಿನಗೆ ಹುಟ್ಟುವ ಮಗನು ನಿನಗೆ ಬಾಧ್ಯನಾಗುವನು. ನಿನ್ನ ಬೀಜ ಆಕಾಶದ ನಕ್ಷತ್ರಗಳ ಹಾಗೆ (ಲೆಖ್ಖವಿಲ್ಲದಂಥಾದ್ದು) ಆಗುವದೆಂದು ಹೇಳಿದನು. ಅಬ್ರಹಾಮನು ಕರ್ತನಲ್ಲಿ ವಿಶ್ವಾಸವಿಟ್ಟನು. ಅವನು ಅದನ್ನು ಅಬ್ರಹಾಮನಿಗೆ ನೀತಿ ಎಂದು ಎಣಿಸಿದನು. ಅದರ ಮೇಲೆ ಅವನಿಗೆ ಈಸಾಕನು ಹುಟ್ಟಿದನು. ಅಬ್ರಹಾಮನು ಈಸಾಕನನ್ನು ಪ್ರೀತಿ ಮಾಡಿದನು. ಆದರೆ ಈಸಾಕನು ಹುಡುಗನಾದ ಮೇಲೆ ಕರ್ತನು ಅಬ್ರಹಾಮನನ್ನು ಶೋಧಿಸಿದನು. ಕರ್ತನು ಆತನಿಗೆ — ಈಸಾಕನನ್ನು ಹೋಮವಾಗಿ ಅರ್ಪಿಸು ಅಂದನು. ಅಬ್ರಹಾಮನು ಈಸಾಕನನ್ನು ಕರಕಾಂಡು, ದೇವರು ತನಗೆ ಹೇಳಿದ ಸ್ಥಳಕ್ಕೆ ಹೋದನು. ಅಲ್ಲಿ ಅವನು ಒಂದು ಪೀಠವನ್ನು ಕಟ್ಟಿದನು; ಅದರ ಮೇಲೆ ತನ್ನ ಮಗನಾದ ಈಸಾಕನನ್ನು ಕಟ್ಟಿದನು; ಮತ್ತು ತನ್ನ ಮಗನನ್ನು ಕಡಿಯುವದಕ್ಕೆ ಕತ್ತಿ ತಕ್ಕೊಂಡನು. ಆಗ



ಕರ್ತನ ದೂತನು ಆಕಾಶದಾಳಗಿಂದ ಅವನನ್ನು ಕರೆದು—ಅಬ್ರಹಾಮನೇ, ಅಬ್ರಹಾಮನೇ, ಹುಡುಗನ ಮೇಲೆ ಕೈ ಚಾಚ ಬೇಡ; ನೀನು ದೇವರಿಗೆ ಭಯ ಪಡುತ್ತೀ ಎಂದು, ಈಗ ತಿಳಿದಿದ್ದೇನೆ; ನಿನ್ನ ಒಬ್ಬನೇ ಮಗನನ್ನು ನನಗೆ ಕಾಡ ತಡಿಯಲಿಲ್ಲ ಅಂದನು. ಆಗ ಅಬ್ರಹಾಮನು ತನ್ನ ಕಣ್ಣುಗಳನ್ನು ಎತ್ತಿ ನೋಡಿದನು; ಅಗೋ ಅವನ ಹಿಂದೆ ಒಂದು ಹೋತು ಪೊದೆಯಲ್ಲಿ ಶಿಕ್ಕಿ ಕೊಂಡಿತು. ಅದನ್ನು ಅಬ್ರಹಾಮನು ತನ್ನ ಮಗನಿಗೆ ಬದಲಾಗಿ ಹೋಮವಾಗಿ ಅರ್ಪಿಸಿದನು. ಮತ್ತು ಕರ್ತನು ಅಬ್ರಹಾಮನನ್ನು ಆಶೀರ್ವದಿಸಿದನು.

ಬಲಿಗಿಂತ ಕೇಳುವದು ಉತ್ತಮ (೧ ಸಾಮುವೇಲ್. ೧೫, ೨೨).

---

೪ ಯಾಕೋಬನೂ ಏಸಾವನೂ

ಈಸಾಕನು ರೆಬೆಕ್ಕಳನ್ನು ಮದುವೆ ಮಾಡಿ ಕೊಂಡನು. ಅವರಿಗೆ ಬಹಳ ವರುಷ ಪರ್ಯಂತರ ಮಕ್ಕಳು ಹುಟ್ಟಲಿಲ್ಲ; ಅದಕ್ಕಾಗಿ ಈಸಾಕನು ಕರ್ತನ ಹತ್ತರ—ತಮಗೆ ಮಕ್ಕಳನ್ನು ಕೊಡ ಬೇಕೆಂದು ಬೇಡಿ ಕೊಂಡನು. ಕರ್ತನು ಅವನ ವಿನ್ನಹವನ್ನು ಆಲೈಸಿದನು. ಅವರಿಗೆ ಇಬ್ಬರು ಹುಡುಗರು ಹುಟ್ಟಿದರು. ಮೊದಲನೆಯವನ ಹೆಸರು—ಏಸಾವನು, ಎರಡನೆಯವನ ಹೆಸರು—ಯಾಕೋಬನು. ಆ ಹುಡುಗರು ಬೆಳದಾಗ, ಏಸಾವನು ಬೇಟೆಯಲ್ಲಿ ಜಾಣನಾದನು. ಯಾಕೋಬನು ಗುಡಾರಗಳಲ್ಲಿ ವಾಸ ಮಾಡಿದನು, ಅವನು ಗುಣ ಉಳ್ಳ ಮನುಷ್ಯನಾಗಿದ್ದನು. ಈಸಾಕನು ಮುಖ್ಯವಾಗಿ ಏಸಾವನನ್ನು ಪ್ರೀತಿ ಮಾಡಿದನು. ಆದರೆ ರೆಬೆಕ್ಕಳು ಮುಖ್ಯವಾಗಿ ಯಾಕೋಬನನ್ನು ಪ್ರೀತಿ ಮಾಡಿದಳು. ಈಸಾಕನು ಮುದುಕನಾಗುವಾಗ, ಅವನ ಕಣ್ಣುಗಳು ಮೊಬ್ಬಾದವು. ಅವನು ಏಸಾವನನ್ನು ಆಶೀರ್ವದಿಸ ಬೇಕೆಂದು ಮನಸ್ಸು ಮಾಡಿದನು. ಅದಕ್ಕಾಗಿ ಅವನು ಏಸಾವನಿಗೆ ಹೇಳಿದ್ದು—ನೀನು ಬೇಟೆಯಾಡಿ, ನಾನು ಮೆಚ್ಚುವ ಸವಿ ಊಟವನ್ನು ನನಗಾಸ್ಕರ ಶಿದ್ಧ ಮಾಡು; ನಾನು ಅದನ್ನು ಉಂಡು, ನಿ

ನ್ನನ್ನು ಆಶೀರ್ವದಿಸುವೆನು. ಏಸಾವನು ಬೇಟೆಯಾಡಲಿಕ್ಕೆ ಅಡವಿಗೆ ಹೋದನು. ಆದರೆ ರೆಬೆಕ್ಕಳು ಯಾಕೋಬನಿಗೆ ಹೇಳಿದ್ದು—ನೀನು ಎರಡು ಒಳ್ಳೇ ಮೇಕೆಯ ಮರಿಗಳನ್ನು ತಕ್ಕೊಂಡು ಬಾ; ನಾನು ಅವುಗಳನ್ನು ನಿನ್ನ ತಂದೆಗಾಸ್ಕರ ಸಿದ್ಧ ಮಾಡುವೆನು; ಆಗ ನೀನು ಅವುಗಳನ್ನು ನಿನ್ನ ತಂದೆಯ ಬಳಿಗೆ ತಕ್ಕೊಂಡು ಹೋಗ ಬೇಕು; ಹಾಗೆ ಅವನು ಊಟ ಮಾಡಿ, ನಿನ್ನನ್ನು ಆಶೀರ್ವದಿಸಲಿ. ರೆಬೆಕ್ಕಳು ಸಿದ್ಧ ಮಾಡಿದ ಊಟವನ್ನು ಯಾಕೋಬನು ತನ್ನ ತಂದೆಯ ಬಳಿಗೆ ತಕ್ಕೊಂಡು ಹೋದನು. ಈಸಾಕನು ಅವನಿಗೆ—ನನ್ನ ಮಗನೇ, ನೀನು ಯಾರು ಅಂದನು. ಯಾಕೋಬನು (ಸುಳ್ಳು ಹೇಳಿ)—ತಾನು ಏಸಾವನು ಎಂದು ಹೇಳಿದನು. ಅದರ ಮೇಲೆ ಈಸಾಕನು ಉಂಡು, ಯಾಕೋಬನನ್ನು ಆಶೀರ್ವದಿಸಿದನು. ಯಾಕೋಬನು



ಈಸಾಕನ ಸಮುಖದಿಂದ ಶಿರಿಗಿ ಹೋರಟಾಗಲೇ, ಏಸಾವನು ಬೇಟೆಯಿಂದ ಬಂದನು. ಅವನು ಸಹ ಸವಿ ಊಟವನ್ನು ತಂದೆಯ ಬಳಿಗೆ ತಂದನು. ಆದರೆ ಈಸಾಕನು ಅವನಿಗೆ—ಯಾಕೋಬನು ನಿನ್ನ ಆಶೀರ್ವಾದವನ್ನು ತಕ್ಕೊಂಡನು ಅಂದನು. ಅದಕ್ಕೆ ಏಸಾವನು ಬಹಳ ಕೂಗಿ ಅತ್ತನು. ಮತ್ತು ಅವನು ಯಾಕೋಬನನ್ನು ಹಗೆ ಮಾಡಿದನು; ಅವನನ್ನು ಕೊಂದು ಹಾಕಲಿಕ್ಕೂ ಮನಸ್ಸು ಮಾಡಿದನು. ಆದದರಿಂದ ಯಾಕೋಬನು ಊರನ್ನು ಬಿಟ್ಟು ಓಡಿ ಹೋಗ ಬೇಕಾಯಿತು.

ಸುಳ್ಳನ್ನು ತಳ್ಳಿ ಬಿಟ್ಟು, ಬಬ್ಬಾಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಮಾತಾಡಿರಿ (ಎಫೆ. ೪, ೨೫).

---

೫ ಯಾಕೋಬನು ಓಡಿ ಹೋದದ್ದು



ಈಸಾಕನು ಶಿರಿಗಿ ಯಾಕಾಬಿನನ್ನು ಆಶೀರ್ವದಿಸಿದನು. ಯಾಕಾಬನು ಹಾರಾನಿಗೆ ಹಾದನು. ಒಂದು ದಿವಸದಲ್ಲಿ ಅವನು ಒಂದು ಚಾವಿಯ ಹತ್ತರ ಬಂದನು. ಅಲ್ಲಿಗೆ ರಾಹೆಲ್ ಎಂಬುವ ಹೆಣ್ಣು ಸಹಾ ಕುರಿಗಳ ಸಂಗಡ ಬಂದಳು. ಯಾಕಾಬನು ಅವಳ ಕುರಿಗಳಿಗೆ ನೀರು ಕುಡಿಸಿದನು. ಮತ್ತು ತಾನು ರೆಬೆಕ್ಕಳ ಮಗನೆಂದು, ಅವಳಿಗೆ ತಿಳಿಸಿದನು. ಅವಳು ಓಡಿ, ತನ್ನ ತಂದೆಯಾದ ಲಾಬಾನನಿಗೆ ತಿಳಿಸಿದಳು. ಲಾಬಾನನು ರೆಬೆಕ್ಕಳಿಗೆ ಅಣ್ಣನಾಗಿದ್ದನು. ಲಾಬಾನನು ಓಡಿ ಬಂದು, ಯಾಕಾಬಿನನ್ನು ಮನೆಗೆ ಕರಕಾಂಡನು. ಯಾಕಾಬನು ಲಾಬಾನನ ಹತ್ತರ ವಸ್ತಿಯಾದನು. ಅವನ ಕುರಿಗಳನ್ನು ಮೇಯಿಸಿದನು. ಅಲ್ಲಿ ಅವನು ಲೇಯಳನ್ನೂ ರಾಹೆಲಳನ್ನೂ ಮದುವೆ ಮಾಡಿ ಕಾಂಡನು. ಯಾಕಾಬನು ಲಾಬಾನನ ಮಂದೆಯನ್ನು ಮೇಯಿಸಿದ್ದಕ್ಕೆ ಲಾಬಾನನು ಅವನಿಗೆ ಕುರಿಗಳನ್ನೂ ಮೇಕೆಗಳನ್ನೂ ಸಂಬಳಕ್ಕೆ ಕಾಟ್ಟನು. ದೇವರು ಯಾಕಾಬಿನನ್ನು ಆಶೀರ್ವದಿಸಿದನು. ಹೀಗೆ ಅವನು ಬಹಳ ಐಶ್ವರ್ಯವಂತನಾದನು. ಇದಕ್ಕೆ ಲಾಬಾನನು ಹಾಟ್ಟೆಕಿಚ್ಚು ಮಾಡಿದನು. ಆದರೆ ಕರ್ತನು ಯಾಕಾಬಿನಿಗೆ—ನಿನ್ನ ತಂದೆಗಳ ದೇಶಕ್ಕೆ ತಿರುಗಿ ಹಾಗು, ನಾನು ನಿನ್ನ ಸಂಗಡಲಿರುವೆನು. ಆಗ ಯಾಕಾಬನು ಎದ್ದು

ಹಾೀದನು. ತನ್ನ ಮಕ್ಕಳನ್ನೂ ಹೆಂಡರನ್ನೂ ಎಲ್ಲಾ ಆಸ್ತಿಯನ್ನೂ ಕರಕಾಂಡು ಹಾೀದನು. ಸ್ವದೇಶಕ್ಕೆ ಸಮೂಪವಾಗುವಾಗ, ಯಾ ಕಾೀಬನಿಗೆ ಎಸಾವನ ವಿಷಯ ಚಯವಾಯಿತು. ಅದಕ್ಕಾಗಿ ಆತ ನು ಪ್ರಾರ್ಥನೆ ಮಾಡಿದನು. ಅದರ ಮೇಲೆ ಎಸಾವನು ಯಾಕಾೀ ಬನಿಗೆ ಪ್ರೀತಿಯಿಂದ ಎದುರ್ಗಾಂಡನು. ಅವರಿಬ್ಬರು ಒಬ್ಬರಿಗಾ ಬ್ಬರು ಮುದ್ದಿಟ್ಟು, ಸಮಾಧಾನದಿಂದ ಇದ್ದರು.



ನಿನ್ನ ಮಾರ್ಗವನ್ನು ಕರ್ತನ ಮೇಲೆ ಹಾರಳಿಸು, ಅವನಲ್ಲಿ ಭರವಸವಿ ಡು; ಆಗಲವನು ನಡಿಸುವನು (ಕೀರ್ತ. ೩೭, ೫).

---

೧೦ ಯೋಸೇಫನನ್ನು ಮಾರಿದ್ದು

ಯಾಕಾೀಬನಿಗೆ ಹನ್ನೆರಡು ಮಂದಿ ಮಕ್ಕಳಿದ್ದರು. ಅವರು ಮಂ ದೆಗಳನ್ನು ಮೇಯಿಸುತ್ತಿದ್ದರು. ಅವರಲ್ಲಿ ಯಾೀಸೇಫನೆಂಬವನಿದ್ದ ನು. ಇವನನ್ನು ಯಾಕಾೀಬನು ಹೆಚ್ಚು ಪ್ರೀತಿ ಮಾಡಿದನು. ಯಾ ಕಾೀಬನು ಯಾೀಸೇಫನಿಗೆ ಒಂದು ಚಿತ್ರವರ್ಣದ ಅಂಗಿಯನ್ನು ಮಾಡಿಸಿದನು. ಅದಕ್ಕಾಗಿ ಅವನ ಸಹಾೀದರರು ಹಾಟ್ಟೆಕಿಚ್ಚು ಮಾಡಿ,

ಯಾಕೋಬನಿಗೆ ಹಗೆ ಮಾಡಿದರು. ಒಂದು ದಿವಸದಲ್ಲಿ ಸಹೋದರರು ಮಂದೆಯನ್ನು ಮೇಯಿಸುತ್ತಾ ಇದ್ದರು. ಆವಾಗ ತಂದೆಯು ಯಾಕೋಬನಿಗೆ—ನೀನು ಹೋಗಿ, ನಿನ್ನ ಸಹೋದರರ ಕ್ಷೇಮಸಮಾಚಾರವನ್ನು ತಿಳುಕೊಂಡು ಬಾ ಅಂದನು. ಅವನು ಬರುವದನ್ನು ಅವನ ಸಹೋದರರು ನೋಡುವಾಗ, ಅವರು ಅವನಿಗೆ ಅಪಹಾಸ್ಯ ಮಾಡಿದರು; ಮತ್ತು ಅವನನ್ನು ಕೊಂದು ಹಾಕ ಬೇಕೆಂದು ಆಲೋಚಿಸಿದರು. ಆದರೆ ರೂಬೆನನೆಂಬ ಸಹೋದರನು ಅವನನ್ನು ಅವರ ಕೈಗೆ ತಪ್ಪಿಸಿದನು. ಆಗ ಅವರು ಯಾಕೋಬನ ಚಿತ್ರವರ್ಣದ ಅಂಗಿಯನ್ನು ತೆಗದು, ಅವನನ್ನು ಒಂದು ಕುಣಿಯಲ್ಲಿ ಹಾಕಿದರು. ಆ



ಸ್ಥಳಕ್ಕೆ ಐಗುಪ್ತಕ್ಕೆ ಹೋಗುವ ವರ್ತಕರು ಒಂಟೆಗಳ ಸಂಗಡ ಬಂದರು. ಇವರಿಗೆ ಸಹೋದರರು ಯಾಕೋಬನನ್ನು ಮಾರಿದರು (ರೂಬೆನನು ಆವಾಗ ಇರಲಿಲ್ಲ). ಆ ವರ್ತಕರು ಯಾಕೋಬನನ್ನು ಐಗುಪ್ತಕ್ಕೆ ತಕ್ಕೊಂಡು ಹೋದರು. ಅವರು ಹೋದ ಮೇಲೆ ರೂಬೆನನು ಕುಣಿಗೆ ತಿರಿಗಿ ಬಂದಾಗ, ಯಾಕೋಬನು ಅದರಲ್ಲಿ ಇರಲಿಲ್ಲ. ಅವನು ಅದಕ್ಕೆ ಬಹಳ ದುಃಖ ಮಾಡಿ—ನಾನು ಎಲ್ಲಿಗೆ ಹೋಗಲಿ ಎಂದು ಹೇಳಿದನು. ಸಹೋದರರು (ಒಂದು ಉಪಾಯ ಮಾಡಿ)

ಒಂದು ಮೇಕೆಯ ಮರಿಯನ್ನು ಕಾಯಿದರು; ಯೋಸೇಫನ ಅಂಗಿಯನ್ನು ಅದರ ರಕ್ತದಲ್ಲಿ ಅದ್ದಿದರು; ಮತ್ತು ಆ ಅಂಗಿಯನ್ನು ಹೀಗೆ ತಮ್ಮ ತಂದೆಗೆ ಕಳುಹಿಸಿದರು. ತಂದೆಯು ಅದನ್ನು ಗುರುತು ಹಿಡಿದು—ಇದು ನನ್ನ ಮಗನ ಅಂಗಿ, ದುಷ್ಟ ಮೃಗವು ಅವನನ್ನು ತಿಂದು ಬಿಟ್ಟಿತು ಅಂದನು. ಯಾಕೋಬನು ತನ್ನ ಮಗನಿಗೋಸ್ಕರ ಬಹು ದಿವಸ ದುಃಖ ಪಟ್ಟನು. ಅವನ ಮಕ್ಕಳು ಅವನನ್ನು ಆದರಿಸುವದಕ್ಕೆ ನಿಂತು ಕಾಂದರು; ಆದರೆ ಅವನು ಆದರಣೆ ಹೊಂದಲಾಲ್ಲದೆ, ಅವನಿಗೋಸ್ಕರ ಅತ್ತನು. ಆ ವರ್ತಕರು ಯೋಸೇಫನನ್ನು ಐಗುಪ್ತದಲ್ಲಿ ಪೋಟಿಫರನೆಂಬವನಿಗೆ ಮಾರಿದರು.

ಹೀಗಿರುವದರಿಂದ ಸಕಲ ಕೆಟ್ಟತನವನ್ನೂ ಸಕಲ ಮೋಸವನ್ನೂ ಕಪಟಗಳನ್ನೂ ಹೊಟ್ಟಿಕಿಚ್ಚುಗಳನ್ನೂ ಸಕಲ ನಿಂದೆಗಳನ್ನೂ ತೆಗೆದು ಹಾಕಿರಿ (೧ಪೇತ್ರ. ೨, ೧).

---

೧೧ ಯೋಸೇಫನು ಶೆರೆಮನೆಯಲ್ಲಿ ಇದ್ದದ್ದು

ಯೋಸೇಫನು ಪೋಟಿಫರನ ಸೇವಕನಾದನು. ಕರ್ತನು ಅವನ ಸಂಗಡ ಇದ್ದನು; ಹೀಗೆ ಅವನು ಸಫಲ ಹೊಂದುವ ಮನುಷ್ಯನಾಗಿದ್ದನು. ಅದಕ್ಕಾಗಿ ಅವನು ಪೋಟಿಫರನ ದೃಷ್ಟಿಯಲ್ಲಿ ದಯ ಹೊಂದಿದನು. ಮತ್ತು ಪೋಟಿಫರನು ತನಗಿದ್ದದನ್ನೆಲ್ಲಾ ಅವನ ಕೈಯಲ್ಲಿ ಒಪ್ಪಿಸಿದನು. ಯೋಸೇಫನು ಒಳ್ಳೇ ರೂಪದವನಾಗಿದ್ದನು. ಆದರೆ ಪೋಟಿಫರನ ಹೆಂಡತಿ ಕೆಟ್ಟವಳಾಗಿದ್ದಳು; ಅವಳು ಯೋಸೇಫನ ಸಂಗಡ ಕೆಟ್ಟ ಕೆಲಸ ಮಾಡಲಿಕ್ಕೆ ಮನಸ್ಸು ಮಾಡಿದಳು. ಆದರೆ ಯೋಸೇಫನು ಉತ್ತರ ಕೊಟ್ಟು—ನಾನು ಈ ದೊಡ್ಡ ಕೇಡನ್ನು ಮಾಡಿ, ದೇವರಿಗೆ ಪಾಪ ಮಾಡುವದು ಹ್ಯಾಗೆ ಅಂದನು. ಆ ಹೆಂಗಸು ಯೋಸೇಫನನ್ನು ಪಾಪದಲ್ಲಿ ಹಾಕಲಿಕ್ಕೆ ದಿನಾಲು ಪ್ರಯತ್ನ ಮಾಡಿದಳು; ಆದರೆ ಯೋಸೇಫನು ವಶವಾಗಲಿ

ಲ್ಲ. ಹೀಗಿರುವಾಗ ಯಾಕೋಬನು ಒಂದು ದಿವಸದಲ್ಲಿ ತನ್ನ ಕೆಲಸ ಮಾಡುವಾಗ, ಅವಳು ಯಾಕೋಬನ ವಸ್ತ್ರವನ್ನು ಹಿಡುಕಾಂಡಳು. ಆದರೆ ಯಾಕೋಬನು ತನ್ನ ವಸ್ತ್ರವನ್ನು ಅವಳ ಕೈಯಲ್ಲಿ ಬಿಟ್ಟು, ಹಾರಗೆ ಓಡಿ ಹಾದನು. ಆ ಹೆಂಗಸಿನ ಗಂಡನಾದ ಪಾಟಿಫರನು ಮನೆಗೆ ಬಂದ ಮೇಲೆ, ಅವಳು ಯಾಕೋಬನ ಮೇಲೆ ದೂರು ಹೇಳಿದಳು. ಯಾಕೋಬನು ನನ್ನನ್ನು ಕೆಡಿಸಲಿಕ್ಕೆ ಬಂದನು ಅಂದಳು. ಪಾಟಿಫರನು ಕಾಪ ಮಾಡಿ, ಯಾಕೋಬನನ್ನು ಶೆರೆಮನೆಗೆ ಹಾಕಿದನು. ಅಲ್ಲಿ ಅವನ ಕಾಲುಗಳಿಗೆ ಸಂಕಾಲೆ ಹಾಕಿದರು. ಆದರೆ ಕರ್ತನು ಯಾಕೋಬನ ಸಂಗಡ ಇದ್ದನು. ಹೀಗೆ ಶೆರೆಮನೆಯ ಯಜಮಾನನು ಯಾಕೋಬನಿಗೆ ದಯ ತಾರಿಸಿದನು. ಅವನು ಶೆರೆಮನೆಯಲ್ಲಿ ಕಟ್ಟಿ ಹಾಕಿರುವವರೆಲ್ಲರನ್ನು ಯಾಕೋಬನ ಕೈಯಲ್ಲಿ ಕಾಟ್ಟಿನು. ಆ ಸಮಯದಲ್ಲಿ ಐಗುಪ್ತದ ಅರಸನ ಪಾನದಾಯಕನೂ ರಾಟ್ಟಿಗಾರನೂ ಶೆರೆಮನೆಯಲ್ಲಿ ಬಿದ್ದರು. ಅವರಿಬ್ಬರು ಒಂದೇ ರಾತ್ರಿಯಲ್ಲಿ ಕನಸು ಕಂಡರು. ಪಾನದಾಯಕನು ತನ್ನ ಕನಸನ್ನು ಯಾಕೋಬನಿಗೆ ತಿಳಿಸಿದನು. ಯಾಕೋಬನು ಅವನಿಗೆ ಅದರ ಅರ್ಥವನ್ನು ಹೇಳಿ—ಇನ್ನು ಮೂರು ದಿವಸಗಳಾದ ಮೇಲೆ ಫರಾನನು ನಿನ್ನ ತಲೆಯನ್ನು ಎತ್ತಿ, ನಿನ್ನನ್ನು ತಿರಿಗಿ ನಿನ್ನ ಸ್ಥಳದಲ್ಲಿ ಇಡುವನು. ನೀನು ಅವನ ಪಾನದಾಯಕನಾಗಿರುವಿ; ಆವಾಗ ನೀನು ನನ್ನನ್ನು ಜ್ಞಾಪಕ ಮಾಡಿಕಾ, ಫರಾನನ ಬಳಿಯಲ್ಲಿ ನನ್ನನ್ನು ತಿಳಿಯ ಮಾಡು ಅಂದನು. ತರುವಾಯ ರಾಟ್ಟಿಗಾರನು ತನ್ನ ಕನಸನ್ನು ಯಾಕೋಬನಿಗೆ ತಿಳಿಸಿದನು. ಅವನಿಗೂ ಯಾಕೋಬನು ಅರ್ಥ ಹೇಳಿ—ಇನ್ನು ಮೂರು ದಿವಸಗಳಾದ ಮೇಲೆ ಫರಾನನು ನಿನ್ನನ್ನು ಮರದ ಮೇಲೆ ತೂಗ ಹಾಕುವನು ಅಂದನು. ಯಾಕೋಬನು ಹೇಳಿದ ಪ್ರಕಾರ ಇಬ್ಬರಿಗೆ ಆಯಿತು. ಆದರೆ ಪಾನದಾಯಕನು ಯಾಕೋಬನನ್ನು ಜ್ಞಾಪಕ ಮಾಡಿ ಕಾಳ್ಳಲಿಲ್ಲ; ಫರಾನನ ಬಳಿಯಲ್ಲಿ ಅವನನ್ನು ತಿಳಿಯ ಮಾಡಲಿಲ್ಲ. ಹೀಗೆ ಯಾಕೋಬನು ಇನ್ನು ಬಹಳ ಸಮಯ ಶೆರೆಮನೆಯಲ್ಲಿ ಇರ ಬೇಕಾಯಿತು.

ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳು ಅಲ್ಲ, ಮತ್ತು ನಿಮ್ಮ ಮಾರ್ಗಗಳು ನನ್ನ ಮಾರ್ಗಗಳು ಅಲ್ಲ ಎಂದು ಕರ್ತನು ಹೇಳುತ್ತಾನೆ; ಯಾಕಂದರೆ ಆಕಾಶವು ಭೂಮಿಯ ಮೇಲೆ ಎಷ್ಟು ಉನ್ನತವಾ, ನನ್ನ ಮಾರ್ಗಗಳು ನಿಮ್ಮ ಮಾರ್ಗಗಳ ಮೇಲೆಯೂ ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳ ಮೇಲೆಯೂ ಅಷ್ಟು ಉನ್ನತವಾಗಿವೆ (ಯೆಶಾಯ. ೫೫, ೮.೯).

---

೧೨ ಯೋಸೇಫನಿಗೆ ಬಿಡುಗಡೆ ಆದದ್ದು

ಫರಾಸನಾದ ಫರಾನನು ಒಂದು ಕನಸು ಕಂಡನು; ಅದಕ್ಕಾಗಿ ಅವನು ಐಗುಪ್ತದ ಎಲ್ಲಾ ಜ್ಞಾನಿಗಳನ್ನು ಕರೇ ಕಳುಹಿಸಿ, ಅವರಿಗೆ ತನ್ನ ಕನಸನ್ನು ತಿಳಿಸಿದನು. ಆದರೆ ಅವುಗಳ ಅರ್ಥವನ್ನು ಫರಾನನಿಗೆ ಹೇಳುವವನ್ಯಾವನೂ ಇರಲಿಲ್ಲ. ಆಗ ಪಾನದಾಯಕನು ಫರಾನನಿಗೆ ಯಾಸೇಫನ ಸುದ್ದಿಯನ್ನು ಹೇಳಿದನು. ಅದಕ್ಕಾಗಿ ಫರಾನನು ಯಾಸೇಫನನ್ನು ಕರೇ ಕಳುಹಿಸಿದನು. ಅವನು ಯಾಸೇಫನಿಗೆ—ನೀನು ಕನಸಿನ ಅರ್ಥ ಹೇಳುತ್ತೀ ಎಂಬ ಸಮಾಚಾರವನ್ನು ಕೇಳಿದ್ದೇನೆ ಅಂದನು. ಯಾಸೇಫನು ಉತ್ತರ ಕಾಟ್ಟು—ಅದು ನನ್ನಿಂದಾಗದು, ದೇವರು ಫರಾನನ ಕ್ಷೇಮಕ್ಕೆ ಉತ್ತರ ಕಾಡುವನು ಅಂದನು. ಆಗ ಫರಾನನು ತನ್ನ ಕನಸನ್ನು ಯಾಸೇಫನಿಗೆ ತಿಳಿಸಿದನು. ಯಾಸೇಫನು ಅದರ ಅರ್ಥ ಹೇಳಿದನು—ಐಗುಪ್ತ ದೇಶದಲ್ಲೆಲ್ಲಾ ಮಹಾ ಸುಖಿಕ್ಷೆ ಇರುವ ಏಳು ವರುಷಗಳು ಬರುತ್ತವೆ; ಮತ್ತು ಅವುಗಳ ಹಿಂದೆ ಬರ ಉಳ್ಳ ಏಳು ವರುಷಗಳು ಬರುತ್ತವೆ; ಹೀಗಿರುವದರಿಂದ ಫರಾನನು ವಿಚಾರಕರನ್ನು ನೇಮಿಸಲಿ, ಅವರು ಬರುವ ಈ ಒಳ್ಳೇ ವರುಷಗಳ ಆಹಾರವನ್ನೆಲ್ಲಾ ಕೂಡಿಸಿ ಕಾಯಲಿ; ಆ ಆಹಾರ ಬರಲಿಕ್ಕಿರುವ ಬರದ ಏಳು ವರುಷಗಳಿಗಾಸ್ಕರ ದೇಶಕ್ಕೆ ಇರಲಿ ಅಂದನು. ಈ ಮಾತು ಫರಾನನಿಗೆ ಒಳ್ಳೇದೆಂದು ತಾಚಿತು. ಮತ್ತು ಅವನು ಯಾಸೇಫನನ್ನು ಐಗುಪ್ತ ದೇಶವೆಲ್ಲಾದರ ಮೇಲೆ ಇಟ್ಟನು. ಆಗ ಫರಾನನು

ಯಾಕೋಬನಿಗೆ ತನ್ನ ಕೈಯಾಳಿಗಿನ ಉಂಗರವನ್ನೂ ನಾರುಮಡಿಯ ವಸ್ತ್ರಗಳನ್ನೂ ಚಿನ್ನದ ಸರಪಣಿಯನ್ನೂ ಕಾಟ್ಟಿನು. ತನಗೆ ಇದ್ದ ಎರಡನೇ ರಥದ ಮೇಲೆಯೂ ಅವನನ್ನು ಏರಿಸಿದನು. ಐಗುಪ್ತ ದೇಶವು ಸುಭಿಕ್ಷೆಯ ಏಳು ವರುಷಗಳಲ್ಲಿ ರಾಶಿಯಾಗಿ ಫಲ ಕಾಟ್ಟಿತು. ಹೀಗಿರಲಾಗಿ ಯಾಕೋಬನು ಸಮುದ್ರದ ಮರಳಿನ ಹಾಗೆ ಬಹು ಹೆಚ್ಚಾಗಿರುವ ಧಾನ್ಯವನ್ನು ಕೂಡಿಸಿಟ್ಟಿನು. ಅದರ ಮೇಲೆ



ಬರದ ಏಳು ವರುಷಗಳು ಬಂದವು. ಆಗ ಜನರು ಫರಾಕೋನನ ಹತ್ತಿರ ಕೂಗಿ, ರಾಟ್ಟಿ ಬೇಡಿ ಕಾಂಡರು. ಫರಾಕೋನನು ಜನರನ್ನು ಯಾಕೋಬನ ಬಳಿಗೆ ಕಳುಹಿಸಿದನು. ಹೀಗೆ ಯಾಕೋಬನು ಜನರಿಗೆ ಧಾನ್ಯವನ್ನು ಮಾರಿದನು.

ಕರ್ತನು ದರಿದ್ರತ್ವ ಕಾಡುವವನೂ ಐಶ್ವರ್ಯ ಕಾಡುವವನೂ ತಗ್ಗಿಸುವವನೂ ಉನ್ನತ ಮಾಡುವವನೂ ಆಗಿದ್ದಾನೆ (೧ ಸಾಮುವೇಲ್. ೨, ೭).

---

೧೩ ಯೋಸೇಫನ ಸಹೋದರರು ಐಗುಪ್ತಕ್ಕೆ ಹೋದದ್ದು

ಯಾಕೋಬನೂ ಅವನ ಮಕ್ಕಳೂ ಕಾನಾನ್ ದೇಶದಲ್ಲಿ ವಾಸವಾಗಿದ್ದರು. ಅಲ್ಲಿಯೂ ಬರಗಾಲವಾಯಿತು. ಆದರೆ ಐಗುಪ್ತದ

ಲ್ಲಿ ಧಾನ್ಯ ಉಂಟೆಂದು, ಯಾಕಾೀಬನು ಕೇಳಿದನು. ಅದಕ್ಕಾಗಿ ಅ
ವನು ಹತ್ತು ಮಂದಿ ಮಕ್ಕಳನ್ನು ಧಾನ್ಯವನ್ನು ಕಾಂಡು ಕಾಳ್ಳಲಿಕ್ಕೆ
ಐಗುಪ್ತಕ್ಕೆ ಕಳುಹಿಸಿದನು. ಬೆನ್ಯಮೀನನೆಂಬ ಮಗನನ್ನು ಮಾತ್ರ ಅ
ವನ ಸಹಾೀದರರ ಸಂಗಡ ಕಳುಹಿಸಲಿಲ್ಲ. ಸಹಾೀದರರು ಯಾೀ
ಸೇಫನ ಹತ್ತರ ಬಂದು ಅವನಿಗೆ ಅಡ್ಡ ಬಿದ್ದರು. ಯಾೀಸೇಫನು



ತನ್ನ ಸಹಾೀದರರನ್ನು ತಿಳಿದಿದ್ದನು, ಆದರೆ ಅವರು ಅವನನ್ನು ತಿಳಿ
ಯಲಿಲ್ಲ. ಯಾೀಸೇಫನು ತನ್ನ ಸಹಾೀದರರಿಗೆ—ನೀವು ಚಾರರು,
ದೇಶದ ಬಡತನವನ್ನು ನಾೀಡ ಬಂದಿರಿ ಅಂದನು. ಅವರು ಅವನಿ
ಗೆ—ಅಲ್ಲ, ನಮ್ಮ ಸ್ವಾಮಿಯೇ, ನಿನ್ನ ದಾಸರು ಆಹಾರ ಕಾಂಡು
ಕಾಳ್ಳುವದಕ್ಕೆ ಬಂದಿದ್ದಾರೆ. ಹನ್ನೆರಡು ಮಂದಿಯಾದ ನಾವು ಒ
ಬ್ಬ ಮನುಷ್ಯನ ಮಕ್ಕಳು; ಚಿಕ್ಕವನು ಈಗ ನಮ್ಮ ತಂದೆಯ ಸಂಗಡ
ಇದ್ದಾನೆ, ಮತ್ತಾಬ್ಬನು ಇಲ್ಲವೆಂದು ಹೇಳಿದರು. ಆಗ ಯಾೀಸೇ
ಫನು ಅವರಿಗೆ—ನೀವು ಚಾರರೆಂದು ನಾನು ನಿಮಗೆ ಹೇಳಿದ ಮಾ
ತು ಇದೇ ಅಂದನು. ಹೀಗೆ ಅವರನ್ನು ಮೂರು ದಿನ ಕಾವಲಿಯ

ಲ್ಲಿ ಇಟ್ಟನು. ಅದರ ಮೇಲೆ ಯಾಕೋಬನು ಅವರಿಗೆ — ನಾನು ದೇವರಿಗೆ ಜಯ ಪಡುವವನಾಗಿದ್ದೇನೆ; ನಿಮ್ಮಲ್ಲಿ ಒಬ್ಬನು ಕಾವಲಿ ಮನೆಯಲ್ಲಿ ಕಟ್ಟಲ್ಪಡಲಿ, ಆದರೆ ನೀವು ನಿಮ್ಮ ಮನೆಯ ಅವಶ್ಯಕ್ಕೆ ಧಾನ್ಯವನ್ನು ತಕೊಂಡು ಹೋಗಿರಿ, ಮತ್ತು ನಿಮ್ಮ ತಮ್ಮನನ್ನು ನನ್ನ ಬಳಿಗೆ ಕರಕಾಂಡು ಬನ್ನಿರಿ ಅಂದನು. ಆಗಲವರು ತಮ್ಮೊಳಗೆ ಮಾತಾಡಿ ಕಾಂಡು — ನಿಶ್ಚಯವಾಗಿ ನಮ್ಮ ಸಹೋದರನಾದ ಯಾಕೋಬನಿಗಾಕ್ಕರ ನಮ್ಮ ಮೇಲೆ ಅಪರಾಧ ಉಂಟು; ಅವನು ನಮ್ಮನ್ನು ಬೇಡಿ ಕಾಂಡಾಗ, ಅವನ ಪ್ರಾಣಸಂಕಟವನ್ನು ನಾವಿ, ಆಲೈಸದೆ ಹೋದೆವು ಅಂದರು. ಯಾಕೋಬನು ಇದನ್ನು ಕೇಳುವಾಗ, ಅವರ ಕಡೆಯಿಂದ ತಾಲಗಿ ಹೋಗಿ, ಅತ್ತನು. ಮತ್ತು ಬಂದು, ಸಿಮೆಯಾನನನ್ನು ತೆಗದು, ಅವರ ಮುಂದೆ ಕಟ್ಟಿ ಹಾಕಿಸಿದನು. ಆ ಮೇಲೆ ಯಾಕೋಬನು ಮಿಕ್ಕಾದವರ ಚೀಲಗಳಲ್ಲಿ ಧಾನ್ಯ ತುಂಬಿಸಿದನು; ಒಬ್ಬಾಬ್ಬನ ಚೀಲದಲ್ಲಿ ಅವನವನ ಹಣವನ್ನು ಸಹ ತಿರಿಗಿ ಇಡ ಬೇಕೆಂದು ಆಜ್ಞಾಪಿಸಿದನು. ಹೀಗೆ ಅವರು ತಮ್ಮ ಊರಿಗೆ ಹೋಗಿ ಬಿಟ್ಟರು. ಅಲ್ಲಿ ಅವರು ತಮ್ಮ ತಂದೆಗೆ ತಮಗೆ ಸಂಭವಿಸಿದ್ದನ್ನೆಲ್ಲಾ ತಿಳಿಸಿದರು. ಅವರು ತಮ್ಮ ಚೀಲಗಳನ್ನು ಬರಿದು ಮಾಡುವಾಗ, ಅಗಾ, ಅವನವನ ಹಣದ ಗಂಟು ಅವನವನ ಚೀಲದಲ್ಲಿತ್ತು. ಅದನ್ನು ನಾವಿ, ಅವರೂ ಅವರ ತಂದೆಯೂ ಭಯ ಪಟ್ಟರು. ತಂದೆಯಾದ ಯಾಕಾಬನು ಅವರಿಗೆ — ಯಾಕೋಬನೂ ಇಲ್ಲ, ಸಿಮೆಯಾನನೂ ಇಲ್ಲ; ಬೆನ್ಯಾಮೀನನನ್ನು ಕರಕಾಂಡು ಹೋಗಲಿಕ್ಕಿದ್ದೀರಿ; ನನ್ನ ಮಗನು ನಿಮ್ಮ ಸಂಗಡ ಹೀಗ ಬಾರದು ಅಂದನು.

ನಿನ್ನ ದೇವರಾದ ಕರ್ತನಿಗೆ ವಿರೋಧವಾಗಿ ದ್ರೋಹ ಮಾಡಿದ್ದೀ ಎಂಬುವ ನಿನ್ನ ಅಕ್ರಮವನ್ನು ತಿಳುಕಾ ಮಾತ್ರ (ಯೆರೆಮಿ. ೩, ೧೩).

೧೪ ಯೋಸೇಫನ ಸಹೋದರರು ಎರಡನೇ ಸಾರಿ ಐಗುಪ್ತಕ್ಕೆ ಹೋದದ್ದು

ಐಗುಪ್ತದಿಂದ ತಂದ ಧಾನ್ಯವು ತೀರಿದ ಮೇಲೆ ಯಾಕಾೋಬನು ತ
ನ್ನ ಮಕ್ಕಳಿಗೆ—ತಿರಿಗಿ ಹಾೋಗಿ, ನಮಗೆ ಸ್ವಲ್ಪ ಆಹಾರ ಕಾಂಡು ಕಾ
ಳ್ಕಿರಿ ಅಂದನು. ಆಗ ಯೆಹೂದನು ತನ್ನ ತಂದೆಗೆ—ನೀನು ನಮ್ಮ
ತಮ್ಮನನ್ನು ನಮ್ಮ ಸಂಗಡ ಕಳುಹಿಸ ಬೇಕಾಗುತ್ತದೆ ಅಂದನು. ಇ
ದು ಯಾಕಾೋಬನಿಗೆ ದುಖ್ಖ ತಾೋಚಿತು. ಆದರೆ ಯೆಹೂದನು ಬೇ
ಡಿ ಕಾಂಡು—ನಾನು ಬೆನ್ಯಮೀನನನ್ನು ತಿರಿಗಿ ನಿನ್ನ ಬಳಿಗೆ ತರುವೆ
ನು, ನಾನು ಅವನಿಗಾೋಸ್ಕರ ಹಾಣೆಯಾಗಿರುವೆನು ಅಂದನು. ಆ
ಗ ಯಾಕಾೋಬನು ಬೆನ್ಯಮೀನನನ್ನು ಅವರಿಗೆ ಕಾಟ್ಟನು. ಹೀಗೆ ಅ
ವರು ಎದ್ದು, ಐಗುಪ್ತಕ್ಕೆ ಇಳಿದು ಹಾೋದರು. ಅಲ್ಲಿ ಅವರು ಯಾೋ
ಸೇಫನ ಉಗ್ರಾಣದವನ ಸಂಗಡ ಮಾತಾಡಿದರು. ತಮಗೆ ಮೊದ
ಲನೇ ಸಾರಿ ಹಿಂದೆ ಶಿಕ್ಕಿದ ಹಣವನ್ನೂ ಹಾಸ ಹಣವನ್ನೂ ಅವನಿಗೆ
ಕಾಡಲಿಕ್ಕೆ ಮನಸ್ಸು ಮಾಡಿದರು; ಆದರೆ ಉಗ್ರಾಣದವನು ತಕ್ಕಾಳ್ಳ
ಲಿಲ್ಲ. ಮತ್ತು ಅವನು ಸಿಮೆಯಾೋನನನ್ನು ಅವರ ಬಳಿಗೆ ಹಾರ
ಗೆ ತಕ್ಕಾಂಡು ಬಂದು, ಅವರನ್ನು ಯಾೋಸೇಫನ ಮನೆಗೆ ಕರಕಾಂಡು
ಹಾೋದನು. ಅಲ್ಲಿ ಅವರು ಯಾೋಸೇಫನ ಮುಂದೆ ಅಡ್ಡ ಬಿದ್ದರು.
ಯಾೋಸೇಫನು ಅವರ ಹತ್ತರ—ನಿಮ್ಮ ತಂದೆಗೆ ಕ್ಷೇಮ ಉಂಟಾೋ?



ಷನ್ನು ಬದುಕುತ್ತಾನಾ ಎಂದು ಕೇಳಿದನು. ಅವರು — ನಮ್ಮ ತಂದೆಗೆ ಕ್ಷೇಮ ಉಂಟು ಎಂದು ಹೇಳಿದರು. ಯಾಕೋಬನು ಬೆನ್ಯಾಮೀನನನ್ನು ನೋಡಿ, ಅವನಿಗೆ — ನನ್ನ ಮಗನೇ, ದೇವರು ನಿನಗೆ ದಯ ಮಾಡಲಿ ಅಂದನು. ಆಗ ಯಾಕೋಬನು ಬೇಗ ತನ್ನ ಕಾತಡಿಗೆ ಹಾಗಿ, ಅತ್ತನು. ಮತ್ತು ಮುಖವನ್ನು ತಾಳಕಾಂದ ಮೇಲೆ, ಅವನು ಹಾರಗೆ ಬಂದು, ಊಟಕ್ಕೆ ಕೂತು ಕಾಂಡನು. ಅವನ ಸಹೋದರರೂ ಊಟಕ್ಕೆ ಕೂತು ಕಾಂಡರು. ಮತ್ತು ಅವನ ಸಂಗಡ ಕುಡಿದು, ತೃಪ್ತರಾದರು.

ಇಗೋ, ಸಹೋದರರು ಒಂದೇಯಾಗಿ ವಾಸ ಮಾಡುವದು ಎಷ್ಟೋ ಒಳ್ಳೇದೂ, ಎಷ್ಟೋ ರಮ್ಯವಾದದ್ದೂ (ಕೀರ್ತ. ೧೩೩, ೧).

---

೧೫ ಯೋಸೇಫನು ತನ್ನನ್ನು ಸಹೋದರರಿಗೆ ತಿಳಿಸಿದ್ದು

ಊಟ ಆದ ಮೇಲೆ ಯಾಕೋಬನು ತನ್ನ ಉಗ್ರಾಣದವನಿಗೆ — ಈ ಮನುಷ್ಯರ ಚೀಲಗಳನ್ನು ಆಹಾರದಿಂದ ತುಂಬಿಸು. ಒಬ್ಬೊಬ್ಬನ ಹಣವನ್ನೂ ಅವನವನ ಚೀಲದ ಬಾಯಿಯಲ್ಲಿ ಹಾಕು; ಮತ್ತು ನನ್ನ ಬೆಳ್ಳಿಯ ಪಂಚಪಾತ್ರೆಯನ್ನು ಚಿಕ್ಕವನ ಚೀಲದಲ್ಲಿ ಇಡು ಅಂದನು. ಬೆಳಿಗ್ಗೆ ಅವರು ಪಟ್ಟಣವನ್ನು ಬಿಟ್ಟು ಹಾದರು. ಅವರು ಸ್ವಲ್ಪ ಹಾದ ಮೇಲೆ, ಉಗ್ರಾಣದವನು ಯಾಕೋಬನ ಅಪ್ಪಣೆಯ ಪ್ರಕಾರ ಅವರ ಹಿಂದೆ ಓಡಿ ಬಂದು — ನನ್ನ ಕರ್ತನ ಪಾತ್ರೆ ನಿಮ್ಮ ಹತ್ತರ ಉಂಟಲ್ಲವೋ ಅಂದನು. ಅವರು ಅಲ್ಲವೆಂದು ಉತ್ತರ ಕಾಟ್ಟರು; ಮತ್ತು ತಮ್ಮ ಚೀಲಗಳನ್ನು ತೆರದು ತೋರಿಸಿದರು. ಆಗ ಆ ಪಂಚಪಾತ್ರೆ ಬೆನ್ಯಾಮೀನನ ಚೀಲದಲ್ಲಿ ಶಿಕ್ಕಿತು. ಅದಕ್ಕೆ ಅವರೆಲ್ಲರಿಗೆ ಬಹಳ ದುಃಖವಾಯಿತು. ಅವರು ಯಾಕೋಬನ ಹತ್ತರ ಹಿಂದೆ ಬಂದು, ಅವನ ಮುಂಪೆ ನೆಲದಲ್ಲಿ ಬಿದ್ದರು. ಯಾಕೋಬನು ಅವರಿಗೆ — ಬೆನ್ಯಾಮೀನನ ಬಳಿಯಲ್ಲಿ ಆ ಪಂಚಪಾತ್ರೆ ಶಿಕ್ಕಿತು, ಅವನು ನನಗೆ ದಾಸನಾಗಿರ ಬೇಕು ಅಂದನು. ಆಗ ಯೆಹೂದನು

ಯಾಕೋಬನಿಗೆ ಬೇಪಿ ಕಾಂಡು—ನಮ್ಮ ತಂದೆ ಬೆನ್ಯಮೀನನನ್ನು ಬಹಳ ಪ್ರೀತಿ ಮಾಡುತ್ತಾನೆ, ಬೆನ್ಯಮೀನನು ಹಿಂದೆ ಬಾರದಿದ್ದರೆ ನಮ್ಮ ತಂದೆ ದುಖ್ಖದಿಂದ ಸತ್ತು ಹಾಗುವನು, ಆದದರಿಂದ ಬೆನ್ಯಮೀನನನ್ನು ಹಾಗಲಕ್ಕೆ ಬಿಡು, ನಾನು ನಿನಗೆ ದಾಸನಾಗಿರುವೆನು ಅಂದನು. ಅದರ ಮೇಲೆ ಯಾಕೋಬನು ಬಹಳ ಅತ್ತನು. ಮತ್ತು ತನ್ನ ಸಹಾದರರಿಗೆ—ನಾನು ಯಾಕೋಬನು, ನನ್ನ ತಂದೆ ಷನ್ನೂ ಬದುಕುತ್ತಾನಾ ಅಂದನು. ಅವನ ಸಹಾದರರು ತಲ್ಲಣಪಟ್ಟರು; ಅವನಿಗೆ ಉತ್ತರ ಕಾಡಲಾರದೆ ಹಾದರು. ಯಾಕೋಬನು ಅವರಿಗೆ ಹೇಳಿದ್ದು—ದಯ ಮಾಡಿ ನನ್ನ ಹತ್ತರ ಬನ್ನಿರಿ, ನಾನು ನಿಮ್ಮ ಸಹಾದರನಾದ ಯಾಕೋಬನು, ನೀವು ನನ್ನನ್ನು ಐಗುಪ್ತಕ್ಕೆ ಮಾರಿದಿರಿ, ಆದರೆ ಈಗ ಅದಕ್ಕಾಗಿಸ್ಕರ ವ್ಯಸನ ಪಡ ಬಾರದು, ಪ್ರಾಣಸಂರಕ್ಷಣೆಗಾಗಿಸ್ಕರ ದೇವರು ನನ್ನನ್ನು ನಿಮ್ಮ ಮುಂದೆ ಕಳುಹಿಸಿದ್ದಾನೆ. ನೀವು ಶೀಘ್ರವಾಗಿ ನನ್ನ ತಂದೆಯ ಬಳಿಗೆ ಹಾಗಿ, ಅವನಿಗೆ ಹೇಳ ಬೇಕಾದದ್ದೇನಂದರೆ—ದೇವರು ಯಾಕೋಬನನ್ನು ಐಗುಪ್ತಕ್ಕೆಲ್ಲಾ ಯಜಮಾನನಾಗಿ ಷಟ್ಟಿದ್ದಾನೆ, ನೀನೂ ನಿನ್ನ ಮಕ್ಕಳೂ ಅವನ ಹತ್ತರ ಬರ ಬೇಕು, ತಾನು ನಿನ್ನನ್ನೂ ಅವರನ್ನೂ ಸಂರಕ್ಷಿಸುವೆನೆಂದು ಯಾಕೋಬನು ಪೇಳುತ್ತಾನೆ. ಆಗ ಯಾಕೋಬನು ತಮ್ಮನಾದ ಬೆನ್ಯಮೀನನ ಕುತ್ತಿಗೆಯ ಮೇಲೆ ಬಿದ್ದು ಅತ್ತನು; ತನ್ನ ಸಹಾದರರೆಲ್ಲರಿಗೂ ಮುದ್ದಿಟ್ಟು ಅತ್ತನು. ಫರಾನನು ಈ ಸುದ್ದಿಯನ್ನು ಕೇಳಿ—ಯಾಕೋಬನ ಸಹಾದರರು ತಮ್ಮ ತಂದೆಯನ್ನೂ ಸಂಸಾರಗಳನ್ನೂ ತಕ್ಕಾಂಡು ಬರ ಬೇಕೆಂದು ಅಪ್ಪಣೆ ಕಾಟ್ಟನು. ಷದಕ್ಕೆ ಅವರಿಗೆ ಗಾಡಿಗಳನ್ನು ಕಾಡಿಸಿದನು. ಮತ್ತು ಯಾಕೋಬನು ಅವರೆಲ್ಲರಿಗೆ ಆಹಾರವನ್ನೂ ಬದಲು ವಸ್ತ್ರಗಳನ್ನೂ ಕಾಟ್ಟನು; ಆದರೆ ಬೆನ್ಯಮೀನನಿಗೆ ೩೦೦ರೂಪ್ಯಾಗಳನ್ನೂ ೫ ಬದಲು ವಸ್ತ್ರಗಳನ್ನೂ ಕಾಟ್ಟನು; ತನ್ನ ತಂದೆಗೆ ಡೇಶದ ಉತ್ತಮವಾದದ್ದನ್ನೂ, ಗಾಳಿ, ರಾಟ್ಟಿ, ಆಹಾರಗಳನ್ನೂ ಕಳುಹಿಸಿದನು. ಆಗಲವನು ತನ್ನ ಸಹಾದರರಿಗೆ ಅಪ್ಪಣೆ ಕಾಟ್ಟು—ಮಾರ್ಗದಲ್ಲಿ ಜಗಳ ಮಾ

ಡ ಬೇಡಿರಿ ಎಂದು ಹೇಳಿದನು. ಹೀಗೆ ಅವರು ತಂದೆಯಾದ ಯಾ
ಕಾಬನ ಬಳಿಗೆ ಬಂದರು. ಅವರು ತಂದೆಗೆ—ಯಾಸೇಫನು ಬ
ದುಕುತ್ತಾನೆ; ಅವನೇ ಐಗುಪ್ತ ದೇಶವನ್ನೆಲ್ಲಾ ಆಳುತ್ತಾನೆ ಅಂದ
ರು. ಯಾಕಾಬನು ಮೊದಲು ಅವರಿಗೆ ನಂಬಲಿಲ್ಲ. ಆದರೆ ಅವ
ನು ಯಾಸೇಫನು ಕಳುಹಿಸಿದ ಗಾಡಿಗಳನ್ನು ನಾಡುವಾಗ, ಅವ
ನು ಹೇಳಿದ್ದು—ಯಾಸೇಫನು ಇನ್ನೂ ಜೀವದಿಂದಿರುವದೇ ಸಾಕು,
ನಾನು ಹಾಗಿ ಅವನನ್ನು ನಾಡುವೆನು ಅಂದನು.

ಬಿಡಿಸಿರಿ ಆಗಲು ಬಿಡಿಸಲ್ಪಡುವಿರಿ (ಲೂಕ. ೬, ೩೭).

---

೧೬ ಯಾಕೋಬನೂ ಅವನ ಮಕ್ಕಳೂ ಐಗುಪ್ತಕ್ಕೆ ಹೋದದ್ದು

ಮತ್ತು ಇಸ್ರಾಯೇಲನ ಮಕ್ಕಳು ತಮ್ಮ ತಂದೆಯಾದ ಯಾಕಾಬನನ್ನೂ ತಮ್ಮ ಚಿಕ್ಕವರನ್ನೂ ತಮ್ಮ ಹೆಂಡರನ್ನೂ ಐಗುಪ್ತಕ್ಕೆ ಕರಕಾಂಡು ಹಾದರು. ಯಾಕಾಬನು ಯೆಹೂದನನ್ನು ಮುಂದಾಗಿ ಯಾಸೇಫನ ಬಳಿಗೆ ಕಳುಹಿಸಿದನು. ಯಾಸೇಫನು ತನ್ನ ತಂದೆಗೆ ಎದುರು ಹಾಗಿ, ಅವನ ಕುತ್ತಿಗೆಯ ಮೇಲೆ ಬಿದ್ದು, ಬಹಳವಾಗಿ



ಅತ್ತನು. ಯಾಕಾಬನು ಯಾಸೇಫನನ್ನು ನಾಡಿ ಬಹಳ ಸಂತಾಪ ಪಟ್ಟನು. ಮತ್ತು ಯಾಸೇಫನು ತನ್ನ ತಂದೆಯನ್ನು ಷ

ರಾೀನನ ಮುಂದೆ ನಿಲ್ಲಿಸಿದನು. ಯಾಕಾೀಬನು ಫರಾೀನನನ್ನು ಆ ಶೀರ್ವದಿಸಿದನು. ಆಗ ಯಾೀಸೇಫನು ತನ್ನ ತಂದೆಗೂ ತನ್ನ ಸಹಾೀ ದರರಿಗೂ ಐಗುಪ್ತ ದೇಶದ ಉತ್ತಮವಾದ ಶೀಮೆಯನ್ನು ಸ್ವಾಸ್ಥ್ಯ ವಾಗಿ ಕಾಟ್ಟನು; ಮತ್ತು ಅವನು ಅವರನ್ನು ಅಲ್ಲಿ ಸಂರಕ್ಷಣೆ ಮಾ ಡಿದನು. ಅವರ ಸಂಸಾರಗಳು ಬಹಳ ಹೆಚ್ಚಾದವು. ಯಾಕಾೀಬನು ಸಾಯುವದಕ್ಕಿದ್ದ ದಿನಗಳು ಸಮೀಪಿಸಿದಾಗ, ಯಾೀಸೇಫನು ತನ್ನ ೫ಬ್ಬರು ಮಕ್ಕಳನ್ನು ಅವನ ಬಳಿಗೆ ಕರಕಾಂಡು ಬಂದನು. ಯಾಕಾೀ ಬನು ಅವರಿಗೆ ಆಶೀರ್ವಾದ ಕಾಟ್ಟನು. ಮತ್ತು ಅವನು ತನ್ನ ಮ ಕ್ಕಳನ್ನೆಲ್ಲಾ ಕರೆದು, ಅವರನ್ನು ಆಶೀರ್ವದಿಸಿದನು. ಅಪ್ಪರಾಳಗೆ ಯಾಕಾೀಬನು ಹೇಳಿದ್ದು — ಕರ್ತನೇ, ನಿನ್ನ ರಕ್ಷಣೆಯನ್ನು ನಿರೀಕ್ಷಿ ಸಿದ್ದೇನೆ. ಹೀಗೆ ಅವನು ಸತ್ತು ಹಾೀದನು. ಯಾೀಸೇಫನು ಅ ತ್ತು, ಅವನಿಗೆ ಮುದ್ದಿಟ್ಟನು. ಮತ್ತು ಯಾೀಸೇಫನೂ ಅವನ ಸ ಹಾೀದರರೂ ತಮ್ಮ ತಂದೆಯನ್ನು ಕಾನಾನ್ ದೇಶಕ್ಕೆ ತಕ್ಕಾಂಡು ಹಾೀಗಿ, ಅಲ್ಲಿ ಹೂಳಿಟ್ಟರು. ಅದು ಆದ ಮೇಲೆ, ಐಗುಪ್ತಕ್ಕೆ ತಿ ರಿಗಿ ಬಂದರು. ತಂದೆ ತಮ್ಮ ಸಂಗಡ ೫ನ್ನು ೫ಲ್ಲದದರಿಂದ ಸಹಾೀ ದರರು ಯಾೀಸೇಫನಿಗೆ ಭಯ ಪಟ್ಟರು. ಅವರು ಯಾೀಸೇಫನಿಗೆ ನಮ್ಮ ಅಪರಾಧವನ್ನು ದಯ ಮಾಡಿ ಮನ್ನಿಸು ಎಂದು ಬೇಡಿ ಕಾಂ ಡರು. ಯಾೀಸೇಫನು ಅವರನ್ನು ಸಮಜಯಿಸಿದನು. ನೀವು ನನ ಗೆ ವಿರಾೀಧವಾಗಿ ಕೇಡನ್ನು ಆಲಾೀಚಿಸಿದಿರಿ, ಆದರೆ ದೇವರು ಮೇ ಲಿಗಾಗಿ ಆಲಾೀಚನೆ ಮಾಡಿದ್ದಾನೆ ಅಂದನು. ಹಾಗೆ ಯಾೀಸೇಫ ನು ತನ್ನ ತಂದೆಯ ಮನೆಯವರು ಸಹಿತವಾಗಿ ಐಗುಪ್ತದಲ್ಲಿ ವಾಸ ವಾಗಿದ್ದರು.

ಮುದಿ ಪ್ರಾಯದ ಪರ್ಯಂತರ ನಾನು ಇದ್ದೇನೆ; ನರೆಗೂದಲು ಬರುವ ಪ ರ್ಯಂತರ ನಾನು ನಿಮ್ಮನ್ನು ಉದ್ಧಾರ ಮಾಡುತ್ತೇನೆ; ನಾನೇ ನಿಮ್ಮನ್ನು ಉಂ ಟು ಮಾಡಿದ್ದೇನೆ, ಮತ್ತು ಹಾರುತ್ತೇನೆ; ನಾನು ಉದ್ಧಾರ ಮಾಡುತ್ತೇನೆ, ತಪ್ಪಿ ಸುತ್ತೇನೆ (ಯೆಶಾಯ. ೪೬, ೪).

೧೭ ಕೂಸು ಆದ ಮೋಶೆ

ಯಾಕೋಬನು ಮುದುಕನಾಗಿ ಸತ್ತು ಹಾದನು. ಆದರೆ ಇ
ಸ್ರಾಯೇಲನ ಮಕ್ಕಳು ಎಂಬ ಹೆಸರನ್ನು ಹಾಂದಿದ ಯಾಕಾಬನ
ಸಂತಾನ ಅತ್ಯಧಿಕವಾಗಿ ಹೆಚ್ಚಿ ಬಲಗಾಂಡರು. ಆಗ ಯಾಕೋಬನ
ನ್ನು ಅರಿಯದ ಹಾಸ ಅರಸನು ಐಗುಪ್ತದಲ್ಲಿ ಎದ್ದನು. ಇವನು
ಇಸ್ರಾಯೇಲನ ಮಕ್ಕಳನ್ನು ಬಹಳ ಶ್ರಮೆ ಪಡಿಸಿದನು; ಅವರ ಗಂ
ಡು ಮಕ್ಕಳನ್ನೆಲ್ಲಾ ನದಿಯಲ್ಲಿ ಹಾಕ ಬೇಕೆಂದು ಅಪ್ಪಣೆ ಕಾಟ್ಟನು.
ಆ ಸಮಯದಲ್ಲಿ ಒಬ್ಬ ಹೆಂಗಸು ಚಲ್ವಿಕೆಯುಳ್ಳ ಗಂಡು ಕೂಸನ್ನು
ಹೆತ್ತಳು. ಅವಳು ಅವನನ್ನು ಮೂರು ತಿಂಗಳು ಬಚ್ಚಿಟ್ಟಳು. ಅವ
ನನ್ನು ಇನ್ನು ಬಚ್ಚಿಡಲಾರದೆ ಇದ್ದಾಗ, ಅವಳು ಒಂದು ಪೆಟ್ಟಿಗೆಯ
ನ್ನು ತಕ್ಕಾಂಡಳು; ಕೂಸನ್ನು ಅದರಲ್ಲಿ ಇಟ್ಟು, ನದಿಯ ಅಂಚಿನಲ್ಲಿ
ಇರುವ ಹುಲ್ಲಿನಲ್ಲಿ ಮಡಗಿದಳು. ಅವನ ಅಕ್ಕ ದೂರದಲ್ಲಿ ನಿಂತು
ಕಾಂಡಳು. ಆಗ ಫರಾನನ ಮಗಳು ಮಿಂಯುವದಕ್ಕೆ ಬಂದಳು.
ಅವಳು ಪೆಟ್ಟಿಗೆಯನ್ನು ನಾೀಡಿ, ಅದನ್ನು ತೆಗಿಸಿದಳು. ಕೂಸನ್ನು ಅ
ದರಾಳಗೆ ನಾೀಡಿದಳು; ಅಗಾೀ, ಕೂಸು ಅಳುತ್ತಿತ್ತು. ಅವಳು ಅ



ದರ ಮೇಲೆ ಅಂತಃಕರಣ ಪಟ್ಟಳು, ಮತ್ತು ಕೂಸಿನ ತಾಯಿಯನ್ನು
ಕರಿಸಿ, ಕೂಸನ್ನು ಸಾಕಿಸಿದಳು. ಈ ಕೂಸಿನ ಹೆಸರು ಮೋಶೆ.

ಕರ್ತನು ಕುಗ್ಗಿದವನಿಗೆ ದುರ್ಗವು, ಇಕ್ಕಟ್ಟಿನ ಕಾಲಗಳಲ್ಲಿ ದುರ್ಗವಾಗಿ ಇರುವನು (ಕೀರ್ತ. ೯, ೯).

---

೧೪ ಐಗುಪ್ತದಲ್ಲಿ ಆದ ಹತ್ತು ಉಪದ್ರವಗಳು

ಮೋಶೆ ದಾಡ್ಡವನಾದನು. ಆಗ ಅವನು ತನ್ನ ಸಹೋದರರಾದ ಇಸ್ರಾಯೇಲ್ಯರ ಬಳಿಗೆ ಹಾರಗೆ ಹೋದನು. ಆ ದಿವಸದಲ್ಲಿ ಐಗುಪ್ತ್ಯನಾದ ಒಬ್ಬ ಮನುಷ್ಯನು ಒಬ್ಬ ಇಸ್ರಾಯೇಲ್ಯನನ್ನು ಹೊಡೆದು ಹಾಕಿದನು. ಅದಕ್ಕಾಗಿ ಮೋಶೆ ಐಗುಪ್ತ್ಯನನ್ನು ಹೊಡೆದು ಹಾಕಿದನು. ಫರಾೋನನು ಆ ಮಾತನ್ನು ಕೇಳಿದಾಗ, ಮೋಶೆಯನ್ನು ಕೊಂದು ಹಾಕುವದಕ್ಕೆ ಹುಡುಕಿದನು. ಆದರೆ ಮೋಶೆಯು ಮಿದ್ಯಾನ್ ದೇಶಕ್ಕೆ ಓಡಿ ಹೋದನು. ಅಲ್ಲಿ ಅವನು ಯಾಜಕನಾದ ಏಥ್ರೋನನ ಹತ್ತರ ವಾಸ ಮಾಡಿದನು. ಇವನ ಮಂದೆಯನ್ನು ಮೋಶೆ ಮೇಯಿಸುತ್ತಿದ್ದನು. ಒಂದು ದಿನದಲ್ಲಿ ಅವನು ಮಂದೆಯನ್ನು ಹೋರೇಬೆಂಬ ದೇವಗಿರಿಗೆ ತಕ್ಕೊಂಡು ಹೋದನು. ಆಗ ದೇವರ ದೂತನು ಪೊದೆಯೊಳಗಿಂದ ಅಗ್ನಿಜ್ವಾಲೆಯಲ್ಲಿ ಅವನಿಗೆ ಕಾಣಿಸಿಕೊಂಡನು. ದೇವರು ಪೊದೆಯೊಳಗಿಂದ ಅವನಿಗೆ—ಮೋಶೆಯೇ, ಮೋಶೆಯೇ ಎಂದು ಕರೆದನು. ಮತ್ತು ಅವನಿಗೆ ಹೇಳಿದ್ದು—ಐಗುಪ್ತದಲ್ಲಿರುವ ನನ್ನ ಜನರ ದೀನ ಸ್ಥಿತಿಯನ್ನು ಕಂಡೇ ಕಂಡಿದ್ದೇನೆ; ಅವರನ್ನು ತಪ್ಪಿಸಲಿಕ್ಕೆ ಇಳಿದು ಬಂದಿದ್ದೇನೆ; ಹಾಗಾದರೆ ಈಗ ಹೋಗು; ಫರಾೋನನ ಬಳಿಗೆ ನಿನ್ನನ್ನು ಕಳುಹಿಸುತ್ತೇನೆ; ನೀನು ಇಸ್ರಾಯೇಲನ ಮಕ್ಕಳಾದ ನನ್ನ ಜನರನ್ನು ಐಗುಪ್ತದೊಳಗಿಂದ ಹೊರಗೆ ಬರ ಮಾಡ ಬೇಕು; ನಾನು ನಿನ್ನ ಸಂಗಡಲಿರುವೆನು. ಹೀಗೆ ಮೋಶೆಯೂ ಅವನ ಅಂಣನಾದ ಆರೋನನೂ ಫರಾೋನನ ಬಳಿಗೆ ಹೋದರು. ಅವರು ಫರಾೋನನಿಗೆ ಹೇಳಿದ್ದು—ಇಸ್ರಾಯೇಲ್ಯರನ್ನು ಅರಣ್ಯದಲ್ಲಿ ಹಬ್ಬ ಆಚರಿಸುವದಕ್ಕೆ ಕಳುಹಿಸ ಬೇಕೆಂದು ಕರ್ತನು* ಹೇಳುತ್ತಾನೆ. ಆದರೆ ಫರಾೋನನು—ಇಸ್ರಾಯೇಲನ್ನು ನಾನು ಕಳು

ಹಿಸುವದಿಲ್ಲ ಅಂದನು. ಅದಕ್ಕಾಗಿ ದೇವರು ಫರಾೀನನಿಗೂ ಐಗುಪ್ಯರಿಗೂ ದಾಡ್ಡ ಉಪದ್ರಗಳನ್ನು ಕಳುಹಿಸಿದನು, ಯಾವವಂದರೆ—

೧. ನೀರು ರಕ್ತವಾಯಿತು.

೨. ಕಪ್ಪೆಗಳು ಐಗುಪ್ತ ದೇಶವನ್ನು ಮುಚ್ಚಿದವು.

೩. ಸಮಸ್ತ ಐಗುಪ್ತ ದೇಶದಲ್ಲಿ ಭೂಮಿಯ ಧೂಳೆಲ್ಲಾ ಹೇನಾಯಿತು.

೪. ನಾಣಿಗಳಿಂದ ದೇಶವು ಕೆಟ್ಟಿತು.

೫. ಕುದುರೆಗಳೂ ಕತ್ತೆಗಳೂ ಒಂಟೆಗಳೂ ದನಗಳೂ ಕುರಿಗಳೂ ಮಹಾ ಕಠಿಣವಾದ ವ್ಯಾಧಿಯಿಂದ ಸತ್ತು ಹಾೀದವು.

೬. ಮನುಷ್ಯರಲ್ಲಿಯೂ ಮೃಗಗಳಲ್ಲಿಯೂ ವಿಸ್ತರಿಸುವ ಬಾಕ್ಕಿಗಳಾಗಿರುವ ಹುಣ್ಣಾಯಿತು.



೭. ಕಲ್ಲುಮಳೆ ಬಂತು.

೮. ಮಿಡಿತೆಗಳು ಐಗುಪ್ತದ ಎಲ್ಲಾ ಮೇರೆಗಳಲ್ಲಿ ಬಂದು, ಎಲ್ಲಾ ಹಸುರು ಗಿಡಗಳನ್ನೂ ಫಲಗಳನ್ನೂ ತಿಂದು ಬಿಟ್ಟವು.

೯. ಮೂರು ದಿವಸ ಗಾಢ ಕತ್ತಲಾಯಿತು.

ಆದರೂ ಕರ್ತನು ಫರಾೋನನ ಹೃದಯವನ್ನು ಕಲಿಗೆ ಮಾಡಿದ್ದರಿಂದ, ಅವನು ಇಸ್ರಾಯೇಲ್ಯರನ್ನು ಕಳುಹಿಸಲಾಲ್ಲದೆ ಇದ್ದನು. ಆದಕ್ಕಾಗಿ ಕರ್ತನು ಇನ್ನು ಒಂದೇ ಬಾಧೆಯನ್ನು ಐಗುಪ್ತದ ಮೇಲೆ ಬರ ಮಾಡಿದನು.

೧೦. ಕರ್ತನು ಐಗುಪ್ಯರ ಚಾಚ್ಚಲ ಮಕ್ಕಳನ್ನೂ ಮತ್ತು ಪಶುಗಳಲ್ಲಿ ಚಾಚ್ಚಲಾದದ್ದೆಲ್ಲವನ್ನೂ ಹಾಡೆದನು. ಆಗ ಫರಾೋನನು ಇಸ್ರಾಯೇಲ್ಯರನ್ನು ಹಾೀಗ ಬಿಟ್ಟನು.

ಕರ್ತನು ನನಗೆ ಇದ್ದಾನೆ, ಭಯ ಪಡೆನು; ಮನುಷ್ಯನು ನನಗೆ ಏನು ಮಾಡುವನು (ಕೀರ್ತ. ೧೧೮, ೬).

---

೧೫ ಇಸ್ರಾಯೇಲ್ಯರು ಅರಣ್ಯದಲ್ಲಿ ಇದ್ದದ್ದು

ಕರ್ತನು ಇಸ್ರಾಯೇಲನ ಮಕ್ಕಳನ್ನು ಐಗುಪ್ತ ದೇಶದಾಳಗಿಂದ ಹಾರಗೆ ಬರ ಮಾಡಿದನು. ಅವರು ಕೆಂಪು ಸಮುದ್ರದ ತೀರಕ್ಕೆ ಶೇರಿದರು. ಆಗ ಕರ್ತನು ಸಮುದ್ರದ ನೀರನ್ನು ಚಾಗ ಮಾಡಿದನು. ಹೀಗೆ ಇಸ್ರಾಯೇಲನ ಮಕ್ಕಳು ಸಮುದ್ರದ ಮಧ್ಯದಲ್ಲಿ ಒಣಗಿದ ನೆಲದ ಮೇಲೆ ಹಾೀಗಿ ಬಿಟ್ಟರು. ಐಗುಪ್ಯರು ಇಸ್ರಾಯೇಲ್ಯರನ್ನು ತಿರಿಗಿ ತಮ್ಮ ದೇಶಕ್ಕೆ ಕರಕಾಂಡು ಬರ ಬೇಕೆಂದು ಮನಸ್ಸು ಮಾಡಿದರು. ಅದಕ್ಕಾಗಿ ಅವರು ಇಸ್ರಾಯೇಲ್ಯರನ್ನು ಹಿಂದಟ್ಟಿದರು. ಅವರ ಹಿಂದೆ ಸಮುದ್ರದ ಮಧ್ಯದಲ್ಲಿ ಶೇರಿದರು; ಆದರೆ ನೀರು ಅವರ ಮೇಲೆ ಬಲವಾಗಿ ತಿರಿಗಿ ಬಂತು. ಫರಾೋನನೂ ಎಲ್ಲಾ ಐಗುಪ್ಯರೂ ಮುಣುಗಿ ಹಾೀ



ದರು. ಈ ಪ್ರಕಾರ ಕರ್ತನು ಇಸ್ರಯೇಲ್ಯರನ್ನು ಐಗುಪ್ತ್ಯರ ಕೈಗೆ ತ
ಪ್ಪಿಸಿದನು. ಅದನ್ನು ನೋಡಿ, ಇಸ್ರಯೇಲ್ ಜನರು ಕರ್ತನಿಗೆ ಭ
ಯ ಪಟ್ಟು, ಅವನಲ್ಲಿ ವಿಶ್ವಾಸವಿಟ್ಟರು. ಮತ್ತು ಮೋಶೆಯೂ ಇ
ಸ್ರಯೇಲನ ಮಕ್ಕಳೂ ಒಂದು ಹಾಡನ್ನು ಕರ್ತನಿಗೆ ಹಾಡಿದರು.
ಅದರ ಮೇಲೆ ಮೋಶೆ ಇಸ್ರಯೇಲ್ಯರನ್ನು ಆಪಿನ ಸಮುದ್ರದ ಕಡೆ
ಯಿಂದ ಹೊರಡ ಮಾಡಿದನು. ಅವರು ಅರಣ್ಯಕ್ಕೆ ಹೋದರು. ಅ
ಲ್ಲಿ ಅವರಿಗೆ ಮಾಂಸವೂ ರೊಟ್ಟಿಯೂ ಶಿಕ್ಕಲಿಲ್ಲ; ಅದಕ್ಕಾಗಿ ಅವ
ರು ಗುಣುಗುಟ್ಟಿದರು; ಕರ್ತನು ಅವರ ಗುಣುಗುಟ್ಟುಗಳನ್ನು ಕೇಳಿ
ದನು. ಮತ್ತು ಅವನು ಮೋಶೆಗೆ ಹೇಳಿದ್ದು — ಸಾಯಂಕಾಲದಲ್ಲಿ
ಮಾಂಸವನ್ನು ಉಣ್ಣುವಿರಿ, ಬೆಳಿಗ್ಗೆ ರೊಟ್ಟಿಯಿಂದ ತೃಪ್ತಿಯಾಗುವಿ
ರಿ. ಹೀಗೆ ಸಾಯಂಕಾಲದಲ್ಲಿ ಲಾವಕ್ಕಿಗಳು ಅವರ ದಂಡನ್ನು ಮು



ಚ್ಚಿದವು; ಬೆಳಿಗ್ಗೆ ಮನ್ನವೆಂಬ ರೊಟ್ಟಿ ದಂಡಿನ ಸುತ್ತಲು ಬಿತ್ತು.
ಅದನ್ನು ಅವರು ಕೂಡಿಸಿ ತಿಂದರು. ಇಸ್ರಯೇಲ್ಯರು ಮತ್ತೊಂದು



ದಿಕ್ಕಿಗೆ ಹಾಗುವಾಗ, ಅವರಿಗೆ ನೀರು ಇರಲಿಲ್ಲ. ಆದಕಾರಣ ಜನರು ಮೋಶೆಯ ಸಂಗಡ ವಿವಾದ ಮಾಡಿದರು. ಮೋಶೆಯು ದುಃಖಪಟ್ಟು, ಕರ್ತನಿಗೆ ಮೊರೆ ಇಟ್ಟನು. ಕರ್ತನು ಮೋಶೆಗೆ—ನೀನು ಬಂಡೆಯನ್ನು ಹಾಡೆ; ಅದರಿಂದ ನೀರು ಹಾರಗೆ ಬರುವದು ಅಂದನು. ಮೋಶೆಯು ಹಾಗೆ ಮಾಡಿದನು. ಆಗ ಬಂಡೆಯಿಂದ ನೀರು ಹಾರಗೆ ಬಂತು, ಮತ್ತು ಜನರು ಕುಡಿದರು.



ಏನು ಉಣ್ಣುವ, ಇಲ್ಲವೆ ಏನು ಕುಡಿಯುವ, ಇಲ್ಲವೆ ಏನು ಹೊದ್ದು ಕೊಳ್ಳುವ ಎಂದು, ಚಿಂತೆ ಪಡ ಬೇಡಿರಿ; ಯಾಕಂದರೆ ಇವುಗಳನ್ನೆಲ್ಲಾ ಜನಾಂಗಗಳವರು ಹುಡುಕುತ್ತಾರೆ (ಮತ್ತಾಯ. ೬, ೩೧. ೩೨).

---

೨೦ ದೇವರ ಹತ್ತು ಆಜ್ಞೆಗಳು

ಇಸ್ರಯೇಲ್ಯರು ಅರಣ್ಯದಲ್ಲಿ ಪ್ರಯಾಣ ಮಾಡಿ, ಸೀನಾಯಿ ಪರ್ವತದ ಹತ್ತರ ಬಂದರು. ಅಲ್ಲಿ ಇಳುಕಾಂದರು. ಆದರೆ ಮೋಶೆಯು ದೇವರ ಸನ್ನಿಧಿಗೆ ಏರಿ ಹಾದನು. ಕರ್ತನು ಆ ಪರ್ವತಕ್ಕೆ ಇಳಿದು ಬಂದನು. ಬೆಟ್ಟದ ಮೇಲೆ ಗುಡುಗುಗಳೂ ಮಿಂಚುಗಳೂ

ಕತ್ತಲಾದ ಮೇಘವೂ ಉಂಟಾಯಿತು. ಬಹು ಬಲವಾದ ತುತೂರಿಯ ಶಬ್ದ ಆಯಿತು. ಬೆಟ್ಟವೆಲ್ಲಾ ಹಾಗೆ ಹಾಯುತ್ತಾ, ಬಹಳವಾಗಿ ನಡುಗುತ್ತಾ ಇತ್ತು. ಆಗ ಕರ್ತನು ಹೇಳಿದ್ದೇನಂದರೆ—



೧. ನಿನ್ನನ್ನು ಐಗುಪ್ತ ದೇಶದಾಳಗಿಂದ ದಾಸತ್ವದ ಮನೆಯಿಂದ ಹಾರಗೆ ಬರ ಮಾಡಿದ ನಿನ್ನ ದೇವರಾದ ಯೆಹೋವ ನಾನೇ, ನನ್ನ ಮುಂದೆ ನಿನಗೆ ಬೇರೆ ದೇವರುಗಳು ಇರ ಬಾರದು.

೨. ವಿಗ್ರಹವನ್ನೂ ಯಾವ ರೂಪವನ್ನೂ ನಿನಗೆ ಮಾಡಿ ಕೊಳ್ಳ ಬೇಡ; ಅವುಗಳಿಗೆ ಅಡ್ಡ ಬೀಳಲೂ ಸೇವಿಸಲೂ ಬೇಡ.

೩. ನಿನ್ನ ದೇವರಾದ ಯೆಹೋವನ ಹೆಸರನ್ನು ವ್ಯರ್ಥವಾಗಿ ಎತ್ತ ಬೇಡ.

೪. ಸಬ್ಬತ್ ದಿವಸವನ್ನು ಪರಿಶುದ್ಧ ಮಾಡುವ ಹಾಗೆ ಜ್ಞಾಪಕ ಮಾಡಿಕೋ.

೫. ನಿನ್ನ ತಂದೆಯನ್ನೂ ತಾಯಿಯನ್ನೂ ಸನ್ಮಾನಿಸು.

೬. ಕೊಲ್ಲ ಬೇಡ.

೭. ವ್ಯಭಿಚಾರ ಮಾಡ ಬೇಡ.

೮. ಕದಿಯ ಬೇಡ.

೯. ನಿನ್ನ ನೆರೆಯವನಿಗೆ ವಿರೋಧವಾಗಿ ಅಪಸಾಕ್ಷಿ ಹೇಳ ಬೇಡ.

೧೦. ನಿನ್ನ ನೆರೆಯವನಿಗೆ ಇರುವ ಯಾವದನ್ನಾದರೂ ಆಶಿಸ ಬೇಡ.

ಈ ಹತ್ತು ಆಜ್ಞೆಗಳನ್ನು ದೇವರು ಎರಡು ಕಲ್ಲಿನ ಹಲಿಗೆಗಳ ಮೇಲೆ ಬರೆದು, ಮೋಶೆಗೆ ಕಾಟ್ಟನು.

ನೀವು ಇವುಗಳನ್ನು ತಿಳಿದು, ಇವುಗಳನ್ನು ಮಾಡಿದರೆ, ಭಾಗ್ಯವಂತರಾಗಿದ್ದೀರಿ (ಯೋಹಾ. ೧೩, ೧೭).

---

೨೧ ಚಿನ್ನದ ಕರು

ಮೋಶೆಯು ಬೆಟ್ಟದಿಂದ ಇಳಿಯುವದರಲ್ಲಿ ತಡವಾದದರಿಂದ, ಜನರು ಆರೋನನಿಗೆ ಹೇಳಿದ್ದು —ನೀನು ನಮ್ಮ ಮುಂದೆ ಹೋಗುವ ದೇವರುಗಳನ್ನು ಮಾಡು, ಯಾಕಂದರೆ ಮೋಶೆಗೆ ಏನಾಯಿತೆಂದು ನಮಗೆ ತಿಳಿಯದು. ಆಗ ಆರೋನನು ಅವರಿಗೆ —ನಿಮ್ಮ ಕಿವಿಗಳ ಮುರುಗಳನ್ನು ನನಗೆ ತನ್ನಿರಿ ಅಂದನು. ಹೀಗೆ ಜನರೆಲ್ಲಾ ತಮ್ಮ ಮುರುಗಳನ್ನು ಆರೋನನ ಬಳಿಗೆ ತಂದರು. ಅವನು ಅದರಿಂದ ಒಂದು ಕರುವನ್ನು ಮಾಡಿದನು. ಜನರು ಆ ಕರುವಿಗೆ ತಮ್ಮ ದೇವರೆಂದು ಹೇಳಿ, ಬಲಿಗಳನ್ನು ಅರ್ಪಿಸಿದರು. ಅಷ್ಟರಾಳಗೆ ಮೋಶೆ ಬೆಟ್ಟದಿಂದ ಇಳಿದು ಬಂದನು. ಅವನು ಕರುವನ್ನೂ ನಾಟ್ಯಗಳನ್ನೂ



ನಾೀಪಿದಾಗ ಕಾೀಪಗಾಂಡನು; ತನ್ನ ಕೈಯಲ್ಲಿ ಱದ್ದ ಹತ್ತು ಆಜ್ಞೆಗಳ ಎರಡು ಹಲಿಗೆಗಳನ್ನು ಬಿಸಾಟು ಒಡೆದು ಬಿಟ್ಟನು; ಅವರು ಮಾಡಿದ ಕರುವನ್ನು ಬೆಂಕಿಯಲ್ಲಿ ಸುಟ್ಟು ಬಿಟ್ಟನು; ಆರಾೀನನಿಗೆ ಗದ್ದಲ ಮಾಡಿದನು; ಮತ್ತು ಲೇವಿಯ ಮಕ್ಕಳಿಗೆ ತಮ್ಮ ತಮ್ಮ ಸಹಾೀದರರನ್ನೂ ನೆರೆಯವರನ್ನೂ ಈ ವಿಗ್ರಹಾರಾಧನೆಗಾಗಿ ಕಾಂದು ಹಾಕಲಿಕ್ಕೆ ಹೇಳಿದನು. ಹೀಗೆ ಆ ದಿವಸದಲ್ಲಿ ಹೆಚ್ಚು ಕಡಿಮೆ ಮೂರು ಸಾವಿರ ಮಂದಿ ಬಿದ್ದರು. ಮರುದಿವಸದಲ್ಲಿ ಮೋೀಶೆ ಜನರಿಗೆ ಹೇಳಿದ್ದು — ನೀವು ದಾಡ್ಡ ಪಾಪವನ್ನು ಮಾಡಿದಿರಿ; ಹಾಗಾದರೆ ಈಗ ಕರ್ತನ ಬಳಿಗೆ ಏರಿ ಹಾೀಗುವೆನು; ಒಂದು ವೇಳೆ ನಿಮ್ಮ ಪಾಪಕ್ಕೆ ಮುಚ್ಚುವಿಕೆ ಮಾಡೇನು. ಹಾಗೆ ಮೋೀಶೆ ಕರ್ತನ ಬಳಿಗೆ ತಿರುಗಿ ಹಾೀಗಿ — ಜನರಿಗೆ ಈ ಪಾಪವನ್ನು ಪರಿಹರಿಸ ಬೇಕೆಂದು ಬೇಡಿಕಾಂಡನು. ಕರ್ತನು ಮೋೀಶೆಗೆ ಹೇಳಿದ್ದು — ಈಗ ಹಾೀಗಿ, ಜನರನ್ನು ನಾನು ನಿನಗೆ ಹೇಳಿದ್ದಲ್ಲಿಗೆ ನಡಿಸಿ ಕಾಂಡು ಹಾೀಗು; ನನ್ನ ದೂತನು ನಿನ್ನ ಮುಂದಾಗಿ ಹಾೀಗುವನು. ಆದಾಗ್ಯೂ ನಾನು ವಿಚಾರಿಸುವ ದಿವಸದಲ್ಲಿ ಅವರ ಪಾಪವನ್ನು ಅವರ ಮೇಲೆ ವಿಚಾರಿಸುವೆನು.

ಅದರ ಮೇಲೆ ಕರ್ತನು ಹತ್ತು ಆಜ್ಞೆಗಳನ್ನು ತಿರುಗಿ ಎರಡು ಕಲ್ಲಿನ ಹಲಿಗೆಗಳ ಮೇಲೆ ಬರೆದನು; ಮೋೀಶೆಯು ಅದನ್ನು ಕೈಯಲ್ಲಿ ಹಿಡಿದು ಕಾಂಡು, ಕರ್ತನು ತನಗೆ ಹೇಳಿದವುಗಳನ್ನೆಲ್ಲಾ ಜನರಿಗೆ ಆಜ್ಞಾಪಿಸಿದನು.

ನಾವು ಕರ್ತನನ್ನು ಬಿಟ್ಟು, ಅನ್ಯ ದೇವರುಗಳನ್ನು ಸೇವಿಸುವ ಕಾರ್ಯವು ನಮಗೆ ದೂರವಾಗಿರಲಿ (ಯೆಹೂೀಶು. ೨೪, ೧೬).

ನಾನು ದಯಾಪರನೆಂದು ಕರ್ತನು ಅನ್ನುತ್ತಾನೆ; ಎಂದೆಂದಿಗೂ ಕಾೀಪ ಇಟ್ಟು ಕಾಳ್ಳುವದಿಲ್ಲ (ಯೆರೆವಿೂ. ೩, ೧೨).

---

೨೨ ಸಬ್ಬತನ್ನು ವಿಾರಿದವನೂ ದೇವರನ್ನು ದೂಷಿಸಿದವನೂ

ಇಸ್ರಾಯೇಲನ ಮಕ್ಕಳು ಅರಣ್ಯದಲ್ಲಿ ಱರುವಾಗ, ಅವರು ಸಬ್ಬತ್ ದಿವಸದಲ್ಲಿ ಕಟ್ಟಿಗೆಗಳನ್ನು ಕೂಡಿಸುವ ಮನುಷ್ಯನನ್ನು ಕಂಡರು. ಱ

ವನನ್ನು ಮೋಶೆ ಆರಾ೯ನರ ಬಳಿಗೂ ಸಮಸ್ತ ಸಖೆಯವರ ಬಳಿಗೂ ತಂದರು. ಇವರು ಅವನನ್ನು ಕಾವಲಿಯಲ್ಲಿ ಹಾಕಿದರು, ಯಾಕಂದರೆ ಅವನಿಗೆ ಏನು ಮಾಡ ಬೇಕೆಂದು ಸ್ಪಷ್ಟವಾಗಿ ತಿಳಿಯಲಿಲ್ಲ. ಆಗ ಕರ್ತನು ಮೋಶೆಗೆ ಹೇಳಿದ್ದು — ಆ ಮನುಷ್ಯನು ಸಾಯಲೇ ಸಾಯ ಬೇಕು, ಸಖೆಯೆಲ್ಲಾ ಅವನನ್ನು ಕಲ್ಲೆಸೆಯ ಬೇಕು. ಅದರ ಮೇಲೆ ಸಖೆಯೆಲ್ಲಾ ಅವನನ್ನು ದಂಡಿನ ಹಾರಗೆ ತಕ್ಕಾಂಡು ಹಾಗಿ, ಅವನನ್ನು ಕಲ್ಲೆಸೆದರು. ಹೀಗೆ ಅವನು ಸತ್ತು ಹಾದನು.

ಮತ್ತು ಇಸ್ರಯೇಲ್ಯಳಾದ ಒಬ್ಬ ಸ್ತ್ರೀಗೆ ಒಬ್ಬ ಮಗನಿದ್ದನು; ಅವನ ತಂದೆ ಐಗುಪ್ಯನಾಗಿದ್ದನು; ಈ ಮಗನು ಒಬ್ಬ ಇಸ್ರಯೇಲ್ಯನ ಸಂಗಡ ಹುಗಳ ಮಾಡಿದನು; ಅದರಲ್ಲಿ ಈ ಇಸ್ರಯೇಲ್ಯಳ ಮಗನು (ಕರ್ತನ) ಪರಿಶುದ್ಧ ಹೆಸರನ್ನು ಬೈದು, ದೂಷಿಸಿದನು. ಅದಕ್ಕಾಗಿ ಅವನನ್ನು ಮೋಶೆಯ ಬಳಿಗೆ ತಂದರು. ಕರ್ತನ ಅಪ್ಪಣೆ ಆಗುವ ಹಾಗೆ, ಅವನನ್ನು ಕಾವಲಿಯಲ್ಲಿ ಇಟ್ಟಿರು. ಆಗ ಕರ್ತನು ಹೇಳಿದ್ದೇನಂದರೆ — ಆ ದೂಷಿಸಿದವನನ್ನು ದಂಡಿನ ಹಾರಗೆ ತರ ಬೇಕು, ಸಖೆಯೆಲ್ಲಾ ಅವನನ್ನು ಕಲ್ಲೆಸೆಯ ಬೇಕು. ಹೀಗೆ ಅವರು ಆ ದೂಷಿಸಿದವನನ್ನು ತಕ್ಕಾಂಡು ಹಾಗಿ ಕಲ್ಲೆಸೆದರು.

ಮೋಶೆ ನೂರ ಇಪ್ಪತ್ತು ವರುಷದವನಾಗಿ ಸತ್ತು ಹಾದನು. ಯೆಹಾಶುವನು ಇಸ್ರಯೇಲ್ಯರನ್ನು ಕಾನಾನ್ ದೇಶಕ್ಕೆ ಕರಕಾಂಡು ಹಾದನು. ಅಲ್ಲಿ ಅವರು ವಾಸವಾದರು.

ಸಬ್ಬತನ್ನು ಕೈಕಾಳ್ಳ ಬೇಕು; ಅದು ನಿಮಗೆ ಪರಿಶುದ್ಧವಾದದ್ದು; ಅದನ್ನು ಅಪವಿತ್ರ ಮಾಡುವವನು ಸಾಯಲೇ ಸಾಯ ಬೇಕು (೨ ಮೋಶೆ. ೩೧, ೧೪).

ಕರ್ತನ ಹೆಸರನ್ನು ಬೈದವನು ಸಾಯಲೇ ಸಾಯ ಬೇಕು (೩ಮೋಶೆ. ೨೪, ೧೬).

---

೨೩ ಸಾಮುವೇಲನು

ಯಾಜಕನಾದ ಏಲಿಯ ಸಮಯದಲ್ಲಿ ಹನ್ನಳು ಎಂಬ ಸ್ತ್ರೀ ಇದ್ದಳು. ಅವಳಿಗೆ ದೇವರು ಮಕ್ಕಳನ್ನು ಕಾಡಲಿಲ್ಲ. ಅದಕ್ಕಾಗಿ ಆ

ವಳು ಬಹಳ ದುಖ್ಖ ಪಟ್ಟು, ದೇವಾಲಯಕ್ಕೆ ಬಂದಳು. ಅಲ್ಲಿ ಅ ವಳು ಕರ್ತನಿಗೆ ಪ್ರಾರ್ಥನೆ ಮಾಡಿದಳು—ಕರ್ತನೇ, ನೀನು ನನಗೆ ಗಂಡು ಮಗುವನ್ನು ಕಾಟ್ಟಿರೆ, ಅವನನ್ನು ನಿನಗೆ ಕಾಡುವೆನೆಂದು ಹರಿಕೆಯನ್ನು ಮಾಡಿದಳು. ಕರ್ತನು ಅವಳನ್ನು ಜ್ಞಾಪಕ ಮಾಡಿ ಕಾಂಡನು; ಹೀಗೆ ಅವಳು ಮಗನನ್ನು ಹೆತ್ತು, ಅವನಿಗೆ ಸಾಮುವೇಲ ನೆಂದು ಹೆಸರಿಟ್ಟಳು. ಹನ್ನ ಅವನನ್ನು ಮತ್ತು ಏಲಿಯ ಹತ್ತರ ಕರ್ತ



ನ ಮನೆಗೆ ಕರಕಾಂಡುಹಾದಳು. ಸಾಮುವೇಲನು ಏಲಿಯ ಸಮ್ಮು ಖದಲ್ಲಿ ಕರ್ತನನ್ನು ಸೇವಿಸಿದನು. ಆದರೆ ಏಲಿಯ ಕುಮಾರರು ದುಷ್ಟ ರಾಗಿದ್ದರು. ಆದಾಗ್ಯೂ ತಂದೆ ಅವರನ್ನು ಚಂದಾಗಿ ಗದರಿಸಲಿಲ್ಲ. ಸಾಮುವೇಲನು ಕರ್ತನ ಸನ್ನಿಧಿಯಲ್ಲಿ ದಾಡ್ಡವನಾಗುತ್ತಾ ಷಿದ್ದನು. ಮತ್ತು ಕರ್ತನ ಮುಂದೆಯೂ ಮನುಷ್ಯರ ಮುಂದೆಯೂ ಒಳ್ಳೆಯ ವನಾಗಿದ್ದನು. ಒಂದು ರಾತ್ರಿಯಲ್ಲಿ ಏಲಿಯೂ ಸಾಮುವೇಲನೂ ದೇವಾಲಯದಲ್ಲಿ ಮಲಗಿದ್ದರು. ಆಗ ಕರ್ತನು ಬಂದು—ಸಾಮು ವೇಲನೇ, ಸಾಮುವೇಲನೇ ಎಂದು ಕರೆದನು. ಅದಕ್ಕೆ ಸಾಮುವೇಲ ನು ಉತ್ತರ ಕಾಟ್ಟು—ಮಾತಾಡು, ನಿನ್ನ ದಾಸನು ಕೇಳುತ್ತಾನೆ ಅಂದನು. ಕರ್ತನು ಸಾಮುವೇಲನಿಗೆ ಹೇಳಿದ್ದೇನಂದರೆ—ನಾನು ಎಂದೆಂದಿಗೂ ಏಲಿಯ ಮನೆಗೆ ನ್ಯಾಯ ತೀರಿಸುವೆನು; ಯಾಕಂದರೆ ಅವನು ತನ್ನ ಕುಮಾರರ ಅಕ್ರಮವನ್ನು ತಿಳಿದು, ಅವರನ್ನು ಚಂದಾ

ಗಿ ಗದರಿಸಲಿಲ್ಲ. ಆ ಸಮಯದಲ್ಲಿ ಇಸ್ರಯೇಲ್ಯರು ಫಿಲಿಷ್ಟ್ಯರಿಗೆ ವಿರೋಧವಾಗಿ ಯುದ್ಧಕ್ಕೆ ಹೋರಟರು; ಅವರು ತಮ್ಮ ಸಂಗಡ ಸಾಕ್ಷಿ ಪೆಟ್ಟಿಗೆಯನ್ನು ಹೊತ್ತುಕೊಂಡು ಹೋದರು. ಆ ಯುದ್ಧದಲ್ಲಿ ಇಸ್ರಯೇಲ್ಯರು ಓಡಿ ಹೋದರು; ಮತ್ತು ಸಾಕ್ಷಿಪೆಟ್ಟಿಗೆಯು ಫಿಲಿಷ್ಟ್ಯರ ಕೈಯಲ್ಲಿ ಶೇರಿತು; ಇದಲ್ಲದೆ ಏಲಿಯ ಇಬ್ಬರು ಮಕ್ಕಳು ಸತ್ತರು. ಏಲಿಯು ಈ ವರ್ತಮಾನವನ್ನು ಕೇಳಿದಾಗ, ಅವನು ಹಿಂದಕ್ಕೆ ಬಿದ್ದು,



ಗಾಯ ಮುರಿದು, ಸತ್ತನು. ಫಿಲಿಷ್ಟ್ಯರು ಸಾಕ್ಷಿಪೆಟ್ಟಿಗೆಯನ್ನು ತಮ್ಮ ವಿಗ್ರಹದ ಗುಡಿಯಲ್ಲಿ ಇಟ್ಟರು. ಮಾರನೇ ದಿವಸ ಬೆಳಿಗ್ಗೆ




ಆ ವಿಗ್ರಹವು ಕೆಳಗೆ ಬಿದ್ದಿತ್ತು. ಅವರು ಅದನ್ನು ಸಮ ಮಾಡಿದರು. ಅದು ತಿರಿಗಿ ತುಂಡುತುಂಡಾಗಿ ಬಿತ್ತು; ಕಡೇಲಿ ಅವರು ಸಾಕ್ಷಿಪೆಟ್ಟಿಗೆಯನ್ನು ಇಸ್ರಯೇಲ್ಯರಿಗೆ ಹಿಂದೆ ಕಾಟ್ಟರು. ಆದರೆ ಸಾಮು ವೇಲನು ಬೆಳಿಯುತ್ತಾ ಬಂದನು; ಮತ್ತು ಕರ್ತನು ಅವನ ಸಂಗಡ ಇದ್ದನು. ಅವನು ಕರ್ತನ ಪ್ರವಾದಿ ಆಗಿ, ಇಸ್ರಯೇಲಿಗೆ ನ್ಯಾಯ ತೀರಿಸಿದನು.

ಮಕ್ಕಳೇ, ಎಲ್ಲಾದರಲ್ಲಿ ಹೆತ್ತವರಿಗೆ ವಿಧೇಯರಾಗಿರ್ರಿ, ಇದೇ ಕರ್ತನಿಗೆ ಆನಂದಕರವಾದದ್ದು (ಕೊಲೊ. ೩, ೨೦).

---

೨೪ ದಾವಿದನೂ ಗೊಲೆಯಾತನೂ

ಇಸ್ರಯೇಲ್ಯರಿಗೂ ಫಿಲಿಷ್ಟ್ಯರಿಗೂ ತಿರಿಗಿ ಯುದ್ಧವಾಯಿತು. ಫಿಲಿಷ್ಟ್ಯರ ದಂಡಿನಲ್ಲಿ ಗಾಲೆಯಾತನೆಂಬ ರಣವೀರನಿದ್ದನು. ಇವನು ನಿಂತು ಹೇಳಿದ್ದು—ನಾನು ಈ ದಿನ ಇಸ್ರಯೇಲಿನ ಸೈನ್ಯಗಳನ್ನು ನಿಂದಿಸುತ್ತೇನೆ, ನನಗೆ ಒಬ್ಬನನ್ನು ಬಿಟ್ಟು ಬಿಪಿರಿ, ಹಾಗೆ ನಾವು ಒಬ್ಬರಿಗಾಬ್ಬರು ಯುದ್ಧ ಮಾಡುತ್ತೇವೆ. ಇಸ್ರಯೇಲ್ಯರು ಹೆದರಿಕಾಂಡು, ಬಹು ಭಯ ಪಟ್ಟರು; ದಾವಿದನೆಂಬ ಯೌವನಸ್ಥನು ಮಾತ್ರ ಧೈರ್ಯ ಉಳ್ಳವನಾಗಿದ್ದನು; ಈ ಫಿಲಿಷ್ಟ್ಯನ ಸಂಗಡ ಯುದ್ಧ ಮಾಡಲಿಕ್ಕೆ ಮನಸ್ಸು ಮಾಡಿದನು; ಕರ್ತನು ಈ ಫಿಲಿಷ್ಟ್ಯನ ಕೈಗೂ ನನ್ನನ್ನು ತಪ್ಪಿಸಿ ಬಿಡುವನು ಅಂದನು; ಮತ್ತು ಅವನು ತನ್ನ ಕವಣೆಯನ್ನೂ ಐದು ನುಣ್ಣ ಕಲ್ಲುಗಳನ್ನೂ ತಕ್ಕಾಂಡು, ಆ ಫಿಲಿಷ್ಟ್ಯನ ಬಳಿಗೆ ಶೀರ ಹಾದನು; ಫಿಲಿಷ್ಟ್ಯನು ದಾವಿದನನ್ನು ತಿರಸ್ಕರಿಸಿದನು; ಆಗ ದಾವಿದನು ಒಂದು ಕಲ್ಲನ್ನು ಕವಣೆಯಲ್ಲಿ ಇಟ್ಟು, ಬೀಸಿ, ಫಿಲಿಷ್ಟ್ಯನ ಹಣೆಗೆ ಹಾಪಡೆದನು. ಹೀಗೆ ಅವನು ನೆಲದ ಮೇಲೆ ಬಾಲ್ಲ ಬಿದ್ದನು. ಮತ್ತು ದಾವಿದನು ಫಿಲಿಷ್ಟ್ಯನ ಕತ್ತಿಯನ್ನು ತೆಗದು ಕಾಂಡು, ಅವನ ತಲೆಯನ್ನು ಕಡಿದು ಹಾಕಿದನು. ಫಿಲಿಷ್ಟ್ಯರು ಇದನ್ನು ನಾಪಿ, ಓಡಿ ಹಾದರು. ಇಸ್ರಯೇಲ್ಯರಿಗೆ



ಜಯವಾಯಿತು. ಮತ್ತು ದಾವಿದನು ಸಮಸ್ತ ಜನರ ಕಣ್ಣು ಮುಂದೆ ಒಳ್ಳೆಯವನಾಗಿದ್ದನು. ಆ ಮೇಲೆ ಅವನು ಅರಸನಾದನು.

ದೇವರು ಗರ್ವಿಷ್ಠರನ್ನು ಎದುರಿಸಿ, ದೀನರಿಗೆ ಕೃಪೆಯನ್ನು ಕಾಡುತ್ತಾನೆ (೧ಪೇತ್ರ. ೫, ೫).

---

೨೫ ಅಬ್ಸಲೋಮನು

ದಾವಿದನಿಗೆ ಬಹಳ ಮಂದಿ ಮಕ್ಕಳು ಹುಟ್ಟಿದರು; ಒಬ್ಬನಿಗೆ ಅಬ್ಸಲೋಮನೆಂಬ ಹೆಸರು ಇತ್ತು. ಅಬ್ಸಲೋಮನು ಕೆಟ್ಟವನಾಗಿದ್ದನು; ತಾನು ಅರಸು ಆಗ ಬೇಕೆಂಬ ಮನುಸ್ಸು ಮಾಡಿದನು; ಅದಕ್ಕಾಗಿ ಅವನು ಬಹಳ ಜನ ಕಟ್ಟಿ ಕಾಂಡನು. ಅವರು ದಾವಿದನನ್ನು ಓಡಿಸಲಿಕ್ಕೆ ನಾೞಿದರು. ದಾವಿದನು ದುಃಖದಿಂದ ಓಡಿ ಹಾದನು. ಮತ್ತು ಅಬ್ಸಲೋಮನು ತನ್ನ ತಂದೆಯ ಮೇಲೆ ಯುದ್ಧ ಮಾಡಿದನು; ಆದರೆ ಅಬ್ಸಲೋಮನು ಓಡಿ ಹಾಗ ಬೇಕಾಯಿತು; ಅವನು ಒಂದು ಹಾಸರಗತ್ತೆಯ ಮೇಲೆ ಏರಿ ಇದ್ದನು; ಅವನು ಓಡುವಾಗ ಅವನ ತಲೆ ಒಂದು ಮರದ ಕಾಂಬೆಯಲ್ಲಿ ಸಿಕ್ಕಿ ಕಾಂಡಿತು; ಅವನ ಹಾಸರಗತ್ತೆ ಓಡಿ ಹಾೞಿಯಿತು; ಹೀಗೆ ಅಬ್ಸಲೋಮನು ಆಕಾಶಕ್ಕೂ ಭೂಮಿಗೂ ಮಧ್ಯದಲ್ಲಿ ಹಿಡಿಯಲ್ಪಟ್ಟಿದ್ದನು. ಇದನ್ನು



ದಾವಿದನ ಕಡೆಯವನಾದ ಯಾೀವಾಬನು ಕೇಳಿ, ಹಾೀಗಿ, ಅಬ್ಸಲಾೀಮನನ್ನು ಕಾಂದು ಹಾಕಿದನು. ಒಬ್ಬನು ಈ ಸುದ್ದಿಯನ್ನು ದಾವಿದನಿಗೆ ತಿಳಿಸಿದನು; ಆಗ ದಾವಿದನು ಬಹಳ ದುಃಖ ಮಾಡಿ, ನನ್ನ ಮಗನಾದ ಅಬ್ಸಲಾೀಮನೇ, ನನ್ನ ಮಗನೇ, ನಿನಗೆ ಪ್ರತಿಯಾಗಿ ನಾನು ಸತ್ತು ಹಾೀಗುತ್ತಿದ್ದರೆ ಉತ್ತಮವಾಗುತ್ತಿತ್ತು ಎಂದು ಕೂಗಿ, ಅತ್ತನು.

ತಂದೆಯನ್ನು ಸೂರೆ ಮಾಡಿ, ತಾಯಿಯನ್ನು ಓಡಿಸುವವನು ಲಜ್ಜೆಯನ್ನೂ ನಾಚಿಕೆಯನ್ನೂ ಹುಟ್ಟಿಸುವ ಮಗನಾಗಿದ್ದಾನೆ (ಸಾಮತಿ. ೧೫, ೨೬).

---

೨೬ ಪ್ರವಾದಿಯಾದ ಎಲೀಯನು

ಅತ್ತಾಂದು ಸಮಯದಲ್ಲಿ ಇಸ್ರಾಯೇಲ್ಯರ ಮೇಲೆ ಆಹಾಬನೆಂಬವನು ಅರಸನಾಗಿದ್ದನು. ಅವನು ಕರ್ತನ ಸಮ್ಮುಖದಲ್ಲಿ ಬಹಳ ಕೆಟ್ಟತನ ಮಾಡಿದನು. ಅವನ ಬಳಿಗೆ ಪ್ರವಾದಿಯಾದ ಎಲೀಯನು ಹಾೀಗಿ—ಈ ವರುಷಗಳಲ್ಲಿ ಮಂಜೂ ಮಳೆಯೂ ಆಗದೆಂದು ಹೇಳಿದನು. ಮತ್ತು (ಎಲೀಯನನ್ನು ಜಾೀಕೆ ಮಾಡಲಿಕ್ಕಾಗಿ) ಕರ್ತನು ಅವನಿಗೆ ಅಪ್ಪಣೆ ಕಾಟ್ಟು—ನೀನು ಕಿರೀತು ಹಳ್ಳದ ಬಳಿಯಲ್ಲಿ ಅಡಗಿ ಕಾಂಡಿರು ಅಂದನು. ಎಲೀಯನು ಕರ್ತನ ಮಾತಿನ ಪ್ರಕಾರ ಹಾೀದನು. ಆಗ ಕರ್ತನು ಅವನಿಗೆ ಕಾಗೆಗಳನ್ನು ಕಳುಹಿಸಿದನು; ಇವುಗಳು ಅವನಿಗೆ ರಾಟ್ಟಿಯೂ ಮಾಂಸವೂ ತಕ್ಕಾಂಡು ಬಂದವು;



ಮತ್ತು ಅವನು ಆ ಹಳ್ಳದ ನೀರನ್ನು ಕುಡಿಯುತ್ತಿದ್ದನು. ಆದರೆ ದೇಶದಲ್ಲಿ ಮಳೆ ಇಲ್ಲದ್ದರಿಂದ ಆ ಹಳ್ಳವು ಬತ್ತಿ ಹೋಯಿತು. ಆಗ ಕರ್ತನು ಎಲೀಯನನ್ನು ಒಬ್ಬ ವಿಧವೆಯ ಬಳಿಗೆ ಕಳುಹಿಸಿದನು. ಎಲೀಯನು ಹೋಗಿ, ಅವಳ ಹತ್ತರ ಕಾಟ್ಟಿ ಕೇಳಿದನು; ಆದರೆ ಆ



ಪಳು ಉತ್ತರ ಕಾಟ್ಟು—ಕಾಡದಲ್ಲಿ ಒಂದು ಹಿಡಿ ಹಿಟ್ಟೂ ತಂಬಿಗೆಯಲ್ಲಿ ಸ್ವಲ್ಪ ಎಂಣ್ಕೆಯೂ ಹೊರ್ತಾಗಿ ನನಗೆ ಒಂದು ದಾಸೆಯೂ ಇಲ್ಲ, ಇದನ್ನು ನನಗೂ ನನ್ನ ಮಗನಿಗೂ ಶಿದ್ಧ ಮಾಡುತ್ತೇನೆ, ಮತ್ತು ನಾವು ತಿಂದು ಸತ್ತು ಹೋಗುವೆವು ಅಂದಳು. ಎಲೀಯನು ಅವಳಿಗೆ ಹೇಳಿದ್ದು—ಭಯ ಪಡ ಬೇಡ, ಯಾಕಂದರೆ ಕ

ರ್ತನು ಭೂಮಿಯ ಮೇಲೆ ಮಳೆಯನ್ನು ಕಾಡುವ ಪರ್ಯಂತರಕ್ಕೂ ಕಾಡದಲ್ಲಿರುವ ಹಿಟ್ಟು ಶೀರುವದಿಲ್ಲ, ತಂಬಿಗೆಯಲ್ಲಿರುವ ಎಂಣೆಯು ಮುಗಿಯುವದಿಲ್ಲ ಎಂದು ಕರ್ತನು ಹೇಳುತ್ತಾನೆ. ಹೀಗೆ ಅವಳು ಹಾಗಿ, ಅಪ್ಪಿಗೆ ಮಾಡಿದಳು. ಮತ್ತು ಎಲೀಯನೂ ಆ ಸ್ತ್ರೀಯೂ ಅವಳ ಮನೆಯವರೂ ಅನೇಕ ದಿವಸ ಉಂಡರು.

ಪೂರ್ಣರು ದುಷ್ಕಾಲದಲ್ಲಿ ನಾಚಿಕೆ ಪಡುವದಿಲ್ಲ, ಬರದ ದಿವಸಗಳಲ್ಲಿ ತೃಪ್ತಿ ಪಡುವರು (ಕೀರ್ತ. ೩೭, ೧೯).

---

೨೭ ಎಲೀಷನೂ ಹಾಸ್ಯ ಮಾಡಿದ ಹುಡುಗರೂ

ಎಲೀಯನ ತರುವಾಯ ಎಲೀಷನೆಂಬ ಪ್ರವಾದಿ ಇದ್ದನು. ಅವನು ಒಂದು ದಿನದಲ್ಲಿ ಬೇತೆಲ್ ಎಂಬ ಊರಿಗೆ ಹಾದನು. ಅವನು ಏರಿ ಹಾಗುತ್ತಿರುವಾಗ, ಚಿಕ್ಕ ಹುಡುಗರು ಪಟ್ಟಣದಿಂದ ಹಾರಟು ಬಂದರು. ಇವರು ಎಲೀಷನಿಗೆ ಹಾಸ್ಯ ಮಾಡಿದರು — ಬಾಳ್ಳ ತಲೆಯವನೇ, ಏರಿ ಬಾ, ಬಾಳ್ಳ ತಲೆಯವನೇ, ಏರಿ ಬಾ ಅಂದರು. ಎಲೀಷನು ಅವರನ್ನು ನೋಡಿ, ಕರ್ತನ ಹೆಸರಿನಲ್ಲಿ ಅವರನ್ನು ಶಪಿಸಿದನು. ಆಗ ಅಡವಿಯಲ್ಲಿಂದ ಎರಡು ಕರಡಿಗಳು ಹಾರಟು, ಅವರಲ್ಲಿ ನಾಲ್ವತ್ತೆರಡು ಮಂದಿ ಮಕ್ಕಳನ್ನು ಶೀಳಿ ಬಿಟ್ಟವು.

ನನ್ನ ಮಗನೇ, ಪಾಪಾತ್ಮರು ನಿನ್ನನ್ನು ಮರುಳುಗೊಡಿಸಿದರೆ ಒಪ್ಪ ಬೇಡ (ಸಾಮಿತಿ. ೧, ೧೦).

ನರೆಗೂದಲು ಉಳ್ಳವರ ಮುಂದೆ ಏಳ ಬೇಕು; ಮುದುಕನ ಸನ್ನಿಧಾನವನ್ನು ಸನ್ಮಾನಿಸಿ, ನಿನ್ನ ದೇವರಿಗೆ ಭಯ ಪಡ ಬೇಕು (ಇ ಮೋಶೆ. ೧೯, ೩೨).

---

೨೮ ಪ್ರವಾದಿಯಾದ ಯೋನನು

ನಿನೆವೆ ಒಂದು ದಾಡ್ಡ ಪಟ್ಟಣವಾಗಿತ್ತು. ಅದರ ಕೆಟ್ಟತನ ದೇವರ ಮುಂದೆ ಏರಿತು. ಆದದರಿಂದ ದೇವರು ಪ್ರವಾದಿಯಾದ ಯೋನ

ನಿಗೆ ಹೇಳಿದ್ದು — ನೀನು ನಿನೆವೆಗೆ ಹಾಗಿ, ಅದಕ್ಕೆ ವಿರಾಧವಾಗಿ ಸಾರು. ಆದರೆ ಯಾನನು ಕರ್ತನ ಸಮ್ಮುಖಕ್ಕೆ ತಪ್ಪಿಸಿ ಕಾಂಡನು; ಅವನು ಒಂದು ಹಡಗವನ್ನೇರಿ ಹಾದನು. ಆದರೆ ಕರ್ತನು ದಾಡ್ಡ ಬಿರುಷಾಳಿಯನ್ನು ಕಳುಹಿಸಿದನು; ಹಡಗವು ಒಡಿಯಲಿಕ್ಕೆ ಷತ್ತು. ಆಗ ಹಡಗದವರು ಭಯ ಪಟ್ಟು, ಪ್ರಾರ್ಥನೆ ಮಾಡಿದರು. ಆದರೆ ಯಾನನು ಮಲಗಿ ಕಾಂಡನು. ಮತ್ತು ಅವನು ಹಡಗದವರಿಗೆ ಹೇಳಿದ್ದು — ನನ್ನ ನಿಮಿತ್ತ ಈ ದಾಡ್ಡ ಬಿರುಷಾಳಿ ನಿಮ್ಮ ಮೇಲೆ ಬಂತು, ಆಪದರಿಂದ ನೀವು ನನ್ನನ್ನು ಸಮುದ್ರದಲ್ಲಿ ಹಾಕಿರಿ, ಆಗ ಸಮುದ್ರವು ನಿಮಗೆ ಶಾಂತವಾಗುವದು. ಹೀಗೆ ಅವರು ಯಾನನನ್ನು ಸಮುದ್ರದಲ್ಲಿ ಹಾಕಿದರು. ಆಗ ಸಮುದ್ರವು ಶಾಂತವಾಯಿತು. ಮತ್ತು ಕರ್ತನು ಒಂದು ದಾಡ್ಡ ಮೀನನ್ನು ನೇಮಿಸಿ ಷಿದ್ದನು; ಆ ಮೀನು ಯಾನನನ್ನು ನುಂಗಿತು. ಅವನು ಮೂರು ದಿವಸವೂ ಮೂರು ರಾತ್ರಿಯೂ ಆ ಮೀನಿನ ಹಾಟ್ಟೆಯಲ್ಲಿ ಷಿದ್ದನು. ಆಗ ಯಾನನು ಮೀನಿನ ಹಾಟ್ಟೆಯಾಳಗಿಂದ ಕರ್ತನಿಗೆ ಪ್ರಾರ್ಥನೆ ಮಾಡಿದನು; ಮತ್ತು ಕರ್ತನು ಆ ಮೀನಿಗೆ ಹೇಳಿದನು; ಹೀಗೆ ಅದು ಯಾನನನ್ನು ಒಣಭೂಮಿಯ ಮೇಲೆ ಕಾರಿ ಬಿಟ್ಟಿತು. ಅದರ ತರುವಾ



ಯ ಯಾನನು ಕರ್ತನ ವಾಕ್ಯದ ಪ್ರಕಾರ ನಿನೆವೆಗೆ ಹಾದನು. ಮತ್ತು ಅವನು ಅಲ್ಲಿ ಸಾರಿ — ಷನ್ನು ನಾಲ್ವತ್ತು ದಿವಸಗಳಾದ

ಮೇಲೆ ನಿನೆವೆ ಹಾಳಾಗುವದು ಎಂದು ಹೇಳಿದನು. ನಿನೆವೆಯ ಮನುಷ್ಯರು ದೇವರನ್ನು ನಂಬಿದರು; ಅವರು ಉಪವಾಸ ಮಾಡಿ, ದುಖ್ಖ ಮಾಡಿದರು; ಮತ್ತು ತಮ್ಮ ಕೆಟ್ಟ ಮಾರ್ಗವನ್ನು ಬಿಟ್ಟು, ಬಲವಾಗಿ ದೇವರಿಗೆ ಮೊರೆ ಇಟ್ಟರು. ಇದನ್ನು ದೇವರು ನೋಡಿದನು; ಅದಕ್ಕಾಗಿ ಅವನು ಪಶ್ಚಾತ್ತಾಪ ಪಟ್ಟು, ನಿನೆವೆಯನ್ನು ನಾಶನ ಮಾಡಲಿಲ್ಲ.

ದೇವರ ದಯವನ್ನೂ ಕಾರುಣ್ಯವನ್ನೂ ನೋಡು (ರೋಮಾ. ೧೧,೨೨).

ದೇವರೇ, ನಿನ್ನ ಕೃಪೆಯ ಪ್ರಕಾರ ನನಗೆ ದಯ ಮಾಡು; ನಿನ್ನ ಅಂತಃಕರಣದ ಬಾಹುಳ್ಯದ ಪ್ರಕಾರ ನನ್ನ ದ್ರೋಹಗಳನ್ನು ಅಳಿಸಿ ಬಿಡು. ನನ್ನ ಅಕ್ರಮದಿಂದ ನನ್ನನ್ನು ಪೂರ್ಣವಾಗಿ ತೊಳಿ; ನನ್ನ ಪಾಪದಿಂದ ನನ್ನನ್ನು ಶುಚಿ ಮಾಡು (ಕೀರ್ತ. ೫೧, ೧. ೨).

---

೨೫ ದಾನಿಯೇಲನು ಸಿಂಹಗಳ ಗವಿಯಲ್ಲಿ ಇದ್ದದ್ದು

ದಾನಿಯೇಲನು ಒಬ್ಬ ಪ್ರವಾದಿಯಾಗಿದ್ದನು. ಅವನು ಅರಸನಾದ ದರೀಯನಾಳಗೆ ದಾಡ್ಡ ಅಧಿಪತಿ ಆಗಿದ್ದನು. ಅರಸನು ಅವನನ್ನು ಸಮಸ್ತ ರಾಜ್ಯದ ಮೇಲೆ ನೇಮಿಸ ಮನಸ್ಸಾಗಿದ್ದನು. ಅದಕ್ಕಾಗಿ ಮಿಕ್ಕಾದ ಅಧಿಪತಿಗಳು ಅವನ ಮೇಲೆ ಹಾಟ್ಪೈಕಿಚ್ಚು ಮಾಡಿದರು. ಅವರು ದಾನಿಯೇಲನಲ್ಲಿ ತಪ್ಪು ಹಿಡಿಯಲಿಕ್ಕೆ ಹುಡುಕಿದರು. ಅವರು ಅರಸನ ಬಳಿಗೆ ಕೂಡಿ ಬಂದು—ಯಾರಾದರೂ ಮೂವತ್ತು ದಿವಸಗಳ ವರಿಗೂ ಅರಸನಿಗೆ ವಿನಾಯಿಸಿ ಮತ್ತ್ಯಾವ ದೇವರಿಗೂ ಪ್ರಾರ್ಥನೆ ಮಾಡ ಬಾರದೆಂದು, ಒಂದು ನಿರ್ಣಯವನ್ನು ಮಾಡ ಬೇಕೆಂದು ಹೇಳಿದರು. ಅರಸನು ಈ ನಿರ್ಣಯವನ್ನು ಮಾಡಿ, ಅದಕ್ಕೆ ರುಜು ಹಾಕಿದನು. ಆದರೆ ದಾನಿಯೇಲನು ಮುಂಚೆ ಮಾಡಿದ ಪ್ರಕಾರವೇ (ಅರಸನಿಗೆ ಅಲ್ಲ) ತನ್ನ ದೇವರಿಗೆ ಪ್ರಾರ್ಥನೆ ಮಾಡಿದನು. ಇದನ್ನು ಆ ಅಧಿಪತಿಗಳು ನೋಡಿ, ಅರಸನ ಹತ್ತರ ದಾನಿಯೇಲನ ಮೇಲೆ ದೂರು ಹೇಳಿದರು. ಮತ್ತು ಅರಸನು ಅಪ್ಪಣೆ

ಕಾಡಲಾಗಿ, ಅವರು ದಾನಿಯೇಲನನ್ನು ಸಿಂಹಗಳ ಗವಿಯಲ್ಲಿ ಹಾಕಿದರು. ಆದರೆ ಅರಸನು ಬಹಳ ವ್ಯಸನ ಪಟ್ಟನು; ಅವನು ಉಪವಾಸ ಮಾಡಿ, ನಿದ್ರೆಯೂ ಮಾಡಲಿಲ್ಲ. ಬೆಳಿಗ್ಗೆ ಅರಸನು ಬೇಗ



ಸಿಂಹಗಳ ಗವಿಗೆ ಹಾಬಂದನು; ಅಲ್ಲಿ ದಾನಿಯೇಲನಿಗೆ ಕೂಗಿದನು. ದಾನಿಯೇಲನು ಅರಸನಿಗೆ ಹೇಳಿದ್ದು—ನನ್ನ ದೇವರು ತನ್ನ ದೂತನನ್ನು ಕಳುಹಿಸಿ, ಸಿಂಹಗಳ ಬಾಯಿಗಳನ್ನು ಮುಚ್ಚಿದ್ದಾನೆ; ನನಗೆ ನಷ್ಟ ಆಗಲಿಲ್ಲ. ಆಗ ಅರಸನು ಅತಿ ಸಂತೋಷ ಪಟ್ಟು, ದಾನಿಯೇಲನನ್ನು ಗವಿಯಾಳಗಿಂದ ಎತ್ತ ಬೇಕೆಂದು ಅಪ್ಪಣೆ ಕಾಟ್ಟನು. ಆದರೆ ದಾನಿಯೇಲನ ಮೇಲೆ ತಪ್ಪು ಹಾರಿಸಿದ ಮನುಷ್ಯರನ್ನು ಅರಸನು ಸಿಂಹಗಳ ಗವಿಯಲ್ಲಿ ಹಾಕಿಸಿದನು; ಸಿಂಹಗಳು ಅವರ ಎಲುವುಗಳನ್ನೆಲ್ಲಾ ಮರಿದು ಬಿಟ್ಟವು.

ಕರ್ತನ ದೂತನು ಅವನಿಗೆ ಭಯ ಪಡುವವರ ಸುತ್ತಲು ಇಳುಕೊಳ್ಳುತ್ತಾ, ಅವರನ್ನು ತಪ್ಪಿಸಿ ಬಿಡುತ್ತಾನೆ (ಕೀರ್ತ. ೩೪, ೭).

II.

ಹೊಸ ಒಡಂಬಡಿಕೆಯ ಕಥೆಗಳು

೧ ಜಕರೀಯನೂ ಎಲೀಸಬೇತಳೂ

ಜಕರೀಯನೆಂಬ ಒಬ್ಬ ಯಾಜಕನು ಇದ್ದನು; ಅವನ ಹೆಂಡತಿಯ ಹೆಸರು — ಎಲೀಸಬೇತಳು. ಅವರಿಬ್ಬರು ದೇವರ ಮುಂದೆ ನೀತಿವಂತರಾಗಿದ್ದರು. ಅವರಿಗೆ ಮಕ್ಕಳು ಇರಲಿಲ್ಲ, ಮತ್ತು ಅವರಿಬ್ಬರು ಮುದುಕರಾಗಿದ್ದರು. ಜಕರೀಯನು ಒಂದು ದಿವಸದಲ್ಲಿ ದೇವಾಲಯಕ್ಕೆ ಹೋದನು. ಅಲ್ಲಿ ಧೂಪವರ್ಪಿಸುವದು ಅವನ ಕೆಲಸವಾಗಿತ್ತು. ಜನರು ಅಷ್ಟರಾಳಗೆ ಹೊರಗೆ ಪ್ರಾರ್ಥನೆ ಮಾಡುತ್ತಿದ್ದರು. ಆಗ ಕರ್ತನ ದೂತನು ಜಕರೀಯನಿಗೆ ಕಾಣಿಸಿಕೊಂಡನು. ಜಕರೀಯನು ಅವನನ್ನು ನೋಡಿ, ಕಳವಳ ಪಟ್ಟನು. ದೂತನು ಅವನಿಗೆ ಹೇಳಿದ್ದು — ಜಕರೀಯನೇ, ಭಯ ಪಡ ಬೇಡ, ದೇವರು ನಿನ್ನ ಪ್ರಾರ್ಥನೆಯನ್ನು ಕೇಳಿದನು; ನಿನ್ನ ಹೆಂಡತಿಯಾದ ಎಲೀಸಬೇತಳು ನಿನಗೆ ಮಗನನ್ನು ಹೆರುವಳು, ಅವನಿಗೆ ಯೋಹಾನನೆಂಬ ಹೆಸರಿಡ ಬೇಕು; ನಿನಗೆ ಅವನಿಂದ ಸಂತೋಷ ಇರುವದು; ಅವನು ಇಸ್ರಾಯೇಲನ ಮಕ್ಕಳಲ್ಲಿ ಅನೇಕರನ್ನು ಕರ್ತನ ಕಡೆಗೆ ತಿರುಗಿಸುವನು.

ಆದರೆ ಜಕರೀಯನು ದೂತನ ಮಾತಿಗೆ ನಂಬಲಿಲ್ಲ. ಅದಕ್ಕೆ ದೂತನು ಹೇಳಿದ್ದು — ನಾನು ಗಬ್ರಿಯೇಲನು, ಇವುಗಳನ್ನು ನಿನಗೆ ತಿಳಿಸ ಬೇಕೆಂದು ದೇವರು ನನ್ನನ್ನು ಕಳುಹಿಸಿದ್ದಾನೆ, ಆದರೆ ನೀನು

ನನ್ನ ಮಾತುಗಳನ್ನು ನಂಬಲಿಲ್ಲ, ಅದಕ್ಕಾಗಿ ನೀನು ಈಗ ಮೂಕನಾಗುವಿ, ಮತ್ತು ಯೋಹಾನನು ಹುಟ್ಟುವ ದಿನದ ವರಿಗೂ ಮಾತಾಡಲಾರದೆ ಇರುವಿ.

ಜಕರೀಯನು ದೇವಾಲಯದಾಳಗಿಂದ ಹಾರಗೆ ಬಂದನು. ಆದರೆ ಮಾತಾಡಲಾರದೆ ಇದ್ದನು. ಅವನು ಜನರಿಗೆ ಸೌಜ್ಞೆ ಮಾಡಿ, ಮೂಕನಾಗಿಯೇ ಇದ್ದನು. ಅದರ ಮೇಲೆ ತನ್ನ ಮನೆಗೆ ಹೋದನು. ಮತ್ತು ಅವನ ಹೆಂಡಶಿಯಾದ ಎಲೀಸಬೇತಳು ಮಗನನ್ನು ಹೆತ್ತಳು. ಸ್ನೇಹಿತರು ಆ ಕೂಸಿಗೆ ಜಕರೀಯನೆಂಬ ಹೆಸರಿಟ್ಟಿರು. ಆದರೆ ಅವನ ತಾಯಿ—ಹಾಗಲ್ಲ, ಯೋಹಾನನೆಂಬ ಹೆಸರಿಡ ಬೇಕು ಅಂದಳು. ಅವರು ಅವನ ತಂದೆಗೆ ಸೌಜ್ಞೆ ಮಾಡಿ—ಕೂಸಿಗೆ ಯಾವ ಹೆಸರಿಡ ಬೇಕೆಂದು ಕೇಳಿದರು. ಆಗ ಅವನು ಒಂದು ಹಲಿಗೆ ಕೇಳಿ ಕಾಂಡು, ಅವನ ಹೆಸರು—ಯೋಹಾನನೇ ಎಂದು ಬರೆದನು. ಸಂಗಡಲೇ ಅವನ ಬಾಯಿ ಬಿಡಿಸಲ್ಪಟ್ಟಿತು; ಅವನು ದೇವರನ್ನು ಸ್ತುತಿಸಿ ಮಾತಾಡಿದನು. ಮತ್ತು ಈ ಸಂಗತಿಯನ್ನು ಕೇಳಿದವರೆಲ್ಲರು—ಈ ಕೂಸು ಎಂಥಾದಾಗುವದು ಎಂದು ಹೇಳಿದರು.

ಕೂಸಾದ ಯೋಹಾನನು ಬೆಳದು, ಆತ್ಮದಲ್ಲಿ ಬಲಗಾಂಡನು. ಅವನು ದಾಡ್ಡವನಾದ ಮೇಲೆ ಅವನು ಯೋರ್ದನೆಂಬ ಹಾಳೆಯ ಹತ್ತರ ಹೋದನು. ಅಲ್ಲಿ ಅವನು ಪ್ರಸಂಗ ಮಾಡುತ್ತಾ, ಸ್ನಾನ ಕಾಡುತ್ತಾ ಇದ್ದನು.

ನಿಮ್ಮ ಪ್ರಾಣಿಗಳನ್ನು ರಕ್ಷಿಸ ಸಾಮರ್ಥ್ಯ ಉಳ್ಳ ಒಳನೆಟ್ಟ ವಾಕ್ಯವನ್ನು ಶಾಂತಿಯಿಂದ ಅಂಗೀಕರಿಸಿರಿ (ಯಾಕೋಬ. ೧, ೨೧).

---

೨ ಯೇಸುವಿನ ಜನನ

ನಜರೇತಿನಲ್ಲಿ ಯೋಸೇಫನೂ ಮರಿಯಳೂ ವಾಸವಾಗಿದ್ದರು. ಅವರು ಐಶ್ವರ್ಯವುಳ್ಳವರಾಗಿದ್ದರು. ಅಲ್ಲಿಂದ ಅವರು ಬೆತ್ಲೆಹೇಮಿಗೆ ಹೋಗ ಬೇಕಾಯಿತು. ಬಹು ಜನರೂ ಅಲ್ಲಿಗೆ ಬಂದರು. ಯೋ

ಸೇಫನೂ ಮರಿಯಳೂ ಅಲ್ಲಿಗೆ ಶೇರಿದಾಗ, ಅವರಿಗೆ ಸಮವಾದ ಸ್ಥಳ ಶಿಕ್ಕಲಿಲ್ಲ; ಒಂದು ಕಾಟ್ಟಿಗೆಯಲ್ಲಿ ಬಿಡಾರ ಮಾಡ ಬೇಕಾಯಿತು. ಮರಿಯಳು ಆ ಕಾಟ್ಟಿಗೆಯಲ್ಲಿ ತನ್ನ ಚಾಚ್ಚಲ ಮಗನನ್ನು ಹೆತ್ತಳು. ಅವನನ್ನು ಬಟ್ಟೆಯಲ್ಲಿ ಸುತ್ತಿ, ಗಾದಲಿಯಲ್ಲಿ ಮಲಗಿಸಿದಳು. ಹಾರಗೆ ಹಾಲದಲ್ಲಿ ಕುರುಬರು ಇದ್ದರು. ಅವರ ಹತ್ತರ ಒಬ್ಬ ದೂತನು ಬಂದನು. ಕುರುಬರು ಬಹು ಭಯ ಪಟ್ಟರು. ಆ



ಗ ದೂತನು ಅವರಿಗೆ ಹೇಳಿದ್ದು — ಭಯ ಪಡ ಬೇಡಿರಿ, ಇಗಾ, ಮಹಾ ಸಂತಾಷವನ್ನು ನಿಮಗೆ ಪ್ರಸಂಗಿಸುತ್ತೇನೆ; ನಿಮಗೆ ಈ ಹಾತ್ತು ರಕ್ಷಕನು ಹುಟ್ಟಿದ್ದಾನೆ, ಅವನು ಕರ್ತನಾದ ಕ್ರಿಸ್ತನು; ಬೆತ್ಲೆ ಹೇಮಕ್ಕೆ ಹಾಗಿರಿ, ಅಲ್ಲಿ ನೀವು ಕೂಸು ಗಾದಲಿಯಲ್ಲಿ ಮಲಗಿರುವದನ್ನು ಕಂಡು ಕಾಳ್ಳುವಿರಿ. ಆ ಮೇಲೆ ಅನೇಕ ದೂತರು ಬಂದರು; ಅವರು ದೇವರನ್ನು ಹಾಗಳಿ — ಮಹಾನ್ನತವಾದವುಗಳಲ್ಲಿ ದೇವರಿಗೆ ಮಹಿಮೆಯೂ, ಭೂಮಿಯ ಮೇಲೆ ಸಮಾಧಾನವೂ, ಮನುಷ್ಯರಲ್ಲಿ ದಯವೂ ಅಂದರು. ಕುರುಬರು ಬೆತ್ಲೆಹೇಮಿಗೆ ಹಾದರು. ಅವರು ಕೂಸನ್ನೂ ಮರಿಯಳನ್ನೂ ನಾಡಿ, ಬಹಳ ಸಂತಾಷ ಪಟ್ಟರು.

ಅವನಲ್ಲಿ ವಿಶ್ವಾಸವಿಡುವವರೆಲ್ಲರು ನಾಶವಾಗದೆ, ನಿತ್ಯಜೀವವನ್ನು ಹಾಂದುವ ಬಗ್ಯೆ, ದೇವರು ಒಬ್ಬನಾಗಿ ಹುಟ್ಟಿದ ತನ್ನ ಮಗನನ್ನು ಕಾಡುವ ಹಾಗೆ, ಲೋಕವನ್ನು ಅಷ್ಟು ಪ್ರಿತಿ ಮಾಡಿದನು (ಯೋಹಾ. ೩, ೧೬).

---

೩ ಮೂಡಣದಿಂದ ಬಂದ ಪಂಡಿತರು

ಯೇಸು ಹುಟ್ಟಿದ ಮೇಲೆ ಪಂಡಿತರು ಮೂಡಣದಿಂದ ಯೆರೂಸಲೇಮಿಗೆ ಬಂದರು. ಅವರು ಹೆರೋದನ ಬಳಿಗೆ ಹೋಗಿ—ಯೆಹೂದ್ಯರಿಗೆ ಅರಸನಾಗಿ ಹುಟ್ಟಿದವನು ಎಲ್ಲಿ? ಮೂಡಣದಲ್ಲಿ ಅವನ ನಕ್ಷತ್ರವನ್ನು ನೋಡಿದೆವು, ಅವನಿಗೆ ನಮಸ್ಕರಿಸ ಬಂದೆವು ಅಂದರು. ಕೆಟ್ಟ ಅರಸನಾದ ಹೆರೋದನು ಇದನ್ನು ಕೇಳಿ, ಕಳವಳ ಪಟ್ಟನು. ಅವನು ಪಂಡಿತರನ್ನು ಅಂತರಂಗದಲ್ಲಿ ಕರೆಸಿ, ಅವರನ್ನು ಬೆತ್ಲೆಹೇಮಿಗೆ ಕಳುಹಿಸಿದನು; ಮತ್ತು ಅವನು ಅವರಿಗೆ ಹೇಳಿದ್ದು—ನೀವು ಆ ಕೂಸನ್ನು ಕುರಿತು ಜಾಗ್ರತೆಯಾಗಿ ಪರಿಶೋಧಿಸಿರಿ, ಮತ್ತು ಹಿಂದೆ ಬಂದು ನನಗೆ ತಿಳಿಸಿರಿ, ಆಗ ನಾನು ಸಹ ಬಂದು ಕೂಸಿಗೆ ನಮಸ್ಕರಿಸುವೆನು. (ಆದರೂ ಅರಸನು ಯುಕ್ತಿಯುಳ್ಳವನೂ ಮೋಸಗಾರನೂ ಆಗಿದ್ದನು.) ಪಂಡಿತರು ಬೆತ್ಲೆಹೇಮಿಗೆ ಹೋದರು. ಅವರು ಮೂಡಣದಲ್ಲಿ ಕಂಡ ನಕ್ಷತ್ರವು ಅವರ ಮುಂದೆ ನಡೆ



ಯಿತು; ಮತ್ತು ಅದು ಕೂಸು ಇದ್ದ ಸ್ಥಳದ ಮೇಲೆ ನಿಂತಿತು; ಅವರು ನಕ್ಷತ್ರವನ್ನು ನೋಡಿ, ಅತಿ ಸಂತೋಷ ಪಟ್ಟರು. ಮತ್ತು ಅವರು ಮನೆಯೊಳಗೆ ಹೋಗಿ, ಕೂಸನ್ನು ಕಂಡರು; ಅವರು ಅಡ್ಡ ಬಿದ್ದು, ಅದಕ್ಕೆ ನಮಸ್ಕರಿಸಿದರು; ಮತ್ತು ಅದಕ್ಕೆ ಚಿನ್ನವನ್ನೂ ಧೂಪವ



ನ್ನೂ ಬಾಳೆವನ್ನೂ ಕಾಣಿಕೆಗಳಾಗಿ ಅರ್ಪಿಸಿದರು. ಮತ್ತು ದೇವರು ಸ್ವಪ್ನದಲ್ಲಿ ಪಂಡಿತರಿಗೆ—ಹೆರಾದನ ಬಳಿಗೆ ತಿರಿಗಿ ಹಾಗ ಬಾರದೆಂದು ಹೇಳಿದನು. ಆದ ಕಾರಣ ಅವರು ಬೇರಾಂದು ಮಾರ್ಗವಾಗಿ ತಮ್ಮ ದೇಶಕ್ಕೆ ಹಾದರು.

ಎಲ್ಲಾ ಅರಸುಗಳು ಅವನಿಗೆ ಅಡ್ಡ ಬೀಳುವರು; ಎಲ್ಲಾ ಜನಾಂಗಗಳು ಅವನನ್ನು ಸೇವಿಸುವವು (ಕೀರ್ತ. ೭೨, ೧೧).

---

೪ ಯೋಸೇಫನು ಐಗುಪ್ತಕ್ಕೆ ಓಡಿ ಹೋದದ್ದು

ಕರ್ತನ ದೂತನು ಯಾಸೇಫನ ಬಳಿಗೂ ಬಂದನು. ಆತನು ಅವನಿಗೆ ಹೇಳಿದ್ದು—ನೀನು ಕೂಸನ್ನೂ ಅದರ ತಾಯಿಯನ್ನೂ ತೆಗೆದು ಕಾಂಡು, ಐಗುಪ್ತಕ್ಕೆ ಓಡಿ ಹಾಗು; ಹೆರಾದನು ಕೂಸನ್ನು ನಾಶನ ಮಾಡುವದಕ್ಕೆ ಹುಡುಕುವನು. ಯಾಸೇಫನು ದೂತನು ಹೇಳಿದ ಹಾಗೆ ಮಾಡಿ, ಐಗುಪ್ತಕ್ಕೆ ಹಾದನು. ಪಂಡಿತರು ಹೆರಾದನ ಹತ್ತರ ಹಿಂದೆ ಬಾರದ್ದರಿಂದ, ಅವನು ಬಹಳವಾಗಿ ಕಾಪಗಾಂದನು; ಬೆತ್ಲೆಹೇಮಿನಲ್ಲಿದ್ದ ಎಲ್ಲಾ ಸಣ್ಣ ಮಕ್ಕಳನ್ನು ಕಾಂದು ಹಾಕಿಸಿದನು. ತರುವಾಯ ಹೆರಾದನು ತೀರಿ ಹಾದನು. ಆಗ ಯಾಸೇಫನು ಎದ್ದು, ಕೂಸನ್ನೂ ಅದರ ತಾಯಿಯನ್ನೂ ತೆಗೆದು



ಕಾಂಡು, ಐಗುಪ್ತದಿಂದ ಹಿಂದೆ ಬಂದನು. ಅಪರು ನಜರೇತೆಂಬ ಪಟ್ಟಣದಲ್ಲಿ ವಾಸ ಮಾಡಿದರು.

ಅವನು ಯುಕ್ತಿವಂತರ ಯೋಚನೆಗಳನ್ನು ಮುರಿಯುತ್ತಾನೆ; ಅವರ ಕೈಗಳು ತಾತ್ಪರ್ಯವನ್ನು ನಡಿಸುವದಿಲ್ಲ (ಯೋಬ. ೫, ೧೨).

---

೫ ಯೇಸು ದೇವಾಲಯದಲ್ಲಿ ಇದ್ದದ್ದು

ಯೇಸು ಹನ್ನೆರಡು ವರುಷದ ಹುಡುಗನಾಗಿರುವಾಗ, ಯಾಕೋಬನೂ ಮರಿಯಳೂ ಅವನನ್ನು ಯೆರೂಸಲೇಮಿಗೆ ಪಸ್ಕ ಹಬ್ಬಕ್ಕೆ ಕರಕಾಂಡು ಹೋದರು. ಹಬ್ಬ ಆದ ಮೇಲೆ ಯಾಕೋಬನೂ ಮರಿಯಳೂ ಹಿಂದೆ ಬಂದರು; ಆದರೆ ಹುಡುಗನಾದ ಯೇಸು ಯೆರೂಸಲೇಮಿನಲ್ಲಿ ನಿಂತನು. ಯಾಕೋಬನೂ ಅವನ ತಾಯಿಯೂ ಅದನ್ನು ತಿಳಿಯದೆ ಇದ್ದರು; ಅವರು ಅವನನ್ನು ಹುಡುಕಿದರು; ಆದರೆ ಅವನನ್ನು ಕಾಣಲಿಲ್ಲ. ಆದ ಕಾರಣ ಅವರು ಯೆರೂಸಲೇಮಿಗೆ ತಿರಿಗಿ ಹಾಗಿ, ಅವನನ್ನು ಮೂರು ದಿವಸಗಳ ಮಟ್ಟಿಗೂ ಹುಡುಕಿದ

ರು. ಕಡೆಗೆ ಅವರು ದೇವಾಲಯದಾಳಗೆ ಅವನನ್ನು ಕಂಡು ಕಾಂಡ
ರು. ಅವನು ಅಲ್ಲಿ ಬೋಧಕರ ಮಧ್ಯದಲ್ಲಿ ಕೂತು ಕಾಂಡಿದ್ದನು;




ಅವರನ್ನು ಕೇಳುತ್ತಾ, ಅವರಿಗೆ ಪ್ರಶ್ನೆ ಮಾಡುತ್ತಾ ಇದ್ದನು. ಕೇಳು ವವರೆಲ್ಲರು ಅವನ ವಿವೇಕಕ್ಕೂ ಉತ್ತರಗಳಿಗೂ ಆಶ್ಚರ್ಯ ಪಟ್ಟರು. ಅವನ ತಂದೆ ತಾಯಿ ಅವನನ್ನು ನೋಡಿ, ಭ್ರಮೆಗಾಂಡರು; ಆದ ರೆ ಯೇಸು ಅವರಿಗೆ—ನೀವು ನನ್ನನ್ನು ಹುಡುಕಿದ್ದೇನು? ನಾನು ನನ್ನ ತಂದೆಯ ಮನೆಯಲ್ಲಿ ಇರ ಬೇಕು ಅಂದನು.



ಯೇಸು ಜ್ಞಾನದಲ್ಲಿಯೂ, ನೀಳದಲ್ಲಿಯೂ, ದೇವರ ಮುಂದೆ ಮನುಷ್ಯ ರ ಮುಂದೆ ಕೃಪೆಯಲ್ಲಿಯೂ ಹೆಚ್ಚಿದನು (ಲೂಕ. ೨, ೫೨).

೬ ಯೇಸುವಿನ ಸ್ನಾನ

ಜಕರೀಯನ ಮಗನಾದ ಯೋಹಾನನು ಅರಣ್ಯದಲ್ಲಿ ವಾಸ ಮಾಡಿದನು. ಅವನು ಸಾರಿ—ಮಾನಸಾಂತರ ಪಡಿರಿ, ಪರಲೋಕರಾಜ್ಯವು ಸಮೀಪವಾಯಿತು ಅಂದನು. ಅನೇಕ ಜನರು ಅವನ ಬಳಿಗೆ ಹಾರಟು ಹಾಗಿ, ತಮ್ಮ ಪಾಪಗಳನ್ನು ಅರಿಕೆ ಮಾಡಿದರು; ಮತ್ತು ಯೋಹಾನನು ಅವರಿಗೆ ಯೋರ್ದನಿನಲ್ಲಿ ಸ್ನಾನ ಕೊಟ್ಟನು. ಯೇಸು ಸಹ ಯೋಹಾನನ ಬಳಿಗೆ ಬಂದನು; ಯೋಹಾನನು ಅವನಿಗೆ ಸ್ನಾನ ಕೊಟ್ಟನು; ಕೂಡಲೇ ದೇವರ ಆತ್ಮವು ಪಾರಿವಾಳದ



ಹಾಗೆ ಇಳಿದು, ಯೇಸುವಿನ ಮೇಲೆ ಬಂತು. ಮತ್ತು ದೇವರು ಹೇಳಿದ್ದು—ಇವನೇ ನನ್ನ ಪ್ರಿಯ ಮಗನು, ಇವನಲ್ಲಿ ಆನಂದ ಪಡುತ್ತೇನೆ. ಮತ್ತು ಒಂದು ದಿವಸದಲ್ಲಿ ಯೋಹಾನನು ತನ್ನ ಬಳಿಗೆ ಬರುವ ಯೇಸುವನ್ನು ನೋಡಿ, ತನ್ನ ಶಿಷ್ಯರಿಗೆ ಹೇಳಿದ್ದು—

ಇಗೋ, ಲೋಕದ ಪಾಪವನ್ನು ಹೊತ್ತು ಕೊಂಡು ಹೋಗುವ ದೇವರ ಕುರಿಮರಿಯು (ಯೋಹಾ. ೧, ೨೯).

೭ ಕಾನದಲ್ಲಿ ಆದ ಮದುವೆ

ಕಾನದಲ್ಲಿ ಒಂದು ಮದುವೆ ಆಯಿತು. ಯೇಸುವಿನ ತಾಯಿ ಅಲ್ಲಿ ಇದ್ದಳು. ಇದಲ್ಲದೆ ಯೇಸು, ಅವನ ಶಿಷ್ಯರು ಸಹ ಅದಕ್ಕೆ ಹೋದರು. ಆಗ ಮದುವೆಯವರಿಗೆ ದ್ರಾಕ್ಷೇ ರಸ ಕಡಿಮೆ ಆಯಿತು. ಆರು ಕಲ್ಲಿನ ತೊಟ್ಟಿಗಳು ಅಲ್ಲಿ ಇಟ್ಟಿದ್ದವು. ಯೇಸು ಅವರಿಗೆ—ತೊಟ್ಟಿಗಳಲ್ಲಿ ನೀರು ತುಂಬಿಸಿರಿ ಅಂದನು. ಅವರು ಕಂತದ ಮಟ್ಟಿಗೂ ತುಂಬಿಸಿದರು. ಆಗಲವರಿಗೆ—ಈಗ ಮೊಗದು, ಔತಣದ ಪಾರುಪತ್ಯಗಾರನಿಗೆ ತಕ್ಕಾಂಡು ಹೋಗಿರಿ. ಔತಣದ ಪಾರುಪತ್ಯಗಾರನು ನೀರನ್ನು ರುಚಿ ನೋಡಿದನು (ಆವರೆ ಅದು ನೀರು ಆಗಿರಲಿಲ್ಲ); ಹೀಗಿರಲಾಗಿ ಔತಣದ ಪಾರುಪತ್ಯಗಾರನು ಮದಲಿಂಗನನ್ನು ಕರೆದು—ಈ ದ್ರಾಕ್ಷೇ ರಸ ಮೊದಲಿನಕ್ಕಿಂತ ಒಳ್ಳೇದಾಗಿದೆ ಅಂದನು. ಯೇಸು ನೀರಿನಿಂದ ದ್ರಾಕ್ಷೇ ರಸವನ್ನು ಮಾಡಿದನು. ಯೇಸು ಈ ಲಕ್ಷಣವನ್ನು ಮಾಡಿದದರಿಂದ, ಅವನ ಶಿಷ್ಯರು ಅವನಲ್ಲಿ ವಿಶ್ವಾಸವಿಟ್ಟರು.

ಸಂತೋಷ ಪಡುವವರ ಸಂಗಡ ಸಂತೋಷ ಪಡಿರಿ; ಅಳುವವರ ಸಂಗಡ ಅಳಿರಿ (ರೋಮಾ. ೧೨, ೧೫).

ನಿಮ್ಮ ಹೃದಯಗಳು ಹೊಟ್ಟಿಬಾಕತನದಿಂದಲೂ ಅಮಲಿಂದಲೂ ಭಾರವಾಗಿರದ ಹಾಗೆ ನೋಡಿ ಕಾಳ್ಕಿರಿ. ಸ್ವಸ್ಥ ಚಿತ್ತವಾಗಿ ಪ್ರಾರ್ಥನೆಗಳನ್ನು ಮಾಡುವದಕ್ಕೆ ಎಚ್ಚರಿಕೆಯಾಗಿರ್ರಿ (ಲೂಕ. ೨೧, ೪ಳ. ೧ಪೇತ್ರ. ೪, ೭).

---

೮ ಪೇತ್ರನು ಮೀನು ಹಿಡಿದದ್ದು

ಯೇಸು ಕಪೆನೌಮಿಗೆ ಹೋಗಿ, ಅಲ್ಲಿ ವಾಸ ಮಾಡಿದನು. ಒಂದು ದಿವಸದಲ್ಲಿ ಅವನು ಒಂದು ಕೆರೆಯ ಬಳಿಯಲ್ಲಿ ನಿಂತನು. ಆಗಲು ಜನಸಮೂಹವು ಬಂದರು; ಅವರಿಗೆ ದೇವರ ವಾಕ್ಯವನ್ನು ಕೇಳುವದಕ್ಕೆ ಮನಸ್ಸು ಇತ್ತು. ಅವನು ಒಂದು ಹಡಗದಲ್ಲಿ ಏರಿ, ಸಮೂಹಗಳಿಗೆ ಬೋಧಿಸಿದನು. ಅದರ ಮೇಲೆ ಯೇಸು ಸೀಮೋನನಿಗೆ—ಮೀನುಬೇಟೆಗೆ ನಿಮ್ಮ ಬಲೆಗಳನ್ನು ಇಳಿಸಿರಿ ಅಂದನು.

ಸೀಮೋನನು ಪ್ರತ್ಯುತ್ತರವಾಗಿ—ಅಯ್ಯಾ, ನಾವು ರಾತ್ರಿ ಎಲ್ಲಾ ಕಷ್ಟ ಮಾಡಿದೆವು, ಏನೂ ಶಿಕ್ಕಲಿಲ್ಲ; ಆದಾಗ್ಯೂ ನಿನ್ನ ಮಾತಿನ ಮೇರೆಗೆ ಬಲೆ ಇಳಿಸುತ್ತೇನೆಂದು ಹೇಳಿದನು. ಸೀಮೋನನೂ ಅವನ ಜತೆಯವರೂ ಅದನ್ನು ಮಾಡಿದರು. ಆಗಲು ಮೀನುಗಳ ದಾಡ್ಡ ಸಮೂಹವನ್ನು ಕೂಡಿಸಿದರು. ಸೀಮೋನನು ಅದನ್ನು ನೋಡಿ, ಯೇಸುವಿನ ಮೊಣಕಾಲುಗಳ ಮುಂದೆ ಬಿದ್ದು—ಕರ್ತನೇ, ನನ್ನನ್ನು ಬಿಟ್ಟು ಹೋಗು, ಪಾಪಿಯಾದ ಮನುಷ್ಯನಾಗಿದ್ದೇನೆ ಅಂದನು. ಅವರು ಹಿಡಿದ ಮೀನುಗಳ ರಾಶಿಯ ನಿಮಿತ್ತ ಅವನಿಗೂ ಅವನ ಸಂಗಡ ಇದ್ದವರೆಲ್ಲರಿಗೂ ದಿಗಿಲು ಹುಟ್ಟಿತು. ಆಗ ಯೇಸು ಸೀಮೋನನಿಗೆ ಹೇಳಿದ್ದು—ಭಯ ಪಡ ಬೇಡ; ಈಗಿನಿಂದ ಮನುಷ್ಯರನ್ನು ಹಿಡಿಯುವವನಾಗಿರುವಿ. ಮತ್ತು ಅವರು ಎಲ್ಲಾ ಬಿಟ್ಟು, ಯೇಸುವನ್ನು ಹಿಂಬಾಲಿಸಿದರು; ಅವರು ಯೇಸುವಿನ ಶಿಷ್ಯರಾದರು.

ಕರ್ತನಿಗೆ ಭಯ ಪಡುವವರನ್ನು ಆಶೀರ್ವದಿಸುವನು (ಕೀರ್ತ. ೧೧೫, ೧೩).

ಎಲ್ಲವನ್ನು ಕರ್ತನಾದ ಯೇಸುವಿನ ಹೆಸರಿನಲ್ಲಿ ಮಾಡಿರಿ (ಕೊಲೊ. ೩, ೨೭).

ಯಾವನಾದರು ನನ್ನನ್ನು ಸೇವಿಸಿದರೆ, ನನ್ನನ್ನು ಹಿಂಬಾಲಿಸಲಿ; ಮತ್ತು ನಾನು ಇರುವಲ್ಲಿಯೇ ನನ್ನ ಸೇವಕನು ಸಹ ಇರುವನು (ಯೋಹಾ. ೧೨, ೨೬).

---

೯ ಕುಷ್ಟರೋಗಿಯು

ಒಬ್ಬ ಕುಷ್ಟರೋಗಿ ಯೇಸುವಿನ ಬಳಿಗೆ ಬಂದನು. ಅವನು ಯೇಸುವಿಗೆ ನಮಸ್ಕರಿಸಿ—ಕರ್ತನೇ, ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧ ಮಾಡ ಬಲ್ಲಿ ಅಂದನು. ಆಗ ಯೇಸು ತನ್ನ ಕೈ ಚಾಚಿದನು, ಮತ್ತು ಅವನನ್ನು ಮುಟ್ಟಿ—ಮನಸ್ಸುಂಟು, ಶುದ್ಧವಾಗು ಅಂದನು. ಸಂಗಡಲೇ ಅವನ ಕುಷ್ಟವು ಶುದ್ಧವಾಯಿತು. ಈ ಅದ್ಭುತ ಕೆಲಸ ಅನೇಕ ಜನರಿಗೆ ಸುದ್ದಿ ಆಯಿತು; ಅವರು ಯೇಸುವಿನ ಬಳಿಗೆ

ಬಂದರು. ಅವರಿಗೆ ವಾಕ್ಯವನ್ನು ಕೇಳಲಿಕ್ಕೂ ಅವನಿಂದ ಸ್ವಸ್ಥವಾಗ ಲಿಕ್ಕೂ ಮನಸ್ಸು ಇತ್ತು.

ದೇವರು ನಮಗೆ ರಕ್ಷಣಿಗಳ ದೇವರಾಗಿದ್ದಾನೆ (ಕೀರ್ತ. ೬೮, ೨೦).

---

೧೦ ಪಕ್ಷವಾಯುರೋಗಿ

ಯೇಸು ಕಪೆರ್ನೌಮಿನಲ್ಲಿ ಇದ್ದನು. ಅನೇಕ ಜನರು ಯೇಸು ಇದ್ದ ಮನೆಗೆ ಬಂದರು. ಆ ಬಾಗಲಿನ ಸಮೀಪದಲ್ಲಾದರೂ ಸ್ಥಳ ಸಾಲದ ಹಾಗೆ, ಅಷ್ಟು ಮಂದಿ ಕೂಡಿ ಕಾಂಡರು. ಯೇಸು ಅವರಿಗೆ ವಾಕ್ಯವನ್ನು ಹೇಳಿದನು. ಆಗ ನಾಲ್ಕು ಮಂದಿ ಒಬ್ಬ ಪಕ್ಷವಾಯುವಿನವನನ್ನು ಅವನ ಬಳಿಗೆ ತಂದರು. ಸಮೂಹದ ನಿಮಿತ್ತ ಅವನ ಸಮೀಪಕ್ಕೆ ಬರಲಿಕ್ಕೆ ಆಗಲಿಲ್ಲ; ಅದಕ್ಕಾಗಿ ಅವರು ಯೇಸು ಇದ್ದಲ್ಲಿಯ ಮಾಳಿಗೆ ತೆಗೆದರು, ಮತ್ತು ಪಕ್ಷವಾಯುರಾಗಿ ಬಿದ್ದಿರುವ ಮಂಚವನ್ನು ಇಳಿಸಿದರು. ಯೇಸು ಅವರ ವಿಶ್ವಾಸವನ್ನು ನೋಡಿ,



ಪಕ್ಷವಾಯುರಾಗಿಗೆ ಹೇಳಿದ್ದು — ಮಗನೇ, ಧೈರ್ಯವಾಗಿರು, ನಿನ್ನ ಪಾಪಗಳು ನಿನಗೆ ಪರಿಹರಿಸಲ್ಪಟ್ಟವೆ; ಎದ್ದು, ನಿನ್ನ ಮಂಚವನ್ನು

ಎತ್ತಿ, ನಿನ್ನ ಮನೆಗೆ ಹಾಗು. ಸಂಗಡಲೇ ಅವನು ಎದ್ದು, ತನ್ನ ಮಂಚವನ್ನು ಎತ್ತಿ, ಎಲ್ಲರ ಮುಂದೆ ಹಾರಟು ಹಾದನು. ಅದಕ್ಕೆ ಎಲ್ಲರು ಭ್ರಮಿಸಿ, ದೇವರನ್ನು ಮಹಿಮೆ ಪಡಿಸಿದರು.

ನೀವು ವಿಶ್ವಾಸದಿಂದ ಪ್ರಾರ್ಥನೆಯಲ್ಲಿ ಬೇಡಿ ಕೊಳ್ಳುವದನ್ನೆಲ್ಲಾ ಹಾಂದುವಿರಿ (ಮತ್ತಾ. ೨೧, ೨೨).

ನನ್ನ ಪ್ರಾಣವೇ, ಕರ್ತನನ್ನು ಆಶೀರ್ವದಿಸು; ಅವನು ನಿನ್ನ ಅಕ್ರಮಗಳನ್ನೆಲ್ಲಾ ಮನ್ನಿಸಿ, ನಿನ್ನ ರಾಗಗಳನ್ನು ಸ್ವಸ್ಥ ಮಾಡುತ್ತಾನೆ (ಕೀರ್ತ ೧೦೩, ೨. ೩).

---

೧೧ ನಾಯಿನಿನ ಯೌವನಸ್ಥನು

ಯೇಸು ನಾಯಿನೆಂಬ ಪಟ್ಟಣಕ್ಕೆ ಹಾದನು. ಅವನು ಪಟ್ಟಣದ ಬಾಗಲಿಗೆ ಸಮೀಪಿಸುವಾಗ, ಅಗೋ, ಒಬ್ಬ ಸತ್ತವನನ್ನು ಹಾರಗೆ ತಂದರು. ಈ ಸತ್ತವನು ತನ್ನ ತಾಯಿಗೆ ಒಬ್ಬನೇ ಮಗನಾಗಿದ್ದನು; ತಾಯಿ ವಿಧವೆಯಾಗಿದ್ದಳು; ಬಹು ಸಮೂಹವು ಅವಳ ಸಂಗಡ ಇದ್ದರು. ಕರ್ತನು ಅವಳನ್ನು ನೋಡಿ ಅವಳ ಮೇಲೆ ಅಂತಃಕರಣವಿಟ್ಟು, ಅವಳಿಗೆ—ಅಳ ಬೇಡ ಅಂದನು. ಮತ್ತು ಹತ್ತರ ಹಾಗಿ, ಸತ್ತವನು ಇದ್ದ ಪೆಟ್ಟಿಗೆಯನ್ನು ಮುಟ್ಟಿದನು. ಆಗಲು ಹಾರುವವರು ನಿಂತರು. ಯೇಸು ಸತ್ತವನಿಗೆ—ಯೌವನಸ್ಥನೇ, ಏಳು ಅಂದನು. ಆಗ ಸತ್ತವನು ಕೂತು ಕಾಂದು ಮಾತಾಡಿದನು. ಯೇಸು



ಅವನನ್ನು ಅವನ ತಾಯಿಗೆ ಕಾಟ್ಟನು. ಎಲ್ಲರಿಗೆ ಭಯ ಹಿಂಡಿಯಿತು. ಅವರು ದೇವರನ್ನು ಮಹಿಮೆ ಪಡಿಸಿ, ಮಹಾ ಪ್ರವಾದಿಯು ನಮ್ಮಲ್ಲಿ ಎದ್ದಿದ್ದಾನೆ ಅಂದರು.

ದೇವರು ನಮಗೆ ರಕ್ಷಣಿಗಳ ದೇವರಾಗಿದ್ದಾನೆ; ನಮ್ಮ ಕರ್ತನಾದ ಯೆಹೋವನಿಗೆ ಮರಣದಿಂದ ಹೊರಡೋಣಿಗಳು ಉಂಟು (ಕೀರ್ತ. ೬೮, ೨೦).

---

೧೨ ಯೇಸು ಐದು ಸಾವಿರ ಮಂದಿಯನ್ನು ತೃಪ್ತಿ ಪಡಿಸಿದ್ದು

ಯೇಸು ತನ್ನ ಶಿಷ್ಯರ ಸಂಗಡ ಒಂದು ಕಾಡಿಗೆ ಹೋದನು. ಬಹು ಸಮೂಹವು ಅವನ ಬಳಿಗೆ ಕೂಡಿ ಬಂದರು; ಯೇಸು ಅವರಿಗೆ ಬೋಧನೆ ಕಾಟ್ಟು, ಅಸ್ವಸ್ಥವಾದವರನ್ನು ಸ್ವಸ್ಥ ಮಾಡಿದನು. ಸಾಯಂಕಾಲವಾಯಿತು; ಆಗ ಯೇಸು ತನ್ನ ಶಿಷ್ಯರಿಗೆ—ನೀವು ಜನರಿಗೆ ಉಣ್ಣ ಕಾಪಿರಿ ಅಂದನು. ಅಂದ್ರೇಯನೆಂಬ ಶಿಷ್ಯನು ಯೇಸುವಿಗೆ ಉತ್ತರ ಕಾಟ್ಟು—ಇಲ್ಲಿ ಐದು ರಾಟ್ಟಿಗಳೂ ಎರಡು ಮೀನುಗಳೂ ಉಂಟು, ಆದರೆ ಅಷ್ಟು ಜನರಿಗೆ ಇದೇನು ಅಂದನು. ಅದಕ್ಕೆ ಯೇಸು ಅಪ್ಪಣೆ ಕಾಟ್ಟು—ಜನರನ್ನು ಪಂಕ್ತಿಪಂಕ್ತಿಗಳಾಗಿ ಕೂಡ್ರಿಸಿರಿ ಅಂದನು. ಅವನು ಐದು ರಾಟ್ಟಿಗಳನ್ನೂ ಎರಡು ಮೀನುಗಳನ್ನೂ ತೆಗದು ಕಾಂಡನು; ಮತ್ತು ಆಕಾಶಕ್ಕೆ ನೋಡಿ, ಸ್ತೋತ್ರ ಮಾ



ಡಿದನು; ಅದರ ಮೇಲೆ ರೊಟ್ಟಿಗಳನ್ನು ಮುರಿದು, ಶಿಷ್ಯರಿಗೆ ಕೊಟ್ಟನು. ಶಿಷ್ಯರು ಕೂತು ಕೊಂಡವರಿಗೆ ಹಂಚಿದರು; ಅದೇ ಪ್ರಕಾರ ಮೀನುಗಳಲ್ಲಿಯೂ ಬೇಕಾದಷ್ಟು ಹಂಚಿದರು. ಎಲ್ಲರೂ ತಿಂದು ತೃಪ್ತಿಯಾದರು. ಅದು ಅಲ್ಲದೆ ಹನ್ನೆರಡು ಪುಟ್ಟಿ ತುಂಡುಗಳು ಉಳಿದವು. ತಿಂದವರು ಹೆಚ್ಚು ಕಡಿಮೆ ಐದು ಸಾವಿರ ಗಂಡಸರಾಗಿದ್ದರು.

ಮೊದಲು ದೇವರ ರಾಜ್ಯವನ್ನೂ ಅವನ ನೀತಿಯನ್ನೂ ಹುಡುಕಿರಿ; ಆಗ ಇವುಗಳೆಲ್ಲಾ ನಿಮಗೆ ಕೂಡಾ ಕೊಡಲ್ಪಡುವವು (ಮತ್ತಾ. ೬, ೩೩).

ಕರ್ತನನ್ನು ಕೊಂಡಾಡಿರಿ, ಯಾಕಂದರೆ ಅವನು ಒಳ್ಳೇಯವನು; ಯಾಕಂದರೆ ಅವನ ಕೃಪೆಯು ಯುಗಯುಗಕ್ಕೂ ಅದೆ (ಕೀರ್ತ. ೧೦೬, ೧).

---

೧೩ ಯೇಸು ಸಮುದ್ರದ ಮೇಲೆ ನಡೆದದ್ದು

ಯೇಸು ಒಂಟಿಯಾಗಿ ಒಂದು ಬೆಟ್ಟಕ್ಕೆ ಏರಿ, ಪ್ರಾರ್ಥನೆ ಮಾಡಿದನು. ಶಿಷ್ಯರು ಹಡಗವನ್ನೇರಿ, ಆಚೆಗೆ ಹೋದರು. ಆಗ ದೊಡ್ಡ ಘಾಳಿ ಬೀಸಿತು; ಹಡಗವು ತೆರೆಗಳಿಂದ ಬಡಿಯಲ್ಪಡುತ್ತಿತ್ತು. ತರುವಾಯ ಯೇಸು ಸಮುದ್ರದ ಮೇಲೆ ನಡದು ಕೊಳ್ಳುತ್ತಾ, ಅವರ ಬಳಿಗೆ ಬಂದನು. ಶಿಷ್ಯರು ಆತನನ್ನು ನೋಡಿ, ಭಯ ಪಟ್ಟರು; ಅವರಿಗೆ ಯೇಸುವಿನ ಗುರುತು ಶಿಕ್ಕಲಿಲ್ಲ, ಅದಕ್ಕಾಗಿ ಭಯದಿಂದ ಕೂಗಿದರು. ಸಂಗಡಲೇ ಯೇಸು — ನಾನೇ, ಭಯ ಪಡ ಬೇಡಿರಿ ಅಂದನು. ಪೇತ್ರನು ಅವನಿಗೆ ಪ್ರತ್ಯುತ್ತರವಾಗಿ — ಕರ್ತನೇ, ನೀನಾದರೆ ನೀರಿನ ಮೇಲೆ ನಿನ್ನ ಬಳಿಗೆ ಬರ ನನಗೆ ಅಪ್ಪಣೆ ಕೊಡು ಅಂದನು; ಯೇಸು — ಬಾ ಅಂದನು. ಹೀಗೆ ಪೇತ್ರನು ಹಡಗದಿಂದ ಇಳಿದು, ಯೇಸುವಿನ ಬಳಿಗೆ ಹೋಗಲಿಕ್ಕೆ, ನೀರಿನ ಮೇಲೆ ನಡೆದನು. ಆದರೆ ಘಾಳಿ ಬಲವಾಗಿರುವದನ್ನು ನೋಡಿ ಭಯ ಪಟ್ಟನು. ಮತ್ತು ಮುಣುಗ ಆರಂಭಿಸಿ — ಕರ್ತನೇ, ನನ್ನನ್ನು ರಕ್ಷಿಸೆಂದು ಕೂಗಿದನು. ಸಂಗಡಲೇ ಯೇಸು ಅವನನ್ನು ಹಿಡಿದು — ಯಾಕೆ ಸಂದೇಹ



ಪಟ್ಟಿ ಎಂದು ಅವನಿಗೆ ಹೇಳಿದನು. ತರುವಾಯ ಅವರು ಹಡಗವನ್ನೇರಿದಾಗ ಘಾಳಿಯು ನಿಂತಿತು, ಮತ್ತು ಹಡಗ ಆಚೆಯಲ್ಲಿ ಶೇರಿತು. ಹಡಗದಲ್ಲಿದ್ದವರು ಅವನಿಗೆ ನಮಸ್ಕರಿಸಿ—ನೀನು ನಿಜವಾಗಿ ದೇವರ ಮಗನಾಗಿದ್ದೀ ಅಂದರು.

ನಿನ್ನ ಬಲಗ್ಯೆಯನ್ನು ಹಿಡಿದು—ಭಯಪಡ ಬೇಡ, ನಾನು ನಿನಗೆ ಸಹಾಯ ಮಾಡುತ್ತೇನೆಂದು ನಿನಗೆ ಹೇಳುವವನು ನಿನ್ನ ದೇವರಾಗಿರುವ ಯೆಹೋವನಾದ ನಾನೇ (ಯೆಶಾ. ೪೧, ೧೩).

---

೧೪ ಯೇಸು ಕೂಸುಗಳನ್ನು ಆಶೀರ್ವದಿಸಿದ್ದು

ಕೆಲವು ಮಂದಿ ತಾಯಂದಿಯರು ತಮ್ಮ ಕೂಸುಗಳನ್ನು ಯೇಸುವಿನ ಬಳಿಗೆ ತಂದರು. ಆದರೆ ಶಿಷ್ಯರು ತಂದವರನ್ನು ಗದರಿಸಿದರು. ಯೇಸು ಅದನ್ನು ನೋಡಿ ಕೋಪಿಸಿದನು. ಮತ್ತು ಅವರಿಗೆ ಹೇಳಿದ್ದು—ಅಡ್ಡಿ ಮಾಡದೆ ಕೂಸುಗಳು ನನ್ನ ಬಳಿಗೆ ಬರಗಾಡಿಸಿರಿ, ಯಾಕಂದರೆ ದೇವರ ರಾಜ್ಯವು ಇಂಥವರದಾಗಿದೆ. ಮತ್ತು ಯೇಸು ಕೂಸುಗಳನ್ನು ಅಪ್ಪಿ ಕೊಂಡು, ಅವುಗಳ ಮೇಲೆ ಕೈಗಳನ್ನಿಟ್ಟು, ಅವುಗಳನ್ನು ಆಶೀರ್ವದಿಸಿದನು.



ಇಂಥಾ ಕೂಸನ್ನು ನನ್ನ ಹೆಸರಿನಲ್ಲಿ ಅಂಗೀಕರಿಸುವವನ್ಯಾವನಾ, ಅವನು ನನ್ನನ್ನು ಅಂಗೀಕರಿಸುತ್ತಾನೆ (ಮತ್ತಾ. ೧೪, ೫).

---

೧೫. ನತ್ತಿ ಮಾತಾಡುವ ಕಿವಡನು

ಯೇಸು ಸಮುದ್ರದ ಬಳಿಯಲ್ಲಿ ಇದ್ದನು. ಆಗ ನತ್ತಿ ಮಾತಾಡುವ ಕಿವಡನನ್ನು ಅವನ ಬಳಿಗೆ ತಂದರು; ಅವನ ಮೇಲೆ ಕೈ ಇಡ ಬೇಕೆಂದು ಬೇಡಿ ಕಾಂಡರು. ಯೇಸು ಅವನನ್ನು ಸಮೂಹದಿಂದ ಏಕಾಂತವಾಗಿ ಕರಕಾಂಡು ಹಾದನು. ಅವನು ತನ್ನ ಬೆರಳುಗಳನ್ನು ಅವನ ಕಿವಿಗಳಲ್ಲಿ ಹಾಕಿ ಉಗುಳಿದನು; ಅವನ ನಾಲಿಗೆಯನ್ನು ಮುಟ್ಟಿದನು. ಮತ್ತು ಆಕಾಶಕ್ಕೆ ನೋಡಿ, ಮೂಲುಗಿ — ತೆರೆದಾಗು ಎಂದು, ಅವನಿಗೆ ಹೇಳಿದನು. ಸಂಗಡಲೇ ಅವನ ಕಿವಿಗಳು ತೆರೆಯಲ್ಪಟ್ಟವು, ಮತ್ತು ಅವನು ಚನ್ನಾಗಿ ಮಾತಾಡಿದನು. ಜನ ಅತ್ಯಧಿಕವಾಗಿ ಆಶ್ಚರ್ಯ ಪಟ್ಟು ಹೇಳಿದ್ದೇನಂದರೆ —

ಯೇಸು ಎಲ್ಲಾ ಚನ್ನಾಗಿ ಮಾಡಿದ್ದಾನೆ; ಕಿವಡರು ಕೇಳುವ ಹಾಗೆಯೂ ಮೂಕರು ಮಾತಾಡುವ ಹಾಗೆಯೂ ಮಾಡುತ್ತಾನೆ (ಮಾರ್ಕ. ೭, ೩೭).

---

೧೬ ಕುರುಡನು

ಯೇಸು ಯೆರೂಸಲೇಮಿಗೆ ಹಾದನು; ಹಾಗುವಾಗ ಹುಟ್ಟು ಕುರುಡನಾದ ಮನುಷ್ಯನನ್ನು ಕಂಡನು. ಅವನು ನೆಲದ ಮೇಲೆ ಉಗುಳಿ, ಉಗುಳಿನಿಂದ ಕೆಸರು ಮಾಡಿದನು; ಕೆಸರನ್ನು ಕುರುಡನ ಕಂಣುಗಳಿಗೆ ಹಚ್ಚಿದನು; ಮತ್ತು ಕುರುಡನಿಗೆ—ನೀನು ಹಾಗಿ, ಸಿಲಾಂವ ಕಾಳದಲ್ಲಿ ತಾಳೆದುಕಾ ಅಂದನು. ಕುರುಡನು ಹಾಗಿ, ತಾಳ ಕಾಂಡು, ನಾಡುವವನಾಗಿ ಬಂದನು. ಜನರು ಆಶ್ಚರ್ಯ ಪಟರು; ಆದರೆ ಕುರುಡನು ಯೇಸುವಿನ ಹತ್ತರ ಹಾಗಿ, ಅವನನ್ನು ನಂಬಿ, ಅವನಿಗೆ ಸಮಸ್ಕರಿಸಿದನು.

ಕುರುಡರು ದೃಷ್ಟಿ ಹಾಂದುತ್ತಾರೆ, ಕುಂಟರು ನಡಿಯುತ್ತಾರೆ, ಕುಷ್ಟರಾಗಿಗಳು ಶುಚಿ ಆಗುತ್ತಾರೆ, ಕಿವಡರು ಕೇಳುತ್ತಾರೆ, ಸತ್ತವರು ಎಬ್ಬಿಸಲ್ಪಡುತ್ತಾರೆ, ಬಡವರಿಗೆ ಸುವಾರ್ತೆ ಪ್ರಸಂಗಿಸಲ್ಪಡುತ್ತದೆ (ಮತ್ತಾ. ೧೧, ೫೧).

---

೧೭ ಅಂತಃಕರಣ ಉಳ್ಳ ಸಮಾರ್ಯನು

ಯೇಸು ಒಂದು ವರ್ತಮಾನ ಹೇಳಿದ್ದೇನಂದರೆ—ಒಬ್ಬ ಮನುಷ್ಯನು ಯೆರೂಸಲೇಮಿನಿಂದ ಯೆರಿಕಾವಿಗೆ ಇಳಿದು ಹಾದನು; ಮಾರ್ಗದಲ್ಲಿ ಕಳ್ಳರಾಳಗೆ ಬಿದ್ದನು. ಇವರು ಅವನ ವಸ್ತ್ರಗಳನ್ನು ತೆಗದು, ಅವನಿಗೆ ಪೆಟ್ಟು ಹಾಡೆದರು, ಮತ್ತು ಅವನನ್ನು ಅರೆಪ್ರಾಣದಲ್ಲಿ ಬಿಟ್ಟು ಹಾದರು. ಆಗ ಆ ಮಾರ್ಗದಲ್ಲಿ ಒಬ್ಬ ಯಾಜಕನು ಬಂದನು; ಅವನು ಬಿದ್ದವನನ್ನು ನಾಡಿದನು, ಆದರೂ ಸಹಾಯ ಮಾಡದೆ, ವಾರೆಯಾಗಿ ಹಾದನು. ಅದೇ ಪ್ರಕಾರ ಒಬ್ಬ ಲೇವ್ಯನು ಬಂದನು; ಅವನು ಸಹ ಬಿದ್ದವನನ್ನು ನಾಡಿದನು, ಆದರೂ ಸಹಾಯ ಮಾಡದೆ; ವಾರೆಯಾಗಿ ಹಾದನು. ಆದರೆ ಒಬ್ಬ ಸಮಾರ್ಯನು ಅವನ ಹತ್ತರ ಬಂದು, ಅಂತಃಕರಣ ಪಟ್ಟನು; ಇವನು ಅವನ ಘಾಯಗಳಲ್ಲಿ ಎಣ್ಣೆಯನ್ನೂ ದ್ರಾಕ್ಷೇ ರಸವನ್ನೂ ಹಾಯಿದ

ನು; ಘಾಯಗಳನ್ನು ಕಟ್ಟಿದನು; ಮತ್ತು ಅವನನ್ನು ಸ್ವಂತ ವಾಹನ ದ ಮೇಲೆ ಏರಿಸಿ, ಒಂದು ಛತ್ರಕ್ಕೆ ತಕ್ಕೊಂಡು ಹೋದನು; ಅಲ್ಲಿ ಅ



ವನನ್ನು ಪರಾಮರಿಸಿದನು. ಮಾರನೇ ದಿವಸದಲ್ಲಿ ಸಮಾರ್ಯನು ಹೊರಟು ಹೋಗುವಾಗ, ಅವನು ಎರಡು ಹಣಗಳನ್ನು ಛತ್ರದವನಿಗೆ ಕೊಟ್ಟು, ಅವನಿಗೆ ಹೇಳಿದ್ದು — ಇವನನ್ನು ಪರಾಮರಿಸು; ನಾನು ತಿರಿಗಿ ಬರುವಾಗ, ನೀನು ಹೆಚ್ಚು ವೆಚ್ಚ ಮಾಡಿದ್ದನ್ನು ನಿನಗೆ ಕೊಡುತ್ತೇನೆ. ಅದರ ಮೇಲೆ ಯೇಸು ಹೇಳಿದ್ದು — ನೀನೂ ಹೋಗಿ, ಅದೇ ಪ್ರಕಾರ (ಅಂತಃಕರಣ ಮಾಡಿದವನ ಹಾಗೆ) ಮಾಡು ಅಂದನು.

ಕರುಣೆಯುಳ್ಳವರು ಭಾಗ್ಯವಂತರು; ಯಾಕಂದರೆ ಅವರು ಕರುಣೆಸಲ್ಪಡುವರು (ಮತ್ತಾ. ೫, ೭).

---

೧೮ ಮಾರ್ಥಳೂ ಮರಿಯಳೂ

ಒಂದಾನ್ನದಲ್ಲಿ ಇಬ್ಬರು ಚಕ್ಕಿ ಉಳ್ಳ ಸಹೋದರಿಗಳು ವಾಸವಾಗಿದ್ದರು. ಅವರ ಹೆಸರುಗಳು — ಮಾರ್ಥಳೂ ಮರಿಯಳೂ. ಯೇಸು ಅವರ ಹತ್ತರ ಹೋದನು. ಮರಿಯಳು ಯೇಸುವಿನ ಪಾದಗಳ ಬಳಿಯಲ್ಲಿ ಕೂತು ಕೊಂಡು, ಅವನ ವಾಕ್ಯವನ್ನು ಕೇಳಿದಳು;

ಆದರೆ ಮಾರ್ಥಳು ಬಹಳ ಸೇವೆಯಿಂದ ತಾಂದರೆ ಪಟ್ಟಳು. ಮರಿಯಳು ತನಗೆ ಸಹಾಯ ಮಾಡದದರಿಂದ, ಮಾರ್ಥಳು ಯೇಸುವಿನ ಹತ್ತರ ಬಂದು, ಹೇಳಿದ್ದು — ಕರ್ತನೇ, ಮರಿಯಳು ನನಗೆ ಸಹಾಯ ಮಾಡ ಬೇಕೆಂದು ಅವಳಿಗೆ ಹೇಳು. ಆದರೆ ಯೇಸು ಪ್ರತ್ಯುತ್ತರವಾಗಿ ಅವಳಿಗೆ ಹೇಳಿದ್ದೇನಂದರೆ — ಮಾರ್ಥಳೇ, ಮಾರ್ಥಳೇ, ಅ



ನೇಕವಾದವುಗಳಿಗಾಸ್ಕರ ಚಿಂತೆ ತಾಂದರೆ ಪಡುತ್ತಿ; ಆದರೆ ಬೇಕಾದದ್ದು ಒಂದೇ; ಮರಿಯಳು ಒಳ್ಳೇ ಪಾಲನ್ನು ಆದು ಕಾಂಡಿದ್ದಾಳೆ.

ದೇವರ ರಾಜ್ಯವೂ ಆಹಾರವೂ ಪಾನವೂ ಅಲ್ಲ, ನೀತಿಯೂ ಸಮಾಧಾನವೂ ಪರಿಶುದ್ಧಾತ್ಮದಿಂದಾಗುವ ಸಂತೋಷವೂ ಆಗಿದೆ (ರೋಮಾ. ೧೪ಳ, ೧೭).

---

೧೫ ಯೇಸು ತನ್ನ ಶಿಷ್ಯರಿಗೆ ಪ್ರಾರ್ಥನೆ ಮಾಡ ಬೋಧಿಸಿದ್ದು

ಯೇಸು ಒಂದು ಸಾರಿ ಪ್ರಾರ್ಥನೆ ಮಾಡಿದನು; ಒಬ್ಬ ಶಿಷ್ಯನು ಅವನಿಗೆ — ಕರ್ತನೇ, ಪ್ರಾರ್ಥನೆ ಮಾಡ ನಮಗೆ ಬೋಧಿಸು ಅಂದನು. ಯೇಸು ಅವರಿಗೆ ಹೇಳಿದ್ದು — ನೀವು ಈ ಪ್ರಕಾರ ಪ್ರಾರ್ಥನೆ ಮಾಡಿರಿ — ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು

ಪರಿಶುದ್ಧವಾಗಲಿ; ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಪಗಲಾಕದಲ್ಲಿ ಆಗುವ ಪ್ರಕಾರ ಭೂಮಿಯ ಮೇಲೆಯೂ ಆಗಲಿ, ನಮ್ಮ ಅನುದಿನದ ರಾಟ್ಟಿಯನ್ನು ಈ ಹಾತ್ತು ನಮಗೆ ಕಾಡು; ನಾವು ನಮ್ಮ ಸಾಲಗಾರರಿಗೆ ಬಿಡುವ ಪ್ರಕಾರ, ನಮ್ಮ ಸಾಲಗಳನ್ನು ನಮಗೆ ಬಿಡು. ನಮ್ಮನ್ನು ಶೋಧನೆಯಲ್ಲಿ ಶೇರಿಸದೆ, ಕೇಡಿನಾಳಗಿಂದ ನಮ್ಮನ್ನು ತಪ್ಪಿಸು. ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಎಂದೆಂದಿಗೂ ನಿನ್ನವೇ. ಆಮೆನ್.

ನೀವು ಪ್ರಾರ್ಥನೆ ಮಾಡುವಾಗ, ಜನಾಂಗಗಳವರ ಹಾಗೆ ವ್ಯರ್ಥ ಮಾತುಗಳನ್ನು ಆಡ ಬೇಡಿರಿ. ಯಾಕಂದರೆ ಅವರು ತಮ್ಮ ಬಹು ಮಾತುಗಳಿಗಾಸ್ತರ ಕೇಳಲ್ಪಡುವೆವೆಂದು ನೆನಸುತ್ತಾರೆ (ಮತ್ತಾ. ೬, ೭).

---

೨೦ ಫರಿಸಾಯನೂ ಸುಂಕದವನೂ

ಯೇಸು ಒಂದು ಸಾರಿ ಹೇಳಿದ್ದೇನಂದರೆ — ಇಬ್ಬರು ಮನುಷ್ಯರು ಪ್ರಾರ್ಥನೆ ಮಾಡ ದೇವಾಲಯಕ್ಕೆ ಏರಿ ಹೋದರು. ಒಬ್ಬನು ಫರಿಸಾಯನು, ಮತ್ತೊಬ್ಬನು ಸುಂಕದವನು. ಫರಿಸಾಯನು ಪ್ರಾರ್ಥಿಸಿದ್ದು — ದೇವರೇ, ನಾನು ನಿನಗೆ ಸ್ತೋತ್ರ ಮಾಡುತ್ತೇನೆ; ನಾನು ಕಳ್ಳನಲ್ಲ, ನಾನು ಅನೀತಿವಂತನಲ್ಲ, ನಾನು ವ್ಯಭಿಚಾರಿಯಲ್ಲ, ನಾನು ಈ ಸುಂಕದವನ ಹಾಗೆಯೂ ಅಲ್ಲ; ನಾನು ಬಹಳ ಒಳ್ಳೇದನ್ನು ಮಾಡುತ್ತೇನೆ ಅಂದನು. ಆದರೆ ಸುಂಕದವನು ದೂರದಲ್ಲಿ ನಿಂತನು; ಅವನು ಕಣ್ಣುಗಳನ್ನಾದರೂ ಆಕಾಶಕ್ಕೆ ಎತ್ತ ಮನಸ್ಸಿಲ್ಲದವನಾಗಿದ್ದನು, ತನ್ನ ಎದೆಗೆ ಬಡಕಾಂಡನು, ಮತ್ತು — ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಎಂದು ಪ್ರಾರ್ಥಿಸಿದನು. ದೇವರು ಸುಂಕದವನಿಗೆ ಪಾಪಗಳನ್ನು ಬಿಟ್ಟನು; ಫರಿಸಾಯನಿಗೆ ಪಾಪಗಳನ್ನು ಬಿಡಲಿಲ್ಲ. ಫರಿಸಾಯನು ತನ್ನನ್ನು ನೀತಿವಂತನೆಂದು ನಿಶ್ಚಯಿಸಿ ಕಾಂಡನು, ತನ್ನನ್ನು ಹೆಚ್ಚಿಸಿ ಕಾಂಡನು. ಸುಂಕದವನು ತನ್ನನ್ನು ಪಾಪಿಷ್ಟನೆಂದು ತಿಳುಕಾಂಡನು, ತನ್ನನ್ನು ತಗ್ಗಿಸಿ ಕಾಂಡನು.

ತನ್ನನ್ನು ಹೆಚ್ಚಿಸಿ ಕಾಳ್ಳುವವನು ತಗ್ಗಿಸಲ್ಪಡುವನು, ಆದರೆ ತನ್ನನ್ನು ತಗ್ಗಿಸಿ ಕಾಳ್ಳುವವನು ಹೆಚ್ಚಿಸಲ್ಪಡುವನು (ಲೂಕ. ೧೪, ೧೪).

---

೨೧ ತಪ್ಪಿ ಹೋದ ಮಗನು

ಯೇಸು ಹೇಳಿದ್ದೇನಂದರೆ—ಒಬ್ಬ ಮನುಷ್ಯನಿಗೆ ಇಬ್ಬರು ಮಕ್ಕಳಿದ್ದರು. ಚಿಕ್ಕವನು ತಂದೆಗೆ—ತಂದೆಯೇ, ಆಸ್ತಿಯಲ್ಲಿ ನನಗೆ ಬರತಕ್ಕ ಪಾಲನ್ನು ನನಗೆ ಕಾಡು ಅಂದನು. ತಂದೆ ಮಕ್ಕಳಿಗೆ ಬದುಕನ್ನು ಪಾಲಿಟ್ಟನು. ಕೆಲವು ದಿವಸಗಳ ಮೇಲೆ ಚಿಕ್ಕವನು ದೂರ ದೇಶಕ್ಕೆ ಹಾರಟನು. ಅಲ್ಲಿ ಅವನು ದುಂದುಗಾರನಾಗಿ ಬದುಕಿದನು; ಹೀಗೆ ತನ್ನ ಆಸ್ತಿಯನ್ನು ಹಾಳು ಮಾಡಿದನು. ಆಗ ಆ ದೇಶದಲ್ಲಿ ಘೋರವಾದ ಬರ ಉಂಟಾಯಿತು; ಮತ್ತು ಅವನು ಕಾರತೆ ಪಟ್ಟನು. ಅದಕ್ಕಾಗಿ ಅವನು ಆ ದೇಶಸ್ಥರಲ್ಲಿ ಒಬ್ಬನನ್ನು ಹಾಂದಿ ಕಾಂಡನು. ಇವನು ಅವನನ್ನು ತನ್ನ ಹಂದಿಗಳನ್ನು ಮೇಯಿಸುವದಕ್ಕೆ ಕಳುಹಿಸಿದನು. ಅವನಿಗೆ ಬಹಳ ಹಶಿವೆ ಇದ್ದದರಿಂದ, ಹಂದಿಗಳು ತಿನ್ನುವ ಹಿಂಡಿನಿಂದ ತನ್ನ ಹಾಟ್ಟೆ ತುಂಬಿಸಿ ಕಾಳ್ಳ ಅಪೇಕ್ಷೆ ಮಾಡಿ



ದನು; ಯಾರೂ ಅವನಿಗೆ ಕಾಡಲಿಲ್ಲ. ಆಗ ಅವನು ತೆಪ್ಪರಿಸಿ ಕಾಂಡು—ನನ್ನ ತಂದೆಯ ಹತ್ತರ ಎಷ್ಟೋ ಮಂದಿ ಕೂಲಿಯವರು ಇ

ದ್ದಾರೆ; ಅವರಿಗೆ ತುಂಬ ಉಂಟು, ಆದರೆ ನಾನು ಇಲ್ಲಿ ಹಸಿವೆಯಿಂ
ದ ಸಾಯುತ್ತೇನೆ; ನಾನು ನನ್ನ ತಂದೆಯ ಬಳಿಗೆ ಹಾಗುತ್ತೇನೆ;
ನಾನು ಪಾಪ ಮಾಡಿದ್ದೇನೆ, ನನ್ನನ್ನು ಕೂಲಿಯವನಂತೆ ಮಾಡು ಎಂ
ದು ಹೇಳುವೆನು ಅಂದನು. ಹಾಗೆಯೆ ಅವನು ಎದ್ದು, ತನ್ನ ತಂ
ದೆಯ ಬಳಿಗೆ ಬಂದನು. ಅವನು ಇನ್ನೂ ದೂರವಲ್ಲಿರುವಾಗ ತಂ
ದೆಯು ಅವನನ್ನು ನೋಡಿ, ಅವನಿಗೆ ಅಂತಃಕರಣ ಮಾಡಿದನು; ಅವ
ನಿಗೆ ಎದುರು ಓಡಿದನು; ಅವನ ಕೊರಳಿನ ಮೇಲೆ ಬಿದ್ದು, ಅವನನ್ನು
ಮುದ್ದಿಟ್ಟನು. ಆಗಲು ಮಗನು ತಂದೆಗೆ ಹೇಳಿದ್ದು —ತಂದೆಯೇ,



ನಾನು ಪರಲೋಕಕ್ಕೆ ವಿರೋಧವಾಗಿಯೂ, ನಿನ್ನ ಮುಂದೆಯೂ ಪಾ
ಪ ಮಾಡಿದ್ದೇನೆ, ನಾನು ಇನ್ನು ನಿನ್ನ ಮಗನೆಂದು ಕರೆಯಲ್ಪಡ
ಯೋಗ್ಯನಲ್ಲ ಅಂದನು. (ಆದರೂ ತಂದೆಯು ಮಗನಿಗೆ ಕ್ಷಮಿಸಿದ
ನು.) ತಂದೆಯು ತನ್ನ ದಾಸರಿಗೆ ಹೇಳಿದ್ದು —ನೀವು ಶ್ರೇಷ್ಠವಾದ
ಅಂಗಿ ತಂದು, ಅವನಿಗೆ ಹಾಕ್ದಿಸಿರಿ; ಅವನಿಗೆ ಒಂದು ಉಂಗ
ರವನ್ನೂ ಕೆರಗಳನ್ನೂ ಕಾಡಿರಿ; ಕಾಬ್ದಿದ ಕರುವನ್ನು ಕಾಯ್ಕುರಿ; ನಾ

ವು ಉಂಡು ಆನಂದ ಪಡುವ; ಯಾಕಂದರೆ ನನ್ನ ಮಗನು ಸತ್ತವನಾ
ಗಿದ್ದು, ತಿರಿಗಿ ಬದುಕಿದ್ದಾನೆ, ಕಳೆದು ಹೋದವನಾಗಿದ್ದು, ಶಿಕ್ಕಿದ್ದಾನೆ.

ಮಾನಸಾಂತರ ಪಡುವ ಒಬ್ಬ ಪಾಪಿಗಾಸ್ಕರ ಪರಲೋಕದಲ್ಲಿ ಸಂತೋ
ಷ ಇರುವದು (ಲೂಕ. ೧೫, ೭).

---

೨೨ ಐಶ್ವರ್ಯವಂತನೂ ಬಡವನಾದ ಲಾಜರನೂ

ಯೇಸು ಹೇಳಿದ್ದೇನಂದರೆ — ಐಶ್ವರ್ಯವಂತನಾದ ಒಬ್ಬ ಮನು
ಷ್ಯನಿದ್ದನು. ಅವನು ರಕ್ತಾಂಬರವನ್ನೂ ನಾರುಮಡಿಯನ್ನೂ ಹಾ
ದ್ದು ಕಾಂಡನು; ದಿನದಿನ ಸಂಭ್ರಮವಾಗಿ ಆನಂದ ಪಟ್ಟನು. ಮ
ತ್ತು ಲಾಜರನೆಂಬ ಬಡವನೂ ಇದ್ದನು. ಇವನು ಹುಣ್ಣು ತುಂಬಿ
ದವನಾಗಿದ್ದನು; ಅವನು ಐಶ್ವರ್ಯವಂತನ ಬಾಗಲಲ್ಲಿ ಬಿದ್ದಿದ್ದನು;
ಅವನ ಮೇಜಿನಿಂದ ಬೀಳುವ ಎಂಜಲಿಂದ ತೃಪ್ತಿ ಆಗುವದಕ್ಕೆ ಅಪೇ
ಕ್ಷಿಸಿದನು. ನಾಯಿಗಳು ಸಹ ಬಂದು, ಅವನ ಹುಣ್ಣುಗಳನ್ನು ನೆಕ್ಕಿ



ದವು. ತರುವಾಯ ಈ ಬಡವನು ಸತ್ತು ಹೋದನು; ದೂತರು ಅ
ವನನ್ನು ಅಬ್ರಿಹಾಮನ ಎದೆಗೆ ವೈದರು. ಐಶ್ವರ್ಯವಂತನೂ ಸತ್ತು

ಹಾದನು, ಅವನನ್ನು ಹೂಣಿಟ್ಟರು. ಅವನು ಪಾತಾಳದಲ್ಲಿ ಬಾಧೆಗಳಲ್ಲಿ ಬಿದ್ದನು. ಅವನು ಅದರಲ್ಲಿ ಇರುವಾಗ, ದೂರದಿಂದ ಲಾಜರನನ್ನು ಅಬ್ರಹಾಮನ ಎದೆಯಲ್ಲಿ ನಾಲಿದನು; ಅದಕ್ಕಾಗಿ ಅವನು ಕೂಗಿ, ಹೇಳಿದ್ದು —ತಂದೆಯಾದ ಅಬ್ರಹಾಮನೇ, ನನ್ನನ್ನು ಕರುಣಿಸು; ಲಾಜರನನ್ನು ನನ್ನ ಬಳಿಗೆ ಕಳುಹಿಸು; ಅವನು ತನ್ನ ಬೆರಳಿನ ತುದಿ ನೀರಿನಲ್ಲಿ ಅದ್ದಿ, ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ. ನಾನು ಈ ಉರಿಯಲ್ಲಿ ವೇದನೆ ಪಡುತ್ತೇನೆ. ಅಬ್ರಹಾಮನು ಐಶ್ವರ್ಯವಂತನಿಗೆ ಹೇಳಿದ್ದು —ಮಗನೇ, ನೀನು ಬದುಕುವಾಗ ನಿನ್ನ ಒಳ್ಳೆಯವುಗಳನ್ನು ಹಾಂದಿದಿ; ಮತ್ತು ಲಾಜರನು (ಅದೇ ಪ್ರಕಾರ) ಕೆಟ್ಟವುಗಳನ್ನು ಹಾಂದಿದನೆಂದು ಜ್ಞಾಪಕ ಮಾಡಿಕೋ. ಈಗ ಅವನಿಗೆ ಆದರಣೆ ಆಯಿತು, ಆದರೆ ನಿನಗೆ ವೇದನೆ ಆಗುತ್ತದೆ. ಇದಲ್ಲದೆ ನೀನೂ ನಾವೂ ಕೂಡಿ ಕಾಳ್ಳ ಕೂಡದು.

ಅದಕ್ಕೆ ಐಶ್ವರ್ಯವಂತನು ಅಬ್ರಹಾಮನಿಗೆ ಹೇಳಿದ್ದು —ಹಾಗಾದರೆ ತಂದೆಯೇ, ಲಾಜರನನ್ನು ನನ್ನ ತಂದೆಯ ಮನೆಗೆ ಕಳುಹಿಸು; ನನಗೆ ಐದು ಮಂದಿ ಸಹೋದರರಿದ್ದಾರೆ, ಅವರು ಸಹ ಈ ಬಾಧೇ ಸ್ಥಳಕ್ಕೆ ಬಾರದ ಹಾಗೆ, ಅವನವರಿಗೆ ಸಾಕ್ಷಿ ಕಾಡಲಿ ಅಂದನು. ಆದರೆ ಅಬ್ರಹಾಮನು ಅವನಿಗೆ —ನಿನ್ನ ಸಹೋದರರಿಗೆ ಮೋಶೆಯೂ ಪ್ರವಾದಿಗಳೂ ಇದ್ದಾರೆ, ಅವರು ಅವರನ್ನು ಕೇಳಲಿ, ನಂಬಲಿ ಎಂದು ಹೇಳಿದನು.

ಲೋಕವೂ ಅದರ ಆಶೆಯೂ ಕಳೆದು ಹೋಗುತ್ತವೆ; ಆದರೆ ದೇವರ ಚಿತ್ತವನ್ನು ಮಾಡುವವನು ಎಂದೆಂದಿಗೂ ನೆಲೆಯಾಗಿರುತ್ತಾನೆ (೧ಯೋಹಾ. ೨, ೧೭).

---

೨೩ ಹತ್ತು ಮಂದಿ ಕುಷ್ಠದವರು

ಯೇಸು ಯೆರೂಸಲೇಮಿಗೆ ಹಾಗುತ್ತಿರುವಾಗ, ಒಂದು ಗ್ರಾಮದಲ್ಲಿ ಪ್ರವೇಶಿಸಿದನು. ಆಗ ಹತ್ತು ಮಂದಿ ಕುಷ್ಠರೋಗಿಗಳು

ಅವನೆದುರಿಗೆ ಬಂದರು. ಅವರು ದೂರದಿಂದ ಶಬ್ದವನ್ನೆತ್ತಿ—ಯೇಸು, ಅಯ್ಯಾ, ನಮ್ಮನ್ನು ಕರುಣಿಸು ಅಂದರು. ಯೇಸು ಅವರಿಗೆ—ನೀವು ಹಾಗಿ, ನಿಮ್ಮನ್ನು ಯಾಜಕರಿಗೆ ತಾರಿಸಿ ಕಾಳ್ಳಿರಿ ಅಂದನು. ಅವರು ಹಾಗುತ್ತಿರುವಾಗ, ಶುಚಿಯಾದರು; ಕುಷ್ಟವು ಹಾಯಿತು. ಅವರಲ್ಲಿ ಒಬ್ಬನು ಯೇಸುವಿನ ಹತ್ತರ ತಿರಿಗಿ ಬಂದನು. ಅವನು ಮಹಾ ಶಬ್ದದಿಂದ ದೇವರನ್ನು ಮಹಿಮೆ ಪಡಿಸಿದನು, ಮತ್ತು ಯೇಸುವಿನ ಪಾದಗಳ ಬಳಿಯಲ್ಲಿ ಅಡ್ಡ ಬಿದ್ದು, ಅವನಿಗೆ ಸ್ತೋತ್ರ ಮಾಡಿದನು. ಅವನು ಸಮಾರ್ಯನಾಗಿದ್ದನು. ಆಗ ಯೇಸು ಉತ್ತರ ಕಾಟ್ಟು—ಹತ್ತು ಮಂದಿ ಶುಚಿಯಾಗಲಿಲ್ಲವೋ? ಒಂಬತ್ತು ಮಂದಿ ಎಲ್ಲಿ? (ಈ ಪರದೇಶಿ ಹಾತ್ರ್ಮ, ಅವರು ದೇವರಿಗೆ ಮಹಿಮೆ ಕಾಡುವಡಕ್ಕೆ ತಿರುಗಿ ಕಾಳ್ಳುವದಿಲ್ಲವೋ) ಎಂದು ಹೇಳಿದನು. ಮತ್ತು ಸಮಾರ್ಯನಿಗೆ—ನೀನು ಎದ್ದು, ಹಾಗು; ನಿನ್ನ ವಿಶ್ವಾಸವು ನಿನ್ನನ್ನು ರಕ್ಷಿಸಿ ಅದೆ ಅಂದನು.

ಸ್ತೋತ್ರವನ್ನು ಬಲಿಯಾಗಿ ಅರ್ಪಿಸುವವನು ನನ್ನನ್ನು ಘನ ಪಡಿಸುತ್ತಾನೆ; ತನ್ನ ಮಾರ್ಗವನ್ನು ಶಿದ್ಧ ಮಾಡುವವನಿಗೆ ದೇವರ ರಕ್ಷಣೆಯನ್ನು ತೋರಿಸುವೆನು (ಕೀರ್ತ. ೫೦, ೨೩).

---

೨೪ ಯೇಸು ಲಾಜರನನ್ನು ಎಬ್ಬಿಸಿದ್ದು

ಬೆಥಾನ್ಯದಲ್ಲಿದ್ದ ಮಾರ್ಥಳಿಗೂ ಮರಿಯಳಿಗೂ ಲಾಜರನೆಂಬ ಸಹಾದರನಿದ್ದನು. ಅವನು ಅಸ್ವಸ್ಥವಾಗಿದ್ದನು. ಅವನ ಸಹಾದರಿಗಳು ಯೇಸುವಿನ ಬಳಿಗೆ—ಕರ್ತನೇ, ನೀನು ಸ್ನೇಹಿಸುವ ಲಾಜರನು ಅಸ್ವಸ್ಥವಾಗಿದ್ದಾನೆಂದು ಹೇಳಿ ಕಳುಹಿಸಿದರು. ಯೇಸು ಬೇಗ ಬೆಥಾನ್ಯಕ್ಕೆ ಹಾಗಲಿಲ್ಲ. ಎರಡು ದಿವಸದ ಮೇಲೆ ಆತನು ತನ್ನ ಶಿಷ್ಯರಿಗೆ ಹೇಳಿದ್ದು—ನಮ್ಮ ಸ್ನೇಹಿತನಾದ ಲಾಜರನು ಸತ್ತಿದ್ದಾನೆ; ಆದರೆ ಅವನ ಬಳಿಗೆ ಹಾಗುವ.

ಯೆಹೂದ್ಯರಲ್ಲಿ ಅನೇಕರು ಮಾರ್ಥಳ ಮರಿಯಳ ಬಳಿಗೆ ಬಂದಿದ್ದರು, ಅವರು ಈ ದುಖ್ಖ ಉಳ್ಳ ಸಹಾದರಿಗಳನ್ನು ಆದರಿಸಿದರು.

ಯೇಸು ಬರುವಾಗ, ಮಾರ್ಥಳು ಅವನೆದುರಾಗಿ ಬಂದಳು. ಆಗ ಮಾರ್ಥಳು ಯೇಸುವಿಗೆ—ಕರ್ತನೇ, ನೀನು ಇಲ್ಲಿ ಇದ್ದರೆ, ನನ್ನ ಸಹೋದರನು ಸಾಯನು, ಆದಾಗ್ಯೂ ಈಗಲೇ ನೀನು ದೇವರನ್ನು ಬೇಡಿ ಕಾಳ್ಳುವದೆಲ್ಲಾ ದೇವರು ನಿನಗೆ ಕಾಡುವನೆಂದು ಬಲ್ಲೆನು ಅಂದಳು. ಯೇಸು ಮಾರ್ಥಳನ್ನು ಆದರಿಸಿದನು—ನಿನ್ನ ಸಹೋದರನು ಬಿಳುವನು, ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ, ನನ್ನಲ್ಲಿ ವಿಶ್ವಾಸವಿಡುವವನು ಸತ್ತರೂ ಬದುಕುವನು ಅಂದನು.

ಮಾರ್ಥಳು ಹೋಗಿ, ತನ್ನ ಸಹೋದರಿಯಾದ ಮರಿಯಳನ್ನು ಕರೆದಳು. ಮರಿಯಳು ಬೇಗ ಯೇಸುವಿನ ಬಳಿಗೆ ಬಂದಳು. ಅವಳು ಯೇಸುವಿನ ಪಾದಗಳ ಮೇಲೆ ಬಿದ್ದು—ಕರ್ತನೇ, ನೀನು ಇಲ್ಲಿ ಇದ್ದರೆ ನನ್ನ ಸಹೋದರನು ಸಾಯನು ಅಂದಳು. ಯೇಸು ಜನರಿಗೆ—ಲಾಜರನನ್ನು ಎಲ್ಲಿ ಇಟ್ಟಿದ್ದೀರಿ ಅಂದನು. ಅವರು ಅವನನ್ನು ಸಮಾಧಿಯ ಹತ್ತರ ಕರಕೊಂಡು ಹೋಗುವಾಗ, ಯೇಸು ಕಣ್ಣೀರಿಟ್ಟನು. ಆಗ ಯೆಹೂದ್ಯರು—ಇಗೋ, ಅವನನ್ನು ಎಷ್ಟೋ ಸ್ನೇಹಿಸಿದನು ಅಂದರು. ಯೇಸು ಸಮಾಧಿಗೆ ಬಂದನು. ಒಂದು ಕಲ್ಲು ಅದರ ಮೇಲೆ ಬಿದ್ದಿತ್ತು. ಯೇಸು—ಕಲ್ಲು ಎತ್ತಿ ಹಾಕಿರಿ ಅಂದನು. ಮಾರ್ಥಳು ಅವನಿಗೆ—ಕರ್ತನೇ, ನಾರುತ್ತಾನೆ, ಅವನು ಸತ್ತು ನಾಲ್ಕು ದಿವಸವಾಯಿತು ಅಂದಳು. ಕಲ್ಲನ್ನು ಎತ್ತಿ



ಹಾಕಿದರು. ಆಗ ಯೇಸು ಕಣ್ಣುಗಳನ್ನು ಮೇಲಕ್ಕೆ ಎತ್ತಿ, ಪ್ರಾರ್ಥನೆ ಮಾಡಿದನು; ಮತ್ತು ಮಹಾ ಶಬ್ದದಿಂದ—ಲಾಜರನೇ, ಹೊರಗೆ ಬಾ ಎಂದು ಕೂಗಿದನು. ಆಗ ಸತ್ತವನು ಹೊರಗೆ ಬಂದನು. ಯೆಹೂದ್ಯರಲ್ಲಿ ಅನೇಕರು ಇದನ್ನು ನೋಡಿ, ಅವನಲ್ಲಿ ವಿಶ್ವಾಸವಿಟ್ಟರು; ಆದರೆ ಫರಿಸಾಯರು ಕೋಪ ಮಾಡಿದರು; ಅವರು ಯೇಸುವನ್ನು ಕೊಂದು ಹಾಕ ಬೇಕೆಂದು, ಆಲೋಚನೆ ಮಾಡಿದರು.

ನಮ್ಮ ರಕ್ಷಕನಾದ ಯೇಸು ಕ್ರಿಸ್ತನು ಮರಣವನ್ನು ಲಯ ಮಾಡಿ, ಸುವಾರ್ತೆಯಿಂದ ಜೀವವನ್ನೂ ನಿರ್ಣಯವನ್ನೂ ಬೆಳಕಿಗೆ ತಂದನು (೨ ತಿಮೋ. ೧, ೧೦).

---

೨೫ ಜಕ್ಕಾಯನು

ಯೆರಿಕೋವಿನಲ್ಲಿ ಜಕ್ಕಾಯನೆಂಬವನು ವಾಸ ಮಾಡಿದನು. ಅವನು ಸುಂಕದವರಲ್ಲಿ ಮುಖ್ಯಸ್ಥನೂ ಐಶ್ವರ್ಯವಂತನೂ ಆಗಿದ್ದನು. ಯೇಸು ಯೆರಿಕೋವಿಗೆ ಪ್ರವೇಶಿಸಿದನು. ಜಕ್ಕಾಯನು ಯೇಸುವನ್ನು ನೋಡ ಹುಡುಕಿದನು, ಆದರೆ ನೋಡಲಾರದೆ ಇದ್ದನು; ಬಹು ಸಮೂಹವು ಯೇಸುವಿನ ಹತ್ತರ ಇತ್ತು, ಮತ್ತು ಅವನು ಗಿಡ್ಡನಾಗಿದ್ದನು. ಅದಕ್ಕಾಗಿ ಅವನು ಒಂದು ಆಲದ ಮರದ ಮೇಲೆ



ಪಿರಿದನು. ಯೇಸು ಅವನನ್ನು ನಾೀಡಿ — ಜಕ್ಕಾಯನೇ, ಬೇಗ ಇಳಿದು ಬಾ; ನಾನು ಈ ಹಾತ್ತು ನಿನ್ನ ಮನೆಯಲ್ಲಿರ ಬೇಕು ಅಂದನು. ಜಕ್ಕಾಯನು ಬೇಗ ಇಳಿದು, ಅವನನ್ನು ಸಂತಾೀಷದಿಂದ ಅಂಗೀಕರಿಸಿದನು. ಮತ್ತು ಅವನು ಯೇಸುವಿಗೆ ಹೇಳಿದ್ದು — ಇಗಾೀ, ಕರ್ತನೇ, ನನಗುಂಟಾದವುಗಳಲ್ಲಿ ಅರೆವಾಶಿಯನ್ನು ಬಡವರಿಗೆ ಕಾಡುತ್ತೇನೆ; ಮತ್ತು ಏನಾದರೂ ಮೋಸ ಮಾಡಿದ್ದಾದರೆ, ನಾಲ್ಕು ಪಟ್ಟು ಬದಲು ಕಾಡುತ್ತೇನೆ. ಯೇಸು ಅವನಿಗೆ ಹೇಳಿದ್ದು — ಈ ಹಾತ್ತು ಈ ಮನೆಗೆ ರಕ್ಷಣೆ ಉಂಟಾಯಿತು, ಮತ್ತು —

ಮನುಷ್ಯನ ಮಗನು ಕೆಟ್ಟು ಹೋದದ್ದನ್ನು ಹುಡುಕುವದಕ್ಕೂ ರಕ್ಷಿಸುವದಕ್ಕೂ ಬಂದನು (ಲೂಕ. ೧೯, ೧೦).

---

೨೬ ಯೆರೂಸಲೇಮಿಗೆ ಪ್ರವೇಶಿಸಿದ್ದು

ಯೇಸು ತನ್ನ ಶಿಷ್ಯರ ಸಂಗಡ ಯೆರೂಸಲೇಮಿಗೆ ಹಾೀದನು. ಅಲ್ಲಿ ಪಸ್ಕ ಹಬ್ಬ ಮಾಡ ಬೇಕೆಂದು, ಅವನಿಗೆ ಮನಸ್ಸು ಇತ್ತು. ಅವನು ತನ್ನ ಶಿಷ್ಯರ ಸಂಗಡ ಬೇತ್ಫಗೆ ಎಂಬ ಊರಿಗೆ ಸಮೀಪಿಸಿದನು. ಆಗಲವನು ತನ್ನ ಶಿಷ್ಯರಲ್ಲಿ ಇಬ್ಬರಿಗೆ ಹೇಳಿದ್ದು — ಎದುರಾಗಿರುವ ಗ್ರಾಮಕ್ಕೆ ಹಾೀಗಿರಿ, ಸಂಗಡಲೇ ಕಟ್ಟಿರುವ ಕತ್ತೆಯನ್ನೂ ಅದರ ಮರಿಯನ್ನೂ ಕಾಣುವಿರಿ, ಬಿಚ್ಚಿ ನನಗೆ ತನ್ನಿರಿ. ಯೇಸು ಆಜ್ಞಾಪಿಸಿದ ಪ್ರಕಾರ ಶಿಷ್ಯರು ಮಾಡಿದರು; ಅವರು ಹಾೀಗಿ, ಕತ್ತೆಯನ್ನೂ ಮರಿಯನ್ನೂ ತಂದರು; ಮತ್ತು ತಮ್ಮ ವಸ್ತ್ರಗಳನ್ನು ಮರಿಯ ಮೇಲೆ ಹಾಕಿ, ಕರ್ತನಾದ ಯೇಸುವನ್ನು ಮೇಲೆ ಕೂಡ್ರಿಸಿದರು. ಬಹು ಸಮೂಹವು ತಮ್ಮ ವಸ್ತ್ರಗಳನ್ನೂ ಮರಗಳ ಕಾಂಬೆಗಳನ್ನೂ ದಾರಿಯಲ್ಲಿ ಹಾಸಿದರು. ಹೀಗೆ ಕರ್ತನಾದ ಯೇಸು ಯೆರೂಸಲೇಮಿಗೆ ಹಾೀದನು; ಜನರು ದೇವರನ್ನು ಹಾಗಳಿ ಹೇಳಿದ್ದು —

ದಾವೀದನ ಮಗನಿಗೆ ಹೊಸನ್ನ, ಕರ್ತನ ಹೆಸರಿನಲ್ಲಿ ಬರುವವನಿಗೆ ಸ್ತೋತ್ರವಾಗಲಿ, ಅತ್ಯುನ್ನತವಾದವುಗಳಲ್ಲಿ ಹೊಸನ್ನ (ಮತ್ತಾ. ೨೧, ೯).

---

೨೭ ರಾತ್ರಿಭೋಜನ

ಪಸ್ಕಕ್ಕೆ ಮುಂಚಿನ ಆದಿತ್ಯವಾರದಲ್ಲಿ ಯೇಸು ಯೆರೂಸಲೇಮಿಗೆ ಹಾ೧ದನು. ಅಲ್ಲಿ ಅವನು ದಿನಾಲು ದೇವಾಲಯದಲ್ಲಿ ಬಾ೧ಧಿಸುತ್ತಾ, ಅಸ್ವಸ್ಥವಾದವರನ್ನು ಸ್ವಸ್ಥ ಮಾಡುತ್ತಾ ೩ದ್ದನು. ಆ ಬ್ರಹಸ್ಪತಿವಾರದ ಸಾಯಂಕಾಲಕ್ಕೆ ಅವನು ತನ್ನ ಶಿಷ್ಯರ ಸಂಗಡ ಪಸ್ಕಕುರಿಯನ್ನು ತಿಂದನು. ಆಗ ರಾತ್ರಿಭೋ೧ಜನವನ್ನು ನೇಮಕ



ಮಾಡಿದನು. ಅವನು ರೊಟ್ಟಿಯನ್ನು ತೆಗದು ಕೊಂಡು, ಸ್ತೋತ್ರ ಮಾಡಿ, ಮುರಿದು ಶಿಷ್ಯರಿಗೆ ಕೊಟ್ಟು—ತಕ್ಕೊಳ್ಳಿರಿ ತಿನ್ನಿರಿ, ೩ದು ನಿಮಗೋಸ್ಕರ ಮುರಿಯಲ್ಪಡುವ ನನ್ನ ಶರೀರವಾಗಿದೆ, ನನ್ನನ್ನು ನೆನಸುವದಕ್ಕೆ ೩ದನ್ನು ಮಾಡಿರಿ ಅಂದನು. ಅದೇ ಪ್ರಕಾರ ಯೇಸು ಪಾತ್ರೆಯನ್ನೂ ತೆಗದು ಕೊಂಡು, ಸ್ತೋತ್ರ ಮಾಡಿ, ಅವರಿಗೆ ಕೊಟ್ಟು—೩ದರಲ್ಲಿ ನೀವೆಲ್ಲರು ಕುಡಿಯಿರಿ, ೩ದು ಅನೇಕರಿಗೋಸ್ಕರ ಪಾಪಪರಿಹಾರಕ್ಕಾಗಿ ಹಾಯ್ಕಲ್ಪಡುವ ಹೊಸ ಒಡಂಬಡಿಕೆಯ ನನ್ನ ರಕ್ತವಾಗಿದೆ, ನೀವು ಕುಡಿಯುವಷ್ಟು ಸಾರಿ ನನ್ನನ್ನು ನೆನಸುವದಕ್ಕೆ ೩ದನು ಮಾಡಿರಿ ಅಂದನು.

ನಾನೇ ಪರಲೋಕದಿಂದ ಇಳಿದು ಬಂದ ಜೀವವುಳ್ಳ ರೊಟ್ಟಿಯಾಗಿದ್ದೇನೆ, ಈ ರೊಟ್ಟಿ ಯಾವನಾದರೂ ತಿಂದರೆ ಎಂದೆಂದಿಗೂ ಬದುಕುವನು, ಮತ್ತು ನಾನು ಕೊಡುವ ರೊಟ್ಟಿ ನನ್ನ ಮಾಂಸವು, ಅದನ್ನು ನಾನು ಲೋಕದ ಜೀವಕ್ಕೋಸ್ಕರ ಕೊಡುವೆನು (ಯೋಹಾ. ೬, ೫೧).

೨೪ ಯೇಸು ಗೆತ್ಸೇಮನೆಯಲ್ಲಿ ಇದ್ದದ್ದು

ಆ ರಾತ್ರಿಯಲ್ಲಿ ಯೇಸು ತನ್ನ ಶಿಷ್ಯರ ಸಂಗಡ ಗೆತ್ಸೇಮನೆ ಎಂಬ ಸ್ಥಳಕ್ಕೆ ಬಂದನು. ಅಲ್ಲಿ ಅವನು ಭಯಭ್ರಾಂತನಾಗಲೂ ವ್ಯಸನ ಪಡಲೂ ಆರಂಭಿಸಿದನು. ಮೂರು ಸಾರಿ ಅವನು ಪ್ರಾರ್ಥನೆ ಮಾ ಡಿ — ತಂದೆಯೇ, ಈ ಕಷ್ಟವನ್ನು ನನ್ನಿಂದ ತಾಲಗಿಸು, ಆದಾಗ್ಯೂ



ನನ್ನ ಚಿತ್ತವಲ್ಲ ನಿನ್ನದೇ ಆಗಲಿ ಅಂದನು. ಆಗ ಪರಲೋಕದಿಂದ ಬಂದ ಒಬ್ಬ ದೂತನು ಅವನನ್ನು ಬಲ ಪಡಿಸಿದನು. ಇದಲ್ಲದೆ ಅ ವನ ಬೆವರು ರಕ್ತದ ದಾಡ್ಡ ಬಿಂದುಗಳ ಹಾಗಾಯಿತು. ಆಪರೆ ಅವನ ಶಿಷ್ಯರು ನಿದ್ದೆ ಮಾಡಿದರು. ಅವನು ಅವರನ್ನು ಎಚ್ಚರಿಸಿ, ಅವರಿಗೆ — ಎಚ್ಚರವಾಗಿದ್ದು ಪ್ರಾರ್ಥಿಸಿರಿ ಅಂದನು. ಆಗಲು ಇ ಗೋ, ಹನ್ನೆರಡು ಮಂದಿಯಲ್ಲಿ ಒಬ್ಬನಾಗಿರುವ ಯೂದನು ಬಂದ ನು; ಅವನ ಸಂಗಡ ಪ್ರಧಾನಯಾಜಕರ ಶಾಸ್ತ್ರಿಗಳ ಹಿರಿಯರ ಕಡೆ ಯಿಂದಲೂ ಜನರು ಬಂದರು. ಯೂದನು ಯೇಸುವನ್ನು ವಂದಿ ಸಿ, ಅವನಿಗೆ ಮುದ್ದಿಟ್ಟನು. ಅದರ ಮೇಲೆ ರಾಣುವೆಯವರು ಯೇ ಸುವನ್ನು ಹಿಡಿದರು. ಪೇತ್ರನು ಇದನ್ನು ನೋಡಿ, ಪ್ರಧಾನಯಾಜ ಕನ ದಾಸನನ್ನು ಹಾಡೆದು, ಅವನ ಕಿವಿಯನ್ನು ಕಡಿದನು. ಆಗ ಯೇಸು ಪೇತ್ರನಿಗೆ — ತಂದೆಯು ನನಗೆ ಕಾಟ್ಟ ಕಷ್ಟವನ್ನು ನಾನು ತಿ ನ್ನ ಬೇಡವೋ ಅಂದನು. ಮತ್ತು ಯೇಸು ಆ ದಾಸನ ಕಿವಿಯನ್ನು

ಗುಣ ಮಾಡಿದನು. ಆಗ ಶಿಷ್ಯರೆಲ್ಲರು ಅವನನ್ನು ಬಿಟ್ಟು, ಓಡಿ ಹೋದರು.

ನೀವು ಶೋಧನೆಯಲ್ಲಿ ಪ್ರವೇಶಿಸದ ಹಾಗೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ (ಮತ್ತಾ. ೨೬, ೪೧).

---

೨೫ ಕಾಯಫನ ಮುಂದೆ ಆದ ವಿಚಾರಣೆ

ರಾತ್ರಿಯವರು ಕರ್ತನಾದ ಯೇಸುವನ್ನು ಪ್ರಧಾನಯಾಜಕನಾದ ಕಾಯಫನ ಬಳಿಗೆ ತಕ್ಕೊಂಡು ಹೋದರು; ಇವನ ಹತ್ತರ ಶಾಸ್ತ್ರಿಯವರೂ ಹಿರಿಯರೂ ಕೂಡಿದ್ದರು. ಪೇತ್ರನು ಕಾಯಫನ ಮನೆಯ ಪರ್ಯಂತರ ಯೇಸುವನ್ನು ಹಿಂಬಾಲಿಸಿದನು. ಆವಾಗ ಛಳಿಯಿತ್ತು; ಅದಕ್ಕಾಗಿ ದಾಸರು ಇದ್ದಲಿನ ಬೆಂಕಿಯನ್ನು ಹಾತ್ತಿಸಿ, ಛಳಿ ಕಾಸಿ ಕಾಳ್ಳುತ್ತಿದ್ದರು. ಪೇತ್ರನೂ ಅವರ ಸಂಗಡ ನಿಂತು ಛಳಿ ಕಾಸಿ ಕಾಳ್ಳುತ್ತಿದ್ದನು. ಆಗ ಒಬ್ಬ ದಾಸಿಯು ಪೇತ್ರನಿಗೆ—ನೀನು ಸ



ಹ ಯೇಸುವಿನ ಶಿಷ್ಯರಲ್ಲಿ ಒಬ್ಬನಲ್ಲವೋ ಅಂದಳು. ಆದರೆ ಪೇತ್ರನು ಎಲ್ಲರ ಮುಂದೆ ಬಾಂಕಿದನು—ನಾನಲ್ಲ, ಅವನನ್ನು ನಾನರಿಯೆ ಅಂದನು. ಮತ್ತೊಬ್ಬ ದಾಸಿಯೂ ಹತ್ತರ ನಿಂತವರಿಗೆ—ಇವನು ಸಹ ಯೇಸುವಿನ ಸಂಗಡ ಇದ್ದನು ಅಂದಳು. ಆದರೆ ಪೇತ್ರನು ತಿರಿಗಿ ಬಾಂಕಿದನು. ಒಬ್ಬ ದಾಸನು ಪೇತ್ರನಿಗೆ—ನಿನ್ನನ್ನು ತೋ

ಟದಲ್ಲಿ ಅವನಾಂದಿಗೆ ನಾನು ನಾೀಡಲಿಲ್ಲಪೋ ಅಂದನು. ಇದ ಲ್ಲದೆ ಹತ್ತರ ನಿಂತವರೆಲ್ಲರು—ನಿಜವಾಗಿ ನೀನು ಅವರಲ್ಲಿ ಒ ಬ್ಬನಾಗಿದ್ದೀ ಅಂದರು. ಆದರೆ ಪೇತ್ರನು—ಆ ಮನುಷ್ಯನನ್ನು ನಾ ನರಿಯೆನೆಂದು ಶಪಿಸಿ ಕಾಳ್ಳಲೂ ಆಣೆ ಇಟ್ಟು ಕಾಳ್ಳಲೂ ಆರಂ ಭಿಸಿದನು. ಮತ್ತು ಕರ್ತನು ತಿರುಗಿ ಕಾಂಡು, ಪೇತ್ರನ ಮೇಲೆ ದೃಷ್ಟಿ ಇಟ್ಟನು; ಆಗ ಪೇತ್ರನು ಹಾರಗೆ ಹಾೀಗಿ, ಬಹಳವಾಗಿ ಅತ್ತನು.

ಕಾಯಫನು ಯೇಸುವನ್ನು ಕೇಳಿದ್ದು—ನೀನು ಏನು ಬಾೀಧ ನೆ ಕಾಟ್ಟಿ? ನಿನ್ನ ಶಿಷ್ಯರು ಯಾರು? ನೀನು ದೇವರ ಮಗನಾದ ಕ್ರಿ ಸ್ತನಾಗಿದ್ದಿಯಾೀ ಅಂದನು. ಯೇಸು ಅವನಿಗೆ—ನಾನು ದೇವರ ಮಗನಾದ ಕ್ರಿಸ್ತನಾಗಿದ್ದೇನೆ ಅಂದನು. ಆಗ ಪ್ರಧಾನಯಾಜಕನು ತನ್ನ ವಸ್ತ್ರಗಳನ್ನು ಹರಕಾಂಡು—ಅವನು ದೇವರನ್ನು ದೂಷಿಸಿ ದ್ದಾನೆ ಅಂದನು. ಆ ಸಭೆಯಲ್ಲಿದ್ದವರೆಲ್ಲರು—ಮರಣಕ್ಕೆ ಪಾತ್ರನಾ ಗಿದ್ದಾನೆಂದು, ನಿರ್ಣಯಿಸಿದರು. ಆಗ ಕೆಲವರು ಅವನ ಮುಖಕ್ಕೆ ಉಗುಳಿದರು; ಮತ್ತು ಅವನ ಮುಖಕ್ಕೆ ಮುಸ್ಕು ಹಾಕಿ, ಅವನಿಗೆ ಬಡಿದರು:

ನಾನು ಮನುಷ್ಯರ ನಿಂದೆಯೂ ಜನರಿಂದ ತಿರಸ್ಕರಿಸಲ್ಪಟ್ಟವನೂ ಆಗಿ ದ್ದೇನೆ (ಕೀರ್ತ. ೨೨, ೬).

---

೩೦ ಪಿಲಾತನ ಮುಂದೆ ಆದ ವಿಚಾರಣೆಯೂ ಯೂದನ ಮರಣವೂ

ಶುಕ್ರವಾರ ಬೆಳಗಾದಾಗ ಅವರು ಯೇಸುವನ್ನು ಅಧಿಪತಿಯಾದ ಪಿಲಾತನ ಬಳಿಗೆ ತಕ್ಕಾಂಡು ಹಾೀದರು. ಅವನನ್ನು ಒಪ್ಪಿಸಿ ಕಾಟ್ಟಿ ಯೂದನು ಅದನ್ನು ನಾೀಡಿದನು. ಅವನು ಪಶ್ಚಾತ್ತಾಪ ಪಟ್ಟು—ನಾನು ನಿರಪರಾಧವಾದ ರಕ್ತವನ್ನು ಒಪ್ಪಿಸಿ ಕಾಟ್ಟು, ಪಾಪ ಮಾ ಡಿದೆನು ಅಂದನು. ಮತ್ತು ತನಗೆ ಪ್ರಧಾನಯಾಜಿಕರಿಂದ ಶಿಕ್ಕಿದ

ರೂಪಾಯಿಗಳನ್ನು ದೇವಾಲಯದಾಳಗೆ ಹಾಕಿದನು. ಅದರ ಮೇಲೆ ಹಾಗಿ, ಉರ್ಲು ಹಾಕಿ ಕಾಂಡನು.

ಪಿಲಾತನು ಯೆಹೂದ್ಯರಿಗೆ—ಈ ಮನುಷ್ಯನಿಗೆ ವಿರೋಧವಾಗಿ ಏನು ದೂರನ್ನು ತರುತ್ತೀರಿ ಅಂದನು. ಅವರು ಅವನ ಮೇಲೆ ದೂರು ಹೇಳಿ—ಇವನು ಜನಾಂಗವನ್ನು ಶಿರುಗಬೀಳ ಮಾಡಿ, ತಾನು ಕ್ರಿಸ್ತನೆಂಬ ಅರಸನಾಗಿದ್ದೇನೆಂದು ಹೇಳುತ್ತಾನೆ; ಹೀಗೆ ಕೈಸರನಿಗೆ ತೆರಿಗೆ ಕಾಡದ ಹಾಗೆ, ಅಡ್ಡಿ ಮಾಡುತ್ತಾನೆ ಅಂದರು. ಪಿಲಾತನು ಯೇಸುವಿಗೆ—ನೀನು ಯೆಹೂದ್ಯರ ಅರಸನಾ ಎಂದು ಕೇಳಿದ



ನು. ಯೇಸು ಉತ್ತರ ಕಾಟ್ಟು—ನೀನು ಹೇಳುವದು ಸರಿ, ಆದರೆ ನನ್ನ ರಾಜ್ಯವು ಈ ಲೌಕದ್ದಲ್ಲ, ನಾನು ಸತ್ಯಕ್ಕೆ ಸಾಕ್ಷಿ ಕಾಡುವದಕ್ಕೋಸ್ಕರವೇ ಹುಟ್ಟಿದ್ದೇನೆ ಅಂದನು. ಪ್ರಧಾನಯಾಜಕರು ಅವನ ಮೇಲೆ ಬಹಳ ದೂರುಗಳನ್ನು ಹೇಳಿದರು. ಆದರೆ ಯೇಸು ಇನ್ನು ಏನೂ ಉತ್ತರ ಕಾಡಲಿಲ್ಲ. ಪಿಲಾತನು ಯೇಸುವನ್ನು ಅರಸನಾದ ಹೆರೋದನ ಬಳಿಗೆ ಕಳುಹಿಸಿದನು. ಹೆರೋದನು ತನ್ನ ಸೈನ್ಯದವರ ಸಂಗಡ ಅವನನ್ನು ಶಿರಸ್ಕರಿಸಿ ಹಾಸ್ಯ ಮಾಡಿದನು; ಮತ್ತು

ಅವನಿಗೆ ಪ್ರಕಾಶವಾದ ವಸ್ತ್ರವನ್ನು ಹಾಕ್ದಿಸಿ, ಅವನನ್ನು ಪಿಲಾತನಿಗೆ ತಿರಿಗಿ ಕಳುಹಿಸಿದನು.

ಪೀಡಿಸಲ್ಪಟ್ಟನು; ಕುಂದಿ ಹೋದನು; ಆದರೆ ತನ್ನ ಬಾಯಿಯನ್ನು ತೆರೆಯಲಿಲ್ಲ; ಕೊಲೆಗೆ ತರಲ್ಪಡುವ ಕುರಿಮರಿಯ ಹಾಗೆಯೂ ಉಂಣಿ ಕತ್ತರಿಸುವವನ ಮುಂದೆ ಮೌನವಾಗಿರುವ ಕುರಿಯ ಹಾಗೆಯೂ, ಅವನು ತನ್ನ ಬಾಯಿಯನ್ನು ತೆರೆಯಲಿಲ್ಲ (ಯೆಶಾ. ೫೩, ೭).

---

೩೧ ಯೇಸುವಿಗೆ ಮರಣ ನಿರ್ಣಯವಾದದ್ದು

ಪಿಲಾತನು ಯೆಹೂದ್ಯರಿಗೆ—ನಾನು ಯೇಸುವನ್ನು ಏನು ಮಾಡಲಿ ಅಂದನು. ಅವರೆಲ್ಲರು ಕೂಗಿ—ಅವನನ್ನು ಶಿಲುಬೆಗೆ ಹಾಕು, ಶಿಲುಬೆಗೆ ಹಾಕು ಅಂದರು. ಪಿಲಾತನು ಉತ್ತರ ಕೊಟ್ಟು—ನಾನು ಮರಣಕ್ಕೆ ಪಾತ್ರವಾದ ಅಪರಾಧ ಒಂದನ್ನಾದರೂ ಅವನಲ್ಲಿ ಕಾಣಲಿಲ್ಲ ಅಂದನು. ಅದರ ಮೇಲೆ ಪಿಲಾತನು ಯೇಸುವನ್ನು ಬಾರುಗಳಿಂದ ಹಾಕಿಸಿದನು; ಮತ್ತು ರಾಣುವೆಯವರು ಅವನ ವಸ್ತ್ರವನ್ನು ತೆಗೆದು ಬಿಟ್ಟು, ರಕ್ತಾಂಬರದ ಒಲ್ಲಿಯನ್ನು ಅವನಿಗೆ ಹಾಕ್ದಿಸಿದರು; ಮುಳ್ಳುಗಳಿಂದ ಕಿರೀಟವನ್ನು ಹೆಣೆದು, ಅವನ ತಲೆಯ ಮೇಲೆ ಇಟ್ಟರು; ಅವನ ಬಲಗೈಗೆ ಬೆತ್ತ ಕೊಟ್ಟರು; ಮತ್ತು ಅವನ ಮುಂದೆ ಮೊಣಕಾಲೂರಿ, ಯೆಹೂದ್ಯರ ಅರಸನೇ, ಶುಭವಾಗಲಿ ಎಂದು ಅವನನ್ನು ಹಾಸ್ಯ ಮಾಡಿದರು. ಅದಲ್ಲದೆ ಅವನ ಮೇಲೆ ಉಗುಳಿ, ಬೆತ್ತದಿಂದ ಅವನ ತಲೆಗೆ ಹೊಡೆದರು. ಆಗಲು ಪಿಲಾತನು ತಿರಿಗಿ ಯೇಸುವನ್ನು ಹಾರಗೆ ಕರಕೊಂಡು ಬಂದನು; ಮತ್ತು ಅವನು ಯೆಹೂದ್ಯರಿಗೆ—ಇಗೋ, ನಾನು ಅವನಲ್ಲಿ ಯಾವ ಅಪರಾಧವನ್ನಾದರೂ ಕಾಣೆನು ಅಂದನು. ಆಗ ಯೇಸು ಮುಳ್ಳಿನ ಕಿರೀಟವನ್ನೂ ರಕ್ತಾಂಬರವನ್ನೂ ಧರಿಸಿ ಕೊಂಡವನಾಗಿ ಹಾರಗೆ ಬಂದನು. ಮತ್ತು ಪಿಲಾತನು ಯೆಹೂದ್ಯರಿಗೆ—ಇಗೋ, ಈ ಮನುಷ್ಯನು ಅಂದನು. ಪ್ರಧಾನಯಾಜಕರೂ ಉಳಿಗದವರೂ ಅವನನ್ನು ನೋಡಿದಾಗ—ಶಿಲುಬೆಗೆ ಹಾಕು, ಶಿಲುಬೆಗೆ ಹಾಕು ಎಂದು

ಕೂಗಿದರು. ಪಿಲಾತನು ತಿರಿಗಿ ಅವರಿಗೆ—ನಾನು ಅವನಲ್ಲಿ ಏನೂ ಅಪ ರಾಧ ಕಾಣೆನು ಅಂದನು. ಯೆಹೂದ್ಯರು ಪ್ರತ್ಯುತ್ತರವಾಗಿ—ನಮ್ಮ ನ್ಯಾಯಪ್ರಮಾಣದ ಪ್ರಕಾರ, ಅವನು ಸಾಯ ಬೇಕು ಅಂದರು. ಪಿಲಾತನು ಯೇಸುವನ್ನು ಬಿಡಿಸ ಹುಡುಕಿದನು, ಆದರೆ ಅವನು ಯೆಹೂದ್ಯರಿಗೂ ಕೈಸರನಿಗೂ ಭಯ ಪಟ್ಟನು. ಪಿಲಾತನು ಪೀಠದ ಮೇಲೆ ಕೂತು ಕಾಂಡು, ಯೆಹೂದ್ಯರಿಗೆ—ಇಗಾೀ, ನಿಮ್ಮ ಅರಸು ಅಂದನು. ಆದರೆ ಅವರು—ತೆಗದು ಹಾಕು, ಶಿಲುಬೆಗೆ ಹಾಕು ಎಂದು ಕೂಗಿದರು. ಆಗ ಶಿಲುಬೆಗೆ ಹಾಕಲ್ಪಡುವದಕ್ಕೆ ಅವನನ್ನು ಅವರಿಗೆ ಒಪ್ಪಿಸಿದನು.

ಆದರೆ ಅವನು ನಮ್ಮ ದ್ರೋಹಗಳ ನಿಮಿತ್ತ ಘಾಯವಾದನು; ನಮ್ಮ ಅಕ್ರಮಗಳ ನಿಮಿತ್ತ ಜಜ್ಜಲ್ಪಟ್ಟನು; ನಮ್ಮ ಸಮಾಧಾನಕ್ಕೆ ಕಾರಣವಾದ ಶಿಕ್ಷೆ ಅವನ ಮೇಲೆ ಇತ್ತು; ಮತ್ತು ಅವನ ಬಾಸುಂಡೆಗಳಿಂದ ನಮಗೆ ಸ್ವಾಸ್ಥವಾಯಿತು (ಯೆಶಾ. ೫೩, ೫).

---

೩೨ ಯೇಸುವನ್ನು ಶಿಲುಬೆಗೆ ಹಾಕಿದ್ದು

ರಾಣುವೆಯವರು ಯೇಸುವಿನಿಂದ ರಕ್ತಾಂಬರವನ್ನು ತೆಗದು, ಸ್ವಂತ ವಸ್ತ್ರಗಳನ್ನು ಅವನಿಗೆ ಹಾಾಕ್ಕಿಸಿದರು; ಮತ್ತು ಅವನನ್ನು ಶಿಲುಬೆಗೆ ಹಾಕುವದಕ್ಕೆ ತಕ್ಕಾಂಡು ಹಾೀದರು. ಯೇಸು ತನ್ನ ಶಿಲುಬೆಯನ್ನು ಹಾತ್ತು ಕಾಂಡನು. ಜನರೂ ಹೆಂಗಸರೂ ಬಹು ಸಮೂಹವಾಗಿ ಅವನನ್ನು ಹಿಂಬಾಲಿಸಿದರು. ಈ ಹೆಂಗಸರು ತಮಗೆ ಆಪನ ನಿಮಿತ್ತ ಬಡಕಾಂಡು, ಅತ್ತರು. ಗಾಲ್ಗಾಥವೆಂಬ ಶಿಲುಬೆ



ಯ ಸ್ಥಳದಲ್ಲಿ ರಾಣುವೆಯವರು ಯೇಸುವಿಗೆ ಪಿತ್ತ ಕಲಸಿದ ಹುಳಿ ರಸವನ್ನು ಕುಡಿಯ ಕೊಟ್ಟರು, ಆದರೆ ಯೇಸು ಕುಡಿಯಲೊಲ್ಲದೆ ಇದ್ದನು. ಅಲ್ಲಿ ಯೇಸುವನ್ನೂ ಇಬ್ಬರು ಕಳ್ಳರನ್ನೂ ಶಿಲುಬೆಗೆ ಹಾ



ಕಿದರು. ಆದರೆ ಯೇಸು ಪ್ರಾರ್ಥನೆ ಮಾಡಿ—ತಂದೆಯೇ, ಅವರಿಗೆ ಮನ್ನಿಸು, ಅವರು ಮಾಡುವದೇನೆಂದು ಅರಿಯರು ಅಂದನು. ಶಿಲುಬೆಗೆ ಪಿಲಾತನು ಒಂದು ಮೇಲ್ಬರಹವನ್ನು ಬರದು ಇಡಿಸಿದನು, ಏನಂದರೆ—ನಜರೇತಿನವನಾದ ಯೇಸು, ಯೆಹೂದ್ಯರ ಅರಸನು. ಬಹು ಜನರು ಯೇಸುವನ್ನು ಶಿಲುಬೆಯಲ್ಲಿ ನೋಡಿ, ಅವನಿಗೆ ಅಪಹಾಸ್ಯ ಮಾಡಿದರು. ಅವರು ಅವನಿಗೆ ಹೇಳಿದ್ದು—ನೀನು ದೇವರ ಮಗನಾಗಿದ್ದರೆ, ಶಿಲುಬೆಯಿಂದ ಇಳಿದು ಬಾ, ರಾಣುವೆಯಪರೂ ಪ್ರಧಾನಯಾಜಕರೂ ಅವನಿಗೆ ಅಪಹಾಸ್ಯ ಮಾಡಿದರು. ಮತ್ತು ತೂಗಿರುವ ದುಷ್ಪರಲ್ಲಿ ಒಬ್ಬನು ಸಹ ಅವನನ್ನು ದೂಷಿಸಿದನು; ಆದರೆ ಬೇರೊಬ್ಬನು ಅವನನ್ನು ಗದರಿಸಿದನು; ಮತ್ತು ಅವನು ಯೇಸುವಿಗೆ ಬೇಡಿ ಕೊಂಡು—ಕರ್ತನೇ, ನಿನ್ನ ರಾಜ್ಯದಾಳಗೆ ಬರುವಾಗ ನನ್ನನ್ನು ಜ್ಞಾಪಕ ಮಾಡಿಕೋ ಅಂದನು. ಯೇಸು ಅವನಿಗೆ—ನಿಶ್ಚಯವಾಗಿ ನಿನಗೆ ಹೇಳುತ್ತೇನೆ—ಈ ಹೊತ್ತು ನನ್ನ ಸಂಗಡ ಪರದೈಸಿನಲ್ಲಿ ಇರುವಿ ಅಂದನು. ಯೇಸುವಿನ ಶಿಲುಬೆಯ ಹತ್ತರ ಅವನ ತಾಯಿಯೂ ಬೇರೆ ಸ್ತ್ರೀಯರೂ ಯೋಹಾನನೂ ನಿಂತಿದ್ದರು.

ಯೇಸು ತನ್ನ ತಾಯಿಗೆ—ಸ್ತ್ರೀಯೇ, ಇಗೋ, ನಿನ್ನ ಮಗನು ಅಂದನು; ಮತ್ತು ಯೋಹಾನನಿಗೆ—ಇಗೋ, ನಿನ್ನ ತಾಯಿ ಅಂದನು. ಆ ಘಳಿಗೆಯಿಂದ ಯೋಹಾನನು ಅವಳನ್ನು ಸ್ವಂತ ಮನೆಯಲ್ಲಿ ಶೇರಿಸಿ ಕೊಂಡನು. ಮಧ್ಯಾಹ್ನದಲ್ಲಿ ಮೂರು ಘಂಟೆಯ ತನಕ ದೇಶವೆಲ್ಲಾದರ ಮೇಲೆ ಕತ್ತಲಾಯಿತು. ಮೂರು ಘಂಟೆಗೆ ಯೇಸು ಮಹಾ ಶಬ್ದದಿಂದ ಕೂಗಿ—ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈ ಬಿಟ್ಟಿದ್ದೀ ಅಂದನು. ಅದರ ಮೇಲೆ—ನನಗೆ ದಾಹವಾಯಿತು ಅಂದನು. ಆಗ ರಾಣುವೆಯವರು ಅವನಿಗೆ ಹುಳಿರಸವನ್ನು ಕೊಟ್ಟರು. ಆ ಹುಳಿರಸವನ್ನು ತಕ್ಕೊಂಡ ಮೇಲೆ—ಶೀರಿತು; ತಂದೆಯೇ, ನಿನ್ನ ಕೈಗಳಲ್ಲಿ ನನ್ನ ಆತ್ಮವನ್ನು ಒಪ್ಪಿಸುತ್ತೇನೆ ಅಂದನು. ಮತ್ತು ತಲೆ ಬಾಗಿಸಿ, ಆತ್ಮವನ್ನು ಒಪ್ಪಿಸಿದನು.

ಬದುಕುವವರು ಇನ್ನೂ ತಮಗೆಲ್ಲ, ತಮಗೋಸ್ಕರ ಸತ್ತು ಎಬ್ಬಿಸಲ್ಪಟ್ಟವನಿಗೆ ಬದುಕುವ ಹಾಗೆ, ಅವನು ಎಲ್ಲರಿಗೋಸ್ಕರ ಸತ್ತನು (೨ ಕೊರಿ. ೫, ೧೫).

---

೫೫ ಯೇಸುವನ್ನು ಹೂಣಿಟ್ಟದ್ದೂ ಅವನ ಪುನರುತ್ಥಾನವೂ

ಸಾಯಂಕಾಲದಲ್ಲಿ ಐಶ್ವರ್ಯವೂ ಶಕ್ತಿಯೂ ಉಳ್ಳ ಆಲೋಚನೇ ಸಭೆಯವನಾದ ಯೋಸೇಫನು ಪಿಲಾತನ ಬಳಿಗೆ ಹೋಗಿ, ಯೇಸುವಿನ ಶರೀರವನ್ನು ಬೇಡಿ ಕೊಂಡನು. ಪಿಲಾತನು ಅದನ್ನು ಯೋಸೇಫನಿಗೆ ಕೊಟ್ಟು ಬಿಟ್ಟನು. ಇದಲ್ಲದೆ ನಿಕೊದೇಮನೆಂಬವನು ಸಹ ಕಲಸಿದ ಬೋಳವೂ ಅಗರೂ ತಕ್ಕೊಂಡು ಬಂದನು; ಆಗ ಯೇಸುವಿನ ಶರೀರವನ್ನು ತಕ್ಕೊಂಡು, ಸುಗಂಧಗಳ ಸಂಗಡ ಬಟ್ಟೆಗಳಿಂದ ಸುತ್ತಿದರು. ಮತ್ತು ಅವನನ್ನು ಯೋಸೇಫನ ಹೊಸ ಸಮಾಧಿಯಲ್ಲಿ ಇಟ್ಟು, ಸಮಾಧಿಯ ಬಾಗಲಿಗೆ ಕಲ್ಲನ್ನು ಹೊರಳಿಸಿದರು. ಶಕ್ತಿ ಉಳ್ಳ ಸ್ತ್ರೀಯರೂ ಬಂದು, ಸಮಾಧಿಯನ್ನೂ ಅವನ ಶರೀರ ಹ್ಯಾಗೆ ಇಟ್ಟರೆಂಬದನ್ನೂ ನೋಡಿದರು. ಆದರೆ ಪ್ರಧಾನಯಾಜಕರು ಸಮಾಧಿಯನ್ನು ಕಾವಲಿಯಿಂದ ಭದ್ರ ಮಾಡಿದರು.

ಆದಿತ್ಯವಾರ ದಿವಸ ಬೆಳಿಗ್ಗೆ ಒಂದು ಮಹಾ ಭೂಕಂಪ ಉಂಟಾಯಿತು. ಕರ್ತನ ದೂತನು ಆಕಾಶದಿಂದ ಇಳಿದು ಬಂದನು. ಅವನು ಸಮಾಧಿಯ ಬಾಗಲಿನಿಂದ ಕಲ್ಲನ್ನು ಹೊರಳಿಸಿ, ಅದರ ಮೇಲೆ ಕೂತು ಕೊಂಡನು; ಸಮಾಧಿಯನ್ನು ಕಾಯುವವರು ಕಳವಳ ಪಟ್ಟು, ಸತ್ತವರ ಹಾಗಾದರು. ಆ ಹೊತ್ತಿ ಉಳ್ಳ ಸ್ತ್ರೀಯರು ಸಮಾಧಿಯನ್ನು ನೋಡ ಬಂದರು. ಅವರು ಒಳಗೆ ಹೋಗಿ, ಕರ್ತನಾದ ಯೇಸುವಿನ ಶರೀರವನ್ನು ಕಾಣಲಿಲ್ಲ. ಅವರು ಇದರ ವಿಷಯ ಸಂದೇಹ ಪಡುತ್ತಿರುವಾಗ, ಮಿಂಚುವ ವಸ್ತ್ರಗಳುಳ್ಳ ಇಬ್ಬರು ದೂತರು ಅವರ ಬಳಿಯಲ್ಲಿ ನಿಂತಿದ್ದರು. ಈ ದೂತರು ಸ್ತ್ರೀಯರನ್ನು ಆದರಿಸಿ—ಯೇಸು ಎದ್ದಿದ್ದಾನೆ ಅಂದರು. ಆಗ ಸ್ತ್ರೀಯರು ಶಿಷ್ಯರಿಗೆ ತಿಳಿಸ ಹೋದರು. ಯೋಹಾನನೂ ಪೇತ್ರನೂ ಬೇಗ ಸಮಾಧಿಯ ಬಳಿಗೆ ಬಂದರು, ಆದರೂ ಅವರು ಸಹ ಯೇಸುವನ್ನು ನೋಡಲಿಲ್ಲ.

ಸತ್ತವರೊಳಗಿಂದ ಎಬ್ಬಿಸಲ್ಪಟ್ಟವನೂ ಆಗಿರುವ ಯೇಸು ಕ್ರಿಸ್ತನನ್ನು ಜ್ಞಾಪಕ ಮಾಡಿಕೋ (೨ ತಿಮೋ. ೨, ೮).

೩ನೆ ಕರ್ತನು ಸತ್ತವರೊಳಗಿಂದ ಎದ್ದ ಮೇಲೆ ಪ್ರತ್ಯಕ್ಷವಾದದ್ದು

ಮಗ್ದಲದವಳಾದ ಮರಿಯಳು ಬೆಳಿಗ್ಗೆ ಸಮಾಧಿಯ ಬಳಿಗೆ ಬಂದು, ಅತ್ತಳು. ಬಿಳೀ ವಸ್ತ್ರ ಧರಿಸಿ ಕೂತಿಂಡ ಇಬ್ಬರು ದೂತರು ಅವಳಿಗೆ—ಸ್ತ್ರೀಯೇ, ನೀನು ಅಳುವದೇನು ಅಂದರು. ಮರಿಯಳು ಅವರಿಗೆ—ನನ್ನ ಕರ್ತನನ್ನು ತಕ್ಕೊಂಡು ಹೋಗಿದ್ದಾರೆ ಅಂದಳು. ಅದರ ಮೇಲೆ ತಿರುಗಿ ಕೊಂಡು, ಯೇಸು ನಿಂತಿರುವದನ್ನು ಕಂಡಳು; ಆದರೆ ಅವಳು ಯೇಸುವೆಂದು ತಿಳಿಯದೆ ಇದ್ದಳು. ಯೇಸು ಅವಳ ಸಂಗಡ ಮಾತಾಡಿದನು, ಆಗಲವಳು ಯೇಸುವನ್ನು ತಿಳುಕೊಂಡು, ಅವನಿಗೆ—ಬೋಧಕನೇ ಅಂದಳು.

ಯೇಸು ಬೇರೆ ಸ್ತ್ರೀಯರಿಗೂ ಎದುರ್ಗೊಂಡು—ಶುಭವಾಗಲಿ ಅಂದನು. ಅವರು ಯೇಸುವಿನ ಹತ್ತರ ಹೋಗಿ, ಅವನ ಪಾದ

ಗಳನ್ನು ಹಿಡಿದು, ಅವನಿಗೆ ನಮಸ್ಕರಿಸಿದರು. ಈ ಸ್ತ್ರೀಯರು — ಯೇಸು ಎದ್ದನೆಂದು ಅವನ ಶಿಷ್ಯರಿಗೆ ತಿಳಿಸಿದರು.

ಅದೇ ದಿವಸದಲ್ಲಿ ಇಬ್ಬರು ಶಿಷ್ಯರು ಎಮ್ಮಾಹುವೆಂಬ ಗ್ರಾಮಕ್ಕೆ ಹೋದರು. ಯೇಸು ತಾನೇ ಸಮೀಪಕ್ಕೆ ಬಂದು, ಅವರ ಸಂಗಡ ಹೋದನು. ಶಿಷ್ಯರು ಅವನನ್ನು ತಿಳಿಯಲಿಲ್ಲ; ಯೇಸು ಅವರ



ಸಂಗಡ ಮಾತಾಡಿದನು. ಆದರೆ ಅವರು ಹೋಗುವ ಗ್ರಾಮಕ್ಕೆ ಸಮೀಪಿಸಿದಾಗ, ಅವನು ಇನ್ನು ದೂರ ಹೋಗ ಬೇಕೆಂಬ ಹಾಗೆ ಮಾಡಿದನು. ಆಗಲವರು ಅವನಿಗೆ ಬಲವಂತ ಮಾಡಿ — ನಮ್ಮ ಸಂಗಡ ಇರು, ಸಾಯಂಕಾಲವಾಯಿತು; ದಿವಸವು ಸಂದು ಹೋಯಿತು ಅಂದರು. ಆಗ ಯೇಸು ಅವರ ಸಂಗಡ ಇರುವದಕ್ಕೆ ಪ್ರವೇಶಿಸಿದನು. ಅವನು ಅವರ ಸಂಗಡ ಊಟಕ್ಕೆ ಕೂತು ಕೊಂಡಿರುವಾಗ, ರೊಟ್ಟಿ ತಕ್ಕೊಂಡನು; ಮತ್ತು ಸ್ತೋತ್ರ ಮಾಡಿ, ಮುರಿದು ಶಿಷ್ಯರಿಗೆ



ಕಾಟ್ಟನು. ಆಗಲವರು ಅವನ ಗುರುತು ತಿಳಿದರು. ಆವರೆ ಅವನು ಅವರನ್ನು ಬಿಟ್ಟು, ಕಾಣದೆ ಹಾದನು. ಅವರು ಅದೇ ಘಳಿಗೆಯಲ್ಲಿ ಎದ್ದು, ಯೆರೂಸಲೇಮಿಗೆ ತಿರಿಗಿ ಹಾಗಿ, ಆದದ್ದನ್ನು ಶಿಷ್ಯರಿಗೆ ವಿವರಿಸಿದರು. ಇವರು ಸಹ—ಕರ್ತನು ನಿಜವಾಗಿ ಎದ್ದಿದ್ದಾನೆ ಅಂದರು.

ರಾತ್ರಿಯಲ್ಲಿ ಶಿಷ್ಯರು ಕೂಡಿದ್ದರು; ಅವರು ಯೆಹೂದ್ಯರ ಭಯಕ್ಕಾಗಿ, ಬಾಗಲುಗಳನ್ನು ಮುಚ್ಚಿದ್ದರು. ಆಗ ಯೇಸು ಬಂದು, ಅವರ ಮಧ್ಯದಲ್ಲಿ ನಿಂತು—ನಿಮಗೆ ಸಮಾಧಾನವಿರಲಿ ಅಂದನು. ಆಗಲವರು ದಿಗುಲು ಪಟ್ಟು ಭಯಸ್ಥರಾದರು. ಯೇಸು ಅವರಿಗೆ—ನಾನೇ ಅಲ್ಲವೋ ಅಂದನು. ಮತ್ತು ತನ್ನ ಕೈ ಕಾಲುಗಳನ್ನು ಅವರಿಗೆ ತೋರಿಸಿದನು. ಆಗ ಶಿಷ್ಯರು ಕರ್ತನನ್ನು ನೋಡಿ, ಸಂತೋಷ ಪಟ್ಟರು. ಆದರೆ ದಿದುಮನೆಂಬ ತೋಮನು ಯೇಸು ಬಂದಾಗ, ಅವರ ಸಂಗಡ ಇರಲಿಲ್ಲ. ಆದದರಿಂದ ಬೇರೆ ಶಿಷ್ಯರು—ನಾವು ಕರ್ತನನ್ನು ನೋಡಿದೆವು ಅಂದರು. ಆದರೆ ತೋಮನು ನಂಬಲಿಲ್ಲ. ಮತ್ತು ಎಂಟು ದಿವಸಗಳಾದ ಮೇಲೆ ಶಿಷ್ಯರೂ ಅವರ ಸಂಗಡ ತೋಮನೂ ಒಳಗಿದ್ದರು. ಆಗಲು ಬಾಗಲುಗಳನ್ನು ಮುಚ್ಚಿದ್ದರು. ಯೇಸು ಬಂದು ಮಧ್ಯದಲ್ಲಿ ನಿಂತು—ನಿಮಗೆ ಸಮಾಧಾನವಾಗಲಿ ಅಂದನು. ತೋಮನಿಗೆ ಕರ್ತನು ತನ್ನ ಕೈಗಳನ್ನು ತೋರಿಸಿದನು, ಮತ್ತು ತೋಮನ ಕೈಯನ್ನು ತನ್ನ ಪಕ್ಕೆಯಲ್ಲಿ ಹಾಕಿಸಿದನು; ಇದ



ಲ್ಲದೆ ಅವನಿಗೆ ಬುದ್ಧಿ ಹೇಳಿ—ಅವಿಶ್ವಾಸಿಯಾಗಿರದೆ, ವಿಶ್ವಾಸಿಯಾಗಿರು ಅಂದನು. ತೋಮನು ಪ್ರತ್ಯುತ್ತರವಾಗಿ—ನನ್ನ ಕರ್ತನೇ, ನನ್ನ ದೇವರೇ ಅಂದನು.

ದೇವರು ಕರ್ತನನ್ನು ಎಬ್ಬಿಸಿದನು; ನಮ್ಮನ್ನು ಸಹ ತನ್ನ ಬಲದಿಂದ ಎಬ್ಬಿಸುವನು (೧ಕೊರಿ. ೬, ೧೪).

ನೋಡದೆ ವಿಶ್ವಾಸಿಸುವವರು ಭಾಗ್ಯವಂತರು (ಯೋಹಾ. ೨೦, ೨೯).

---

೩೫ ಯೇಸುವಿನ ದಿವಾರೋಹಣವು

ಹನ್ನಾಂದು ಮಂದಿ ಶಿಷ್ಯರು ಗಲಿಲಾಯಕ್ಕೆ ಒಂದು ಬೆಟ್ಟದ ಮೇಲೆ ಹೋದರು; ಯೇಸು ಅವರಿಗೆ ಹಾಗೆ ನೇಮಿಸಿದ್ದನು. ಅಲ್ಲಿ ಹೆಚ್ಚುಕಡಿಮೆ ಐನೂರು ಮಂದಿ ಸಹೋದರರು ಕೂಡಿದ್ದರು. ಶಿಷ್ಯರು ಅವನಿಗೆ ನಮಸ್ಕರಿಸಿದರು.

ಮತ್ತು ಯೇಸು ಅವರ ಸಂಗಡ ಮಾತಾಡಿ ಹೇಳಿದ್ದೇನಂದರೆ—ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಸಮಸ್ತ ಅಧಿಕಾರವು ನನಗೆ ಕೊಡಲ್ಪಟ್ಟಿದೆ; ಆದದರಿಂದ ನೀವು ಹೋರಟು ಹೋಗಿ, ಸಮಸ್ತ ಜನಾಂಗಗಳನ್ನು ಶಿಷ್ಯರಾಗ ಮಾಡಿ, ತಂದೆಯ, ಮಗನ, ಪರಿಶುದ್ಧಾತ್ಮದ ಹೆಸರಿನಲ್ಲಿ ಅವರಿಗೆ ಸ್ನಾನ ಕೊಟ್ಟು, ನಾನು ನಿಮಗೆ ಆಜ್ಞಾಪಿಸಿದವುಗಳನ್ನೆಲ್ಲಾ ಕೈಕೊಳ್ಳುವದಕ್ಕೆ ಅವರಿಗೆ ಬೋಧಿಸಿರಿ. ವಿಶ್ವಾಸಿಸಿ ಸ್ನಾನ ಹೊಂದುವವನು, ರಕ್ಷಿಸಲ್ಪಡುವನು; ಆದರೆ ವಿಶ್ವಾಸಿಸದವನು ಆಜ್ಞೆನಿರ್ಣಯ ಪಡುವನು. ಯೇಸು ಶ್ರಮೆ ಪಟ್ಟ ಮೇಲೆ ನಾಲ್ವತ್ತು ದಿವಸಗಳ ಪರ್ಯಂತರ ಅವರಿಗೆ ತನ್ನನ್ನು ಬದುಕುವವನಾಗಿ ತೋರಿಸಿದನು. ಅವನು ಅವರಿಗೆ ದೇವರ ರಾಜ್ಯದವುಗಳನ್ನು ಹೇಳುತ್ತಿದ್ದನು. ಮತ್ತು ಅವರ ಸಂಗಡ ಕೂಡಿ ಕೊಂಡು—ನೀವು ಯೆರೂಸಲೇಮನ್ನು ಬಿಟ್ಟು ಹೋಗ ಬೇಡಿರಿ; ಪರಿಶುದ್ಧಾತ್ಮವನ್ನು ಹೊಂದುವಿರಿ ಅಂದನು.

ಆ ಮೇಲೆ ಯೇಸು ತನ್ನ ಶಿಷ್ಯರನ್ನು ಇಷ್ಟೆಗುಡ್ಡದ ಹತ್ತರ ಇರುವ ಬೇತಾನ್ಯಕ್ಕೆ ಕರಕಾಂಡು ಹಾಯ್ದನು. ಅಲ್ಲಿ ಅವನು ತನ್ನ ಕೈಗಳನ್ನು ಎತ್ತಿ ಅವರನ್ನು ಆಶೀರ್ವದಿಸಿದನು. ಆಗಲವನು ಪರ ಲಾಕಕ್ಕೆ ಎತ್ತಲ್ಪಟ್ಟನು, ಒಂದು ಮೇಘವು ಅವನನ್ನು ಅವರ ಕಣ್ಣು ಗಳಿಗೆ ಮರೆಯಾಗಿ ತೆಗೆದು ಕಾಂಡು ಹಾಯಿತು. ಶಿಷ್ಯರು ಆಕಾ



ಶವನ್ನು ದೃಷ್ಟಿಸಲಾಗಿ, ಇಗಾ, ಬಿಳೀ ವಸ್ತ್ರಗಳನ್ನು ಉಟ್ಟು ಕಾಂ ಡ ಇಬ್ಬರು ಪುರುಷರು ಅವರ ಬಳಿಯಲ್ಲಿ ನಿಂತಿದ್ದರು. ಇವರು ಶಿಷ್ಯ ರಿಗೆ—ಯೇಸು ಯಾವ ರೀತಿಯಿಂದ ಪರಲಾಕಕ್ಕೆ ಹಾಯ್ದನಾ, ಅದೇ ರೀತಿಯಿಂದ ಬರುವನು ಅಂದರು. ಮತ್ತು ಶಿಷ್ಯರು ಅವನಿ ಗೆ ನಮಸ್ಕರಿಸಿ, ಮಹಾ ಸಂತಾಷದಿಂದ ಯೆರೂಸಲೇಮಿಗೆ ತಿರಿಗಿ ಹಾಯ್ದರು. ಅಲ್ಲಿ ಅವರು ಯಾವಾಗಲೂ ದೇವಾಲಯದಲ್ಲಿ ದೇ ವರನ್ನು ಹಾಗಳುತ್ತಾ, ಸ್ತುತಿಸುತ್ತಾ ಇದ್ದರು.

ತನ್ನನ್ನು ತಗ್ಗಿಸಿ ಕಾಳ್ಳುವವನು ಹೆಚ್ಚಿಸಲ್ಪಡುವನು (ಮತ್ತಾ. ೨೩, ೧೨).

ಮೇಲೆ ಇರುವವುಗಳನ್ನು ಹುಡುಕಿರಿ, ಅಲ್ಲಿ ಕ್ರಿಸ್ತನು ದೇವರ ಬಲಗ ಡೆಯಲ್ಲಿ ಕೂತು ಕಾಂಡಿದ್ದಾನೆ (ಕೊಲೊ. ೩, ೧).

೩೬ ಪರಿಶುದ್ಧಾತ್ಮವು ಕೊಡಲ್ಪಟ್ಟದ್ದು

ಯೇಸು ಪರಲೋಕಕ್ಕೆ ಎತ್ತಲ್ಪಟ್ಟ ಹತ್ತು ದಿವಸದ ಮೇಲೆ ಪಂಚಾಶಶ್ತಿನ ಹಬ್ಬ ಇತ್ತು. ಶಿಷ್ಯರೆಲ್ಲರು ಯೆರೂಸಲೇಮಿನಲ್ಲಿ ಯೇಕ ಮನಸ್ಸಾಗಿ ಒಂದು ಸ್ಥಳದಲ್ಲಿ ಇದ್ದರು. ಆಗ ಬೀಸುವ ಬಿರುಷಾಳಿ ಯಂತಿರುವ ಶಬ್ದವು ಫಕ್ಕನೆ ಆಕಾಶದಲ್ಲಿ ಉಂಟಾಯಿತು. ಅವರು ಕೂತು ಕಾಂಯಿರುವ ಮನೆಯೆಲ್ಲಾ ತುಂಬಿತು. ಮತ್ತು ಬೆಂಕಿಯ



ಉರಿಯಂತೆ ಚಾಗವಾದ ನಾಲಿಗೆಗಳು ಶಿಷ್ಯರ ಮೇಲೆ ಕೂತು ಕಾಂಡವು. ಅವರೆಲ್ಲರು ಪರಿಶುದ್ಧಾತ್ಮದಿಂದ ತುಂಬಿದವರಾದರು. ಮತ್ತು ಬೇರೆ ಬೇರೆ ಚಾಷೆಗಳಿಂದ ಮಾತಾಡಲಾರಂಭಿಸಿದರು. ಬೇರೆ ಬೇರೆ ದೇಶಗಳಿಂದ ಬಂದ ಚಕ್ತಿಯುಳ್ಳ ಯೆಹೂದ್ಯರು ಯೆರೂಸಲೇಮಿನಲ್ಲಿ ವಾಸವಾಗಿದ್ದರು. ಇವರಲ್ಲಿ ಒಬ್ಬೊಬ್ಬನು ತನ್ನ ತನ್ನ ಚಾಷೆಯಲ್ಲಿ ಶಿಷ್ಯರು ಮಾತಾಡುವದನ್ನು ಕೇಳಿದನು. ಆಗ ಎಲ್ಲರು ಕ್ರಮಿಸಿ, ಆಶ್ಚರ್ಯ ಪಟ್ಟರು — ಈ ಮನುಷ್ಯರು ನಮ್ಮ ಚಾಷೆಗಳಲ್ಲಿ ದೇವರ ಮಹತ್ಕಾದವುಗಳನ್ನು ನುಡಿಯುವದನ್ನು ಕೇಳುತ್ತೇವೆ, ಇದು ಏನಾದೀತೆಂದು ಒಬ್ಬರಿಗೊಬ್ಬರು ಮಾತಾಡಿ ಕಾಂಡರು. ಬೇರೆ ಕೆಲವರು ಹಾಸ್ಯ ಮಾಡಿ — ಅವರು ಶೀಯಾದ ದ್ರಾಕ್ಷೇ ರಸದಿಂದ ತುಂಬಿದವರಾಗಿದ್ದಾರೆ ಅಂದರು. ಆದರೆ ಪೇತ್ರನು ನಿಂತು

ಕಾಂಡು ಹೇಳಿದ್ದು — ಇವರು ಮತ್ತ್ರರಲ್ಲ, ನಾವು ಪರಿಶುದ್ಧಾತ್ಮವನ್ನು ಪಾಂದಿದ್ದೇವೆ, ದೇವರು ನಮಗೆ ತಾರೀಸಿದ ಮನುಷ್ಯನಾದ ಯೇಸುವನ್ನು ಶಿಲುಬೆಗೆ ಹಾಕಿದಿರಿ, ದೇವರು ಅವನನ್ನು ಸತ್ತವರಾಳಗಿಂದ ಎಬ್ಬಿಸಿದ್ದಾನೆ, ಅದಕ್ಕೆ ನಾವು ಸಾಕ್ಷಿಗಳಾಗಿದ್ದೇವೆ, ಹೀಗಿರುವದರಿಂದ ಅವನು ದೇವರ ಬಲಗೈಯಿಂದ ಎತ್ತಲ್ಪಟ್ಟು ಪರಿಶುದ್ಧಾತ್ಮವನ್ನು ಪಾಯಿದಿದ್ದಾನೆ. ಆದದರಿಂದ ಈ ಯೇಸುವನ್ನೇ ದೇವರು ಕರ್ತನಾಗಿಯೂ ಕ್ರಿಸ್ತನಾಗಿಯೂ ಮಾಡಿದ್ದಾನೆಂದು, ಇಸ್ರಾಯೇಲಿನ ಮನೆಯೆಲ್ಲಾ ನಿಶ್ಚಯವಾಗಿ ತಿಳುಕಾಳ್ಳಲಿ.

ಜನರು ಇದನ್ನು ಕೇಳಿ, ಹೃದಯದಲ್ಲಿ ತಿವಿಯಲ್ಪಟ್ಟರು; ಮತ್ತು ಅವರು ಅಪಾಸ್ತಲರಿಗೆ — ಸಹಾದರರೇ, ಏನು ಮಾಡುವ ಅಂದರು. ಪೇತ್ರನು ಅವರಿಗೆ — ನಿಮ್ಮಲ್ಲಿ ಒಬ್ಬಾಬ್ಬನು ಮಾನಸಾಂತರ ಪಟ್ಟು, ನೀವೆಲ್ಲರು ಪಾಪಗಳ ಪರಿಹಾರಕ್ಕಾಕ್ಕಾಸ್ಕರ ಯೇಸು ಕ್ರಿಸ್ತನ ಹೆಸರಿನಲ್ಲಿ ಸ್ನಾನ ಪಾಂದಿರಿ; ಆಗ ಪರಿಶುದ್ಧಾತ್ಮದ ವರವನ್ನು ಪಾಂದುವಿರಿ ಅಂದನು. ಆಗಲವನ ವಾಕ್ಯವನ್ನು ಸಂತಾಷವಾಗಿ ಅಂಗೀಕರಿಸಿದವರು ಸ್ನಾನ ಪಾಂದಿದರು. ಆ ದಿನದಲ್ಲಿ ಹೆಚ್ಚು ಕಡಿಮೆ ಮೂರು ಸಾವಿರ ಪ್ರಾಣಿಗಳು ಶೇರಿಸಲ್ಪಟ್ಟವು. ಅವರು ಅಪಾಸ್ತಲರ ಬಾಷಣೆಯಲ್ಲಿಯೂ ಅನಾನ್ಯದಲ್ಲಿಯೂ ರಾಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನೆಲೆಯಾಗಿದ್ದರು. ಇವರು ಮೊದಲಿನ ಕ್ರೈಸ್ತ ಸಖೆಯಾಗಿದ್ದರು.

ಸತ್ಯದ ಆತ್ಮನೆಂಬವನು ಬಂದಾಗ, ಅವನು ನಿಮ್ಮನ್ನು ಎಲ್ಲಾ ಸತ್ಯದಲ್ಲಿ ಶೇರಿಸುವನು (ಯೋಹಾ. ೧೬, ೧೩).

ಶುದ್ಧ ಹೃದಯವನ್ನು ನನ್ನಲ್ಲಿ ಸೃಷ್ಟಿಸು; ದೇವರೇ, ದೃಢವಾದ ಆತ್ಮವನ್ನು ನನ್ನ ಅಂತರಂಗದಲ್ಲಿ ನೂತನ ಪಡಿಸು (ಕೀರ್ತ. ೫೧, ೧೦).

---

೩ ಪೇತ್ರನೂ ಯೋಹಾನನೂ ಒಬ್ಬ ಕುಂಟನನ್ನು ಸ್ವಸ್ಥ ಮಾಡಿದ್ದು

ಪೇತ್ರನೂ ಯಾಕೋಹಾನನೂ ಒಂದು ದಿನದಲ್ಲಿ ಪ್ರಾರ್ಥನೆಯ ತಾಸಿನಲ್ಲಿ ದೇವಾಲಯಕ್ಕೆ ಕೂಡಾ ಏರಿ ಹಾದರು. ದೇವಾಲಯ

ದ ಬಾಗಲಲ್ಲಿ ಒಬ್ಬ ಕುಂಟನಿದ್ದನು; ಇವನು ಜನರಿಂದ ಭಿಕ್ಷೆ ಬೇಡಿ ಕಾಂಡನು. ಅವನು ಪೇತ್ರನಿಂದಲೂ ಯೋಹಾನನಿಂದಲೂ ಭಿಕ್ಷೆ ಬೇಡಿ ಕಾಂಡನು. ಆಗ ಪೇತ್ರನು ಹೇಳಿದ್ದು —ಬೆಳ್ಳಿಯೂ ಚಂಗಾರವೂ ನನಗೆ ಇಲ್ಲ; ಆದರೆ ನನಗೆ ಇರುವದನ್ನು ನಿನಗೆ ಕಾಡುತ್ತೇನೆ—ಯೇಸು ಕ್ರಿಸ್ತನ ಹೆಸರಿನಲ್ಲಿ ಎದ್ದು ನಡೆದುಕೋ ಎಂದು ಹೇಳಿದನು; ಮತ್ತು ಅವನ ಬಲಗೈಯನ್ನು ಹಿಡಿದು, ಅವನನ್ನು ಎತ್ತಿದನು. ಸಂಗಡಲೇ ಅವನ ಕಾಲುಗಳೂ ಗಿರಿಗೆಗಳೂ ಸ್ಥಿರವಾದವು. ಮತ್ತು ಅವನು ನಡೆಯುತ್ತಾ ಹಾರುತ್ತಾ ದೇವರನ್ನು ಹಾಗಳುತ್ತಾ, ಅವರ ಸಂಗಡ ದೇವಾಲಯದಾಳಗೆ ಪ್ರವೇಶಿಸಿದನು. ಮತ್ತು ಜನರೆಲ್ಲರೂ ಅವನಿಗೆ ಸಂಭವಿಸಿದ್ದಕ್ಕೆ, ಭ್ರಮೆಯಿಂದಲೂ ವಿಸ್ಮಯದಿಂದಲೂ ತುಂಬಾದರು. ಅವರು ಪೇತ್ರನ ಬಳಿಗೂ ಯೋಹಾನನ ಬಳಿಗೂ ಓಡಿ, ಕೂಡಿ ಬಂದರು. ಆಗ ಪೇತ್ರನು ಹೇಳಿದ್ದೇನಂದರೆ —ಇಸ್ರಾಯೇಲ್ಯರಾದ ಜನರೇ, ನೀವು ನಮ್ಮ ಮೇಲೆ ಕಣ್ಣಿಡುವದೇನು? ನಾವು ಸ್ವಂತ ಬಲದಿಂದ ಇವನನ್ನು ನಡಿಯ ಮಾಡಲಿಲ್ಲ, ಯೇಸುವಿನ ಹೆಸರು ಇವನನ್ನು ಸ್ಥಿರ ಮಾಡಿ ಅದೆ, ನೀವು ಯೇಸುವನ್ನು ಬಾಂಕೆ, ಜೀವದ ನಾಯಕನನ್ನು ಕಾಂದಿರಿ, ಅವನನ್ನು ದೇವರು ಸತ್ತವರಾಳಗಿಂದ ಎಬ್ಬಿಸಿದನು, ಮತ್ತು ಅವನ ಮೂಲಕವಾದ ವಿಶ್ವಾಸವು ಇವನಿಗೆ ಈ ಅಂಗಕ್ಷೇಮವನ್ನು ಉಂಟು ಮಾಡಿತು, ಅದಕ್ಕಾಗಿ ನೀವು ಮಾನಸಾಂತರಪಟ್ಟು (ಕರ್ತನಾದ ಯೇಸುವಿನ ಕಡೆಗೆ) ತಿರುಗಿ ಕಾಳ್ಳಿರಿ, ಹಾಗೆ ನಿಮ್ಮ ಪಾಪಗಳು ಅಳಿಸಲ್ಪಡುವವು.

ಯೇಸುವಿನ ಮುಖಾಂತರ ಸತ್ತವರು ಬಿಳುತ್ತಾರೆಂದು ಅಪೊಸ್ತಲರು ಪ್ರಸಂಗಿಸಿದ್ದಕ್ಕೆ ಯಾಜಕರೂ ಸದ್ದುಕಾಯರೂ ಕರೆಕರೆ ಪಟ್ಟರು. ಆದರೆ ವಾಕ್ಯವನ್ನು ಕೇಳಿದವರಲ್ಲಿ ಅನೇಕರು ವಿಶ್ವಾಸಿಸಿದರು.

ವಿಶ್ವಾಸಿಸುವವನಿಗೆ ಎಲ್ಲಾ ಆಗುವದು (ಮಾರ್ಕ. ೯, ೨೩).

ಮತ್ತಾವನಲ್ಲಿಯೂ ರಕ್ಷಣೆ ಇಲ್ಲ; ಹ್ಯಾಗಂದರೆ, ಅದರಿಂದ ನಾವು ರಕ್ಷಿಸಲ್ಪಡ ಬೇಕೆಂದು, ಆಕಾಶದ ಕೆಳಗೆ ಮನುಷ್ಯರಲ್ಲಿ ಕಾಡಲ್ಪಟ್ಟ ಬೇರೆ ಹೆಸರು ಇಲ್ಲವೇ ಇಲ್ಲ (ಅಪೊ. ಕ್ರಿ. ೪, ೧೨).

---

೫೮ ಅನನೀಯನೂ ಸಫ್ಫೈರಳೂ

ವಿಶ್ವಾಸದವರು ಒಬ್ಬರನ್ನೊಬ್ಬರು ಬಹಳ ಪ್ರೀತಿ ಮಾಪಿ ಕೊಂಡರು. ಆಸ್ತಿ ಉಂಟಾದವರು ತಮ್ಮ ಆಸ್ತಿಯನ್ನು ಮಾರಿ ಬಿಟ್ಟು, ಹಣವನ್ನು ಬಡವರಿಗೆ ಹಂಚಿ ಕೊಡಲಿಕ್ಕೆ, ಅಪೊಸ್ತಲರಿಗೆ ಕೊಟ್ಟರು. ಹೀಗೆ ಅವರಾಳಗೆ ಕೊರತೆ ಪಡುವವನು ಒಬ್ಬನೂ ಇರಲಿಲ್ಲ. ಅನನೀಯನೂ ಅವನ ಹೆಂಡತಿಯಾದ ಸಫ್ಫೈರಳೂ ಒಂದು ಆಸ್ತಿಯನ್ನು ಮಾರಿದರು. ಆದರೆ ಅವರು ಹೇಳದೆ, ಕ್ರಯದಲ್ಲಿ ಒಂದು ಪಾಲು ತಮಗೆ ಮಡಗಿ ಕೊಂಡರು; ಒಂದು ಪಾಲು ಮಾತ್ರ ತಂದು ಅಪೊಸ್ತಲರಿಗೆ ಕೊಟ್ಟರು. (ತಮಗೆ ಶಿಕ್ಕಿದ ಹಣವನ್ನು ಎಲ್ಲಾ ಕೊಡದಿದ್ದರೂ, ಬೇರೆ ಜನರ ಹಾಗೆ, ಎಲ್ಲವನ್ನು ಕೊಟ್ಟವರು ಎಂದು, ತೋರಿಚ ಬೇಕೆಂಬುವ ಮನಸ್ಸು ಇತ್ತು). ಆಗ ಪೇತ್ರನು ಹೇಳಿದ್ದು — ಅನನೀಯನೇ, ನೀನು ಪರಿಶುದ್ಧಾತ್ಮಕ್ಕೆ ಸುಳ್ಳಾಡಿದಿ; ಸೈತಾನನು ನಿನ್ನ ಹೃದಯವನ್ನು ತುಂಬಿಸಿದ್ದಾನೆ; ನೀನು ಮನುಷ್ಯರಿಗಲ್ಲ, ದೇವರಿಗೆ ಸುಳ್ಳಾಡಿದಿ. ಅನನೀಯನು ಈ ಮಾತುಗಳನ್ನು ಕೇಳಿ, ಬಿದ್ದು ಪ್ರಾಣ ಬಿಟ್ಟನು. ಇವುಗಳನ್ನು ಕೇಳುವವರಿಗೆ ಮಹಾ ಭಯ ಉಂಟಾಯಿತು. ಯೌವನಸ್ಥರು ಎದ್ದು, ಅವನನ್ನು ಕಟ್ಟಿ, ಹೊತ್ತು ಕೊಂಡು ಹೋಗಿ, ಹೂಣಿಟ್ಟರು. ಮೂರು ತಾಸಿನ ಮೇಲೆ ಅವನ ಹೆಂಡತಿ ಬಂದಳು. ಗಂಡನಿಗೆ ಆದದ್ದನ್ನು ತಿಳಿಯದೆ ಇದ್ದಳು. ಪೇತ್ರನು ಅವಳಿಗೆ — ನೀವು ಅಷ್ಟು ಹಣಕ್ಕೆ ಆ ಹೊಲವನ್ನು ಮಾರಿ ಬಿಟ್ಟಿರೋ ಅಂದನು. ಅವಳು — ಹೌದು, ಅಷ್ಟಕ್ಕೆ ಅಂದಳು. ಆಗ ಪೇತ್ರನು ಅವಳಿಗೆ — ಕರ್ತನ ಆತ್ಮವನ್ನು ಶೋಧಿಸುವದಕ್ಕೆ ನೀವು ಸಮ್ಮತಿಸಿದ್ದು ಯಾಕೆ? ಇಗೋ, ನಿನ್ನ ಗಂಡನನ್ನು ಹೂಣಿಟ್ಟವರು ನಿನ್ನನ್ನೂ ಹೊತ್ತು ಕೊಂಡು ಹೋಗುವರು ಅಂದನು. ಸಂಗಡಲೇ ಅವಳು ಬಿದ್ದು, ಪ್ರಾಣ ಬಿಟ್ಟಳು. ಯೌವನಸ್ಥರು ಅವಳನ್ನು ಹೊತ್ತು ಕೊಂಡು ಹೋಗಿ, ಅವಳ ಗಂಡನ ಹತ್ತರ ಹೂಣಿಟ್ಟರು. ಮತ್ತು ಸಮಸ್ತ ಸಭೆಗೂ ಇವುಗಳನ್ನು ಕೇಳುವವರೆಲ್ಲರಿಗೂ ಮಹಾ ಭಯವಾಯಿತು.

ಆದರೆ ವಿಶ್ವಾಸಿಸುವವರಾದ ಗಂಡಸರ ಹೆಂಗಸರ ಸಮೂಹಗಳು ಹೆಚ್ಚಾಗಿ ಕರ್ತನಿಗೆ ಶೇರಿಸಲ್ಪಟ್ಟವು. ಅಪಾಸ್ತಲರ ಕೈಗಳಿಂದ ಅನೇಕ ಲಕ್ಷಣಗಳು ಉಂಟಾದವು. ಯೆರೂಸಲೇಮಿನಿಂದಲೂ ಸುತ್ತಲಿರುವ ಪಟ್ಟಣಗಳಿಂದಲೂ ಸಮೂಹವು ಗುಂಪಾಗಿ ರೋಗಿಷ್ಠರನ್ನು ಅಪಾಸ್ತಲರ ಬಳಿಗೆ ತಂದರು; ಅವರೆಲ್ಲರು ಸ್ವಸ್ಥವಾದರು.

ಸಕ್ರಿಯೆಯನ್ನೂ ಧರ್ಮವನ್ನೂ ಮರತು ಹೋಗ ಬೇಡಿರಿ; ಯಾಕಂದರೆ ಅಂಥಾ ಬಲಿಗಳನ್ನು ದೇವರು ಮೆಚ್ಚುತ್ತಾನೆ (ಇಬ್ರಿ. ೧೩, ೧೬).

ಸಂತೋಷವಾಗಿ ಕೊಡುವವನನ್ನು ದೇವರು ಪ್ರೀತಿ ಮಾಡುತ್ತಾನೆ (೨ಕೊರಿ. ೯, ೭).

ಸುಳ್ಳಾಡುವವರನ್ನು ನಾಶನ ಮಾಡುತ್ತೀ; ರಕ್ತಪ್ರಿಯನಾದ ಮೋಸಗಾರನನ್ನು ಕರ್ತನು ಅಸಂಹಿಸುತ್ತಾನೆ (ಕೀರ್ತ. ೫, ೬).

---

೫೫ ಅಪೊಸ್ತಲರು ಶೆರೆಮನೆಯಲ್ಲಿಯೂ ಮಂತ್ರಿಸಭೆಯ ಮುಂದೆಯೂ ಇದ್ದದ್ದು

ಪ್ರಧಾನಯಾಜಕರೂ ಸದ್ದುಕಾಯರ ಮತವೆಲ್ಲವೂ ಅಪಾಸ್ತಲರ ಮೇಲೆ ಆಸಕ್ತಿಯಿಂದ ತುಂಬಿದವರಾದರು. ಅದಕ್ಕಾಗಿ ಅವರು ಅಪಾಸ್ತಲರ ಮೇಲೆ ತಮ್ಮ ಕೈಗಳನ್ನು ಹಾಕಿ, ಅವರನ್ನು ಪಟ್ಟಣದ ಶೆರೆಮನೆಯಲ್ಲಿ ಇಟ್ಟರು. ಆದರೆ ರಾತ್ರಿಯಲ್ಲಿ ಕರ್ತನ ದೂತನು ಶೆರೆಮನೆಯ ಬಾಗಲುಗಳನ್ನು ತೆರೆದನು; ಅವನು ಅಪಾಸ್ತಲರನ್ನು ಹಾರಗೆ ನಡಿಸಿ ಅವರಿಗೆ ಹೇಳಿದ್ದು —ನೀವು ಹಾಗಿ, ದೇವಾಲಯದಲ್ಲಿ ನಿಂತು ಕಾಂಡು, ಈ ಜೀವದ ಮಾತುಗಳನ್ನೆಲ್ಲಾ ಜನರಿಗೆ ಹೇಳಿರಿ. ಅವರು ಕೇಳಿ, ಬೆಳಿಗ್ಗೆ ದೇವಾಲಯಕ್ಕೆ ಹಾಗಿ, ಬೋಧಿಸಿದರು. ಆದರೆ ಮಂತ್ರಿಸಭೆಯವರು ಅಪಾಸ್ತಲರನ್ನು ತರ ಬೇಕೆಂದು ಶೆರೆಮನೆಗೆ ಕಳುಹಿಸಿದರು. ಊಳಿಗದವರು ಬಂದು, ಶೆರೆಮನೆಯ ಬಹಳ ಭದ್ರವಾಗಿ ಮುಚ್ಚಿರುವದನ್ನು ನೋಡಿದರು, ಆದರೆ ಒಳಗೆ ಯಾರನ್ನೂ ಕಾಣಲಿಲ್ಲ. ಊಳಿಗದವರು ಹಿಂದೆ ಬಂದು, ಇದನ್ನು

ಮಂತ್ರಿಸಖೆಗೆ ತಿಳಿಸಿದರು. ಇವರು ಇದನ್ನು ಕೇಳಿ — ಇದೇನಾದೀತೆಂದು, ಅವುಗಳ ವಿಷಯವಾಗಿ ಸಂದೇಹ ಪಟ್ಟರು. ಆಗ ಒಬ್ಬನು ಬಂದು — ಇಗೋ, ನೀವು ಶೆರೆಯಲ್ಲಿ ಇಟ್ಟ ಮನುಷ್ಯರು ದೇವಾಲಯದಲ್ಲಿ ನಿಂತು ಕಾಂಡು, ಜನರಿಗೆ ಬೋಧಿಸುತ್ತಾ ಇದ್ದಾರೆಂದು, ಅವರಿಗೆ ತಿಳಿಸಿದನು. ಆಗ ಅಧಿಪತಿಯು ಅವರನ್ನು ಕರಕಾಂಡು ಬಂದನು. ಪ್ರಧಾನಯಾಜಕನು ಅವರನ್ನು ಕೇಳಿದ್ದೇನಂದರೆ — ನೀವು ಯೇಸುವಿನ ಹೆಸರಿನಲ್ಲಿ ಬೋಧಿಸ ಬಾರದೆಂದು, ನಾವು ನಿಮಗೆ ಖಂಡಿತವಾಗಿ ಆಜ್ಞಾಪಿಸಲಿಲ್ಲವೋ? ಮತ್ತು ಇಗೋ, ಯೆರೂಸಲೇಮನ್ನೆಲ್ಲಾ ನಿಮ್ಮ ಬೋಧನೆಯಿಂದ ತುಂಬಿಸಿದ್ದೀರಿ. ಆಗ ಪೇತ್ರನೂ ಅಪಾಸ್ತಲರೂ ಉತ್ತರ ಕಾಟ್ಟು — ಮನುಷ್ಯರಿಗಿಂತ ಹೆಚ್ಚಾಗಿ ದೇವರಿಗೆ ವಿಧೇಯರಾಗಿರ ಬೇಕು ಅಂದರು.

ಮಂತ್ರಿಸಖೆಯವರು ಕಾಪಿಸಿ ಕಾಂಡು, ಅಪಾಸ್ತಲರನ್ನು ಕಾಲ್ಲುವದಕ್ಕೆ ಯೋಚನೆ ಮಾಡಿದರು. ಆದರೆ ನ್ಯಾಯಶಾಸ್ತ್ರಿಯಾಗಿರುವ ಗಮಾಲಿಯೇಲನು ಮಂತ್ರಿಸಖೆಯವರಿಗೆ ಹೇಳಿದ್ದು — ಈ ಮನುಷ್ಯರನ್ನು ಬಿಡಿರಿ; ಯಾಕಂದರೆ ಈ ಕೆಲಸವು ಮನುಷ್ಯರದಾಗಿದ್ದರೆ ಲಯವಾಗುವದು. ಆದರೆ ದೇವರದಾಗಿದ್ದರೆ ಅದನ್ನು ಲಯ ಮಾಡಲಾರಿರಿ; ಒಂದು ವೇಳೆ ನೀವು ದೇವವಿರೋಧಿಗಳಾಗಿ ಕಾಣ್ಬಲ್ಪಡುವಿರಿ. ಇದಕ್ಕೆ ಮಂತ್ರಿಸಖೆಯವರು ಒಪ್ಪಿ ಕಾಂಡರು. ಮತ್ತು ಅವರು ಅಪಾಸ್ತಲರನ್ನು ಹಾಯಿಸಿ — ಯೇಸುವಿನ ಹೆಸರಿನಲ್ಲಿ ಮಾತಾಡ ಬಾರದೆಂದು ಆಜ್ಞಾಪಿಸಿದರು. ಹೀಗೆ ಅಪಾಸ್ತಲರನ್ನು ಬಿಟ್ಟು ಬಿಟ್ಟರು. ಅಪಾಸ್ತಲರು ತಾವು ಯೇಸುವಿನ ಹೆಸರಿನ ನಿಮಿತ್ತ ನಿಂದೆ ಪಟ್ಟದರಿಂದ ಸಂತೋಷ ಪಟ್ಟು, ಹೋದರು. ಮತ್ತು ದಿನಾಲು ಬಿಡದೆ ದೇವಾಲಯದಲ್ಲಿಯೂ ಮನೆಮನೆಯಲ್ಲಿಯೂ ಕ್ರಿಸ್ತನಾದ ಯೇಸುವನ್ನು ಪ್ರಸಂಗಿಸುತ್ತಾ ಇದ್ದರು.

ಪ್ರಾಣವನ್ನು ಕೊಲ್ಲಲಾರದೆ, ಶರೀರವನ್ನು ಕೊಲ್ಲುವವರಿಗೆ ಭಯ ಪಡುವದನ್ನು ಬಿಟ್ಟು, ಪ್ರಾಣವನ್ನೂ ಶರೀರವನ್ನೂ ನರಕದಲ್ಲಿ ನಾಶನ ಮಾಡ ಬಲ್ಲವನಿಗೆ ಭಯ ಪಡಿರಿ (ಮತ್ತಾ. ೧೦, ೨೮).

---

೪೦ ಸ್ತೆಫನನು

ಆ ದಿನಗಳಲ್ಲಿ ಸಖೆಯವರು ಧರ್ಮದ ಕೆಲಸಕ್ಕಾಗಿ ಪರಿಶುದ್ಧಾತ್ಮ ದಿಂದಲೂ ಜ್ಞಾನದಿಂದಲೂ ತುಂಬಿರುವ ಏಳು ಮಂದಿಯನ್ನು ಆ ದು ಕಾಂಡರು. ಅವರನ್ನು ಅಪಾಸ್ತಲರ ಮುಂದೆ ನಿಲ್ಲಿಸಿದರು. ಇ ವರು ಪ್ರಾರ್ಥನೆ ಮಾಡಿ, ಅವರ ಮೇಲೆ ಕೈಗಳನ್ನು ಇಟ್ಟರು. ಆದ ರೆ ಅಪಾಸ್ತಲರು ಪ್ರಾರ್ಥನೆಯಲ್ಲಿಯೂ ವಾಕ್ಯದ ಸೇವೆಯಲ್ಲಿಯೂ ನೆಲೆಯಾಗಿದ್ದರು. ಆ ಏಳು ಮಂದಿ ಸೇವಕರಾಳಗೆ ಸ್ತೆಫನನೆಂಬವನು ಇದ್ದನು. ಇವನು ವಿಶ್ವಾಸದಿಂದಲೂ ಬಲದಿಂದಲೂ ತುಂಬಿದ ವನಾಗಿದ್ದನು. ಅವನು ದಾಡ್ಡ ಲಕ್ಷಣಗಳನ್ನು ನಡಿಸಿದನು. ಅವ ನ ಸಂಗಡ ವಿದ್ವಾಂಸರು ತರ್ಕಿಸಿದರು. ಆದರೆ ಅವನ ಜ್ಞಾನವನ್ನೂ ಅವನು ಮಾತಾಡಿದ ಆತ್ಮವನ್ನೂ ಎದುರಿಸಲಾರದೆ ಇದ್ದರು. ಆಗ ಅವರು ಸ್ತೆಫನನನ್ನು ಮಂತ್ರಿಸಖೆಗೆ ವೈದು ಕಾಂಡು ಹಾಗಿ, ಅಬ ದ್ಧಸಾಕ್ಷಿಗಳನ್ನು ನಿಲ್ಲಿಸಿದರು. ಇವರು ಹೇಳಿದ್ದು — ಈ ಮನುಷ್ಯ ನು ಈ ಪರಿಶುದ್ಧ ಸ್ಥಳಕ್ಕೂ ನ್ಯಾಯಪ್ರಮಾಣಕ್ಕೂ ವಿರೋಧವಾಗಿ ದೂಷಿಸುತ್ತಾನೆ. ಆಗ ಪ್ರಧಾನಯಾಜಕನು — ಇವು ಹಾಗೋ ಅಂ ದನು. ಸ್ತೆಫನನು ಹೇಳಿದ್ದು — ನೀವು ಯಾವಾಗಲು ಪರಿಶುದ್ಧಾ ತ್ಮಕ್ಕೆ ಎದುರು ಬೀಳುತ್ತೀರಿ; ನಿಮ್ಮ ಪಿತೃಗಳು ಹ್ಯಾಗೋ, ಹಾಗೆ ಯೇ ನೀವು. ಯೇಸುವಿನ ಬರುವಿಕೆಯ ವಿಷಯವಾಗಿ ಮುಂತಿಳಿಸಿ ದವರನ್ನು ಅವರು ಕಾಂದು ಹಾಕಿದರು. ಇವನನ್ನು ಒಪ್ಪಿಸಿ ಕಾಟ್ಟು, ಕಾಲ್ಲುವವರು ನೀವೇ ಈಗ ಆದಿರಿ ಅಂದನು. ಅದಕ್ಕೆ ಅವರು (ಉಗ್ರ ದಿಂದ) ಅವನ ಮೇಲೆ ಹಲ್ಲು ಕಡಿದರು. ಆದರೆ ಅವನು ಪರಿಶುದ್ಧಾ ತ್ಮದಿಂದ ತುಂಬಿದವನಾಗಿ — ಇಗೋ, ಆಕಾಶಗಳು ತೆರೆದಿರುವದ ನ್ನೂ ಮನುಷ್ಯನ ಮಗನು ದೇವರ ಬಲಪಾರ್ಶ್ವದಲ್ಲಿ ನಿಂತು ಕಾಂ ದಿರುವದನ್ನೂ ನಾನಿಪುತ್ತೇನೆ ಅಂದನು. ಆಗ ಯೆಹೂದ್ಯರು ಮ ಹಾ ಶಬ್ದದಿಂದ ಕೂಗಿ, ಸ್ತೆಫನನನ್ನು ಪಟ್ಟಿದ ಹಾಗೆ ಹಾಕಿದರು. ಅಲ್ಲಿ ಅವನನ್ನು ಕಲ್ಲೆಸೆದರು. ಮತ್ತು ಸಾಕ್ಷಿಯವರು ತಮ್ಮ ವಸ್ತ್ರ



ಗಳನ್ನು ಸೌಲನೆಂಬ ಯೌವನಸ್ಥನ ಪಾದಗಳ ಹತ್ತರ ಇಟ್ಟರು. ಇವನು ಸ್ತೆಫನನ ಕಾಲೆಗೆ ಸಮ್ಮತಿ ಪಡುತ್ತಿದ್ದನು. ಆದರೆ ಸ್ತೆಫನನು ಪ್ರಾರ್ಥನೆ ಮಾಡಿ, ಕರ್ತನಾದ ಯೇಸುವೇ, ನನ್ನ ಆತ್ಮವನ್ನು ಅಂಗೀಕರಿಸೆಂದನು. ಮತ್ತು ಅವನು ಮೊಣಕಾಲೂರಿ ಕೊಂಡು, ಮಹಾ ಶಬ್ದದಿಂದ—ಕರ್ತನೇ, ಈ ಪಾಪವನ್ನು ಅವರ ಮೇಲೆ ಹಾರಿಸ ಬೇಡವೆಂದು ಕೂಗಿದನು. ಇದನ್ನು ಹೇಳಿ, ನಿದ್ದೆ ಹೋದನು. ಚಕ್ತಿಯುಳ್ಳ ಮನುಷ್ಯರು ಸ್ತೆಫನನನ್ನು ಹೊಣ್ಮಿಟ್ಟು, ಅವನಿಗೌಸ್ಕರ ದಾಡ್ಡ ಗೌಳಾಟ ಮಾಡಿದರು.

ಮನುಷ್ಯರ ಮುಂದೆ ನನ್ನನ್ನು ಅರಿಕೆ ಮಾಡುವವನ್ಯಾವನಾ, ಅವನನ್ನು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನಾನೂ ಅರಿಕೆ ಮಾಡುವೆನು (ಮತ್ತಾ. ೧೦, ೩೨).

ಮರಣದ ಪರ್ಯಂತರ ನಂಬಿಕೆಯಾಗಿರು; ಆಗ ಜೀವದ ಕಿರೀಟವನ್ನು ನಿನಗೆ ಕಾಡುವೆನು (ಪ್ರಕಟ. ೨, ೧೦).

---

೪೧ ಸೌಲನ ಮಾನಸಾಂತರ

ಆ ದಿನಗಳಲ್ಲಿ ಸಭೆಯ ಮೇಲೆ ದಾಡ್ಡ ಹಿಂಸೆ ಆಯಿತು. ಸೌಲನು ಮನೆಮನೆಗಳಲ್ಲಿ ಹೊಕ್ಕು, ಕ್ರೈಸ್ತರಾದ ಗಂಡಸರನ್ನೂ ಹೆಂಗಸರನ್ನೂ ಎಳದು, ಶೆರೆಯಲ್ಲಿ ಒಪ್ಪಿಸಿ ಕೊಟ್ಟನು. ಅವನು ದಮಸ್ಕಕ್ಕೂ ಹೋಗಿ, ಅಲ್ಲಿ ಇದ್ದ ವಿಶ್ವಾಸಿಗಳನ್ನು ಹುಡುಕಿ, ಕಟ್ಟಿ, ಯೆರೂಸಲೇಮಿಗೆ ಕರಕೊಂಡು ಬರಲಿಕ್ಕೆ ಮನಸ್ಸು ಮಾಡಿದನು.

ಆದರೆ ಅವನು ದಮಸ್ಕಕ್ಕೆ ಸಮೀಪಿಸುವಾಗ, ಫಕ್ಕನೆ ಆಕಾಶ ದಿಂದ ಬೆಳಕು ಅವನ ಸುತ್ತಲು ಮಿಂಚಿತು. ಅವನು ನೆಲಕ್ಕೆ ಬಿದ್ದು, ಒಂದು ಶಬ್ದವನ್ನು ಕೇಳಿದನು, ಅದು ತನಗೆ ಹೇಳಿದ್ದು—ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸಿಸುತ್ತೀ? ಅದಕ್ಕೆ ಸೌಲನು—ಕರ್ತನೇ, ನೀನು ಯಾರು ಅಂದನು. ಆಗ ಕರ್ತನು ಹೇಳಿದ್ದು—ನಾನು ನೀನು ಹಿಂಸಿಸುವ ಯೇಸುವೇ. ಸೌಲನು ನಡುಗಿ—ಕರ್ತನೇ, ನಾನು ಏನು ಮಾಡ ಇಚ್ಛೈಸುತ್ತೀ ಅಂದನು. ಕರ್ತನು ಅವನಿಗೆ—ನೀನು ಎದ್ದು ಪಟ್ಟಣದಲ್ಲಿ ಪ್ರವೇಶಿಸು, ಆಗ ನೀನು ಮಾಡ ಬೇಕಾದದ್ದು ನಿನಗೆ ಹೇಳಲ್ಪಡುವದು ಅಂದನು. ಅವನ ಸಂಗಡ ಬಂದ ಜನರು ಶಬ್ದವನ್ನು ಕೇಳಿ, ಮೂಕರಾಗಿ ನಿಂತರು.

ಸೌಲನು ನೆಲದಿಂದ ಎದ್ದನು; ಆದರೆ ಅವನಿಗೆ ಕಣ್ಣು ಕಾಣಲಿಲ್ಲ. ಆಗ ಅವನ ಸಂಗಡ ಇದ್ದವರು ಅವನನ್ನು ಕೈ ಹಿಡಿದು, ದಮಸ್ಕಕ್ಕೆ ಕರಕಾಂಡು ಹೋದರು. ಮತ್ತು ಅವನು ಮೂರು ದಿವಸ ಕಣ್ಣು ಕಾಣದೆ, ಉಣ್ಣಲಿಲ್ಲ, ಕುಡಿಯಲಿಲ್ಲ.

ಆದರೆ ದಮಸ್ಕದಲ್ಲಿ ಅನನೀಯನೆಂಬ ಒಬ್ಬ ಶಿಷ್ಯನಿದ್ದನು. ಅವನಿಗೆ ಕರ್ತನು ಹೇಳಿದ್ದು—ನೀನು ಸೌಲನ ಹತ್ತರ ಹೋಗು; ಇಗೋ, ಪ್ರಾರ್ಥಿಸುತ್ತಾನೆ. ಆಗ ಅನನೀಯನು ಪ್ರತ್ಯುತ್ತರವಾಗಿ—ಕರ್ತನೇ, ಈ ಮನುಷ್ಯನು ನಿನ್ನ ಪರಿಶುದ್ಧವಂತರಿಗೆ ಬಹಳ ಕೇಡು ಮಾಡಿದ್ದಾನೆ ಅಂದನು. ಆಗ ಕರ್ತನು ಅವನಿಗೆ ಹೇಳಿದ್ದು—ನೀನು ಹೋಗು; ಯಾಕಂದರೆ ಇವನು ಜನಾಂಗಗಳ ಮುಂದೆಯೂ, ಅರಸರ ಮುಂದೆಯೂ, ಇಸ್ರಾಯೇಲನ ಮಕ್ಕಳ ಮುಂದೆಯೂ ನನ್ನ ಹೆಸರನ್ನು ಎತ್ತುವನು; ಅವನು ನನ್ನ ನಾಮಕ್ಕಾಗಿ ಬಹಳ ಶ್ರಮೆ ಪಡುವನು.

ಆಗ ಅನನೀಯನು ಹೊರಟು ಹೋಗಿ, ಸೌಲನ ಮೇಲೆ ಕೈಗಳನ್ನಿಟ್ಟು—ಸಹೋದರನಾದ ಸೌಲನೇ, ನೀನು ನಾಡುವ ಹಾಗೆಯೂ, ಪರಿಶುದ್ಧಾತ್ಮದಿಂದ ತುಂಬಿಸಲ್ಪಡುವ ಹಾಗೆಯೂ ಕರ್ತನು ನನ್ನನ್ನು ಕಳುಹಿಸಿದ್ದಾನೆ ಅಂದನು. ಸಂಗಡಲೇ ಸೌಲನು ದೃಷ್ಟಿಯ

ನ್ನು ಹಾಂದಿದನು. ಮತ್ತು ಅವನು ಸ್ನಾನ ಹಾಂದಿ, ಊಟ ಮಾ ಡಿ ಬಲಗಾಂಡನು.

ಮತ್ತು ಪೌಲು ಎಂಬ ಹೆಸರನ್ನು ಹಾಂದಿದ ಸೌಲನು ಕ್ರಿ ಸ್ತನನ್ನು — ಷವನು ದೇವರ ಮಗನೆಂದು ಸಾರಿದನು. ಅವನು ಆಸ ಕ್ತಿ ಉಳ್ಳ ಅಪಾಸ್ತಲನಾದನು. ಅವನು ಬಹಳ ದೇಶಗಳಲ್ಲಿ ಶಿರು ಗಿ ಕಾಂಡು ಸುವಾರ್ತೆಯನ್ನು ಪ್ರಸಂಗಿಸಿದನು. ಅನೇಕ ಮಂದಿ ಯೆಹೂದ್ಯರೂ ಜನಾಂಗಗಳವರೂ ಅವನ ಪ್ರಸಂಗದಿಂದ ವಿಶ್ವಾಸಿ ಗಳು ಆದರು. ಅವನು ಅನೇಕ ಕ್ರೈಸ್ತ ಸಭೆಗಳನ್ನು ಸ್ಥಾಪಿಸಿದನು. ಅಪಾಸ್ತಲನಾದ ಪೌಲನು ರಾೀಮಕ್ಕೂ ಕಾರಿಂಥಕ್ಕೂ ಎಫೆಸಕ್ಕೂ ಮುಂತಾದ ಊರುಗಳಿಗೆ ಪತ್ರಿಕೆಗಳನ್ನು ಬರದು ಕಳುಹಿಸಿದನು. ಆ ಊರುಗಳಲ್ಲಿ ವಿಶ್ವಾಸಿಗಳು ಷದ್ದರು; ಷವರಿಗೆ ಪೌಲನು ಬಾೀಧನೆ ಕಾಟ್ಟು, ಆದರಣೆಯೂ ಬುದ್ಧಿಯೂ ಹೇಳಿದನು. ತನ್ನ ವಿಷಯದ ಲ್ಲಿ ಪೌಲನು ಕಾರಿಂಥಿಯರಿಗೆ ಬರದದ್ದೇನಂದರೆ — ನಾನು ಏನಾಗಿ ದ್ದೇನಾೀ, ದೇವರ ಕೃಪೆಯಿಂದ ಷದ್ದೇನೆ; ಮತ್ತು ನನ್ನಲ್ಲಿದ್ದ ಅವ ನ ಕೃಪೆಯು ವ್ಯರ್ಥವಾಗಲಿಲ್ಲ (೧ಕಾರಿ. ೧೫, ೧೦). ಮತ್ತು —

ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ, ದೇವರ ಪ್ರೀತಿಯೂ ಪರಿಶುದ್ಧಾ ತ್ಮದ ಅನ್ಯೋನ್ಯವೂ ನಿಮ್ಮೆಲ್ಲರ ಸಂಗಡ ಇರಲಿ, ಆಮೆನ್ (೨ಕೊರಿ. ೧೩, ೧೩).

ಅಗ ಶೀರಿತು ನಿಮ್ಮ ಪಾಠವು
ಬೇಗ ಕಲಿತದ ಬೇಗ ಮರಿಯದ –
ಲೀಗಿನಿಂದಲಿ ನಿತ್ಯ ಕಾಲಕು ನೆನಸಿ ಕಾಳ್ಳಿರೆಲೇ।
ಹಾಗಿರದಕನುಸಾರವಾಗಿಯೆ!
ಹೀಗೆ ಮಾಡಿದರೇಸು ಕೃಪೆಯವ –
ನಾಗಿ ಯೆಂದಿಗು ನಿಮ್ಮನಾಶೀರ್ವದಿಸಿ ಕಾಯುವನೂ. ॥೩॥


ಉನ್ನತಾತ್ಮನ ವಾಕ್ಯವೆನ್ನುತ –
ಲನ್ನಕಿಂತಲು ಪಾನಕಿಂತಲು
ಹಾನ್ನಿಗಿಂತಲು ಮಣ್ಣಿಗಿಂತಲು ಪ್ರೀತಿ ಮಾಡ್ಪುದಕೇ, ।
ಇನ್ನು ಬೇರಾಂದೇನು ಹೆಚ್ಚಿನ –
ದೆನ್ನದೇಕಾಪೇಕ್ಷೆಯಿಂದಲೆ
ಮುನ್ನೆ ದೇವರ ವಾಕ್ಯವೊಂದಕೆ ವೋದವಂ ಪಡಿರೀ! ॥೨॥

ಹಳೆಯ ಕಾಲದ ದೇವದಯೆಯನು
ತಿಳಿದು ಕಾಂಪಿರಿ. ಪಾಪ ಧ್ಯಾನಹಗ –
ಳಾಳಗೆ ಬಿದ್ದವರನ್ನು ದೇವರು ತಾಳ್ಮೆಯಿಂ ತಾಳೀ, ।
ಮಳೆಯ ಬಿಸಲಿನ ವರವ ಪಾಲಿಸಿ
ಯುಳಿಸದಾಂದೂ ವಿಧವ ರಕ್ಷಣೆ –
ಗಿಳೆಗೆ ಕಳುಹುವೆನೆನ್ನ ಮಗನನ್ನೆಂದು ತಿಳಿಸಿದನೂ. ॥೪॥

ತದನು ದೇವರು ತನ್ನ ಮಗನ –
ನ್ನುಯಿಸ ಮಾಡಿದನೆಲ್ಲ ಲೌಕ –
ಕ್ಕಿದರ ರಕ್ಷಣೆಗೇಸು ಕ್ರೂಜೆಯಲಳಿದು ಬಲಿಯಾಗೀ, ।
ಕದವ ತೆರೆದನು ನಿತ್ಯ ಮೋಕ್ಷದ
ಪದವಿ ಹಾಂದಲಿಕೀಚೆ ಸಕಲರಿ –
ಗದು ಮಹಾ ಸಂತೋಷಕಾರ್ಯವ ಸಾರ ಮಾಡಿದನೂ. ॥೫॥

ಮತ್ತೆ, ಮಕ್ಕಳೆ, ನಿಮ್ಮ ಪಾಪಕೆ
ಸತ್ತು ಮಹಿಮೆಗೆ ತಿರುಗಿ ಹಾೀಗೀ
ಹಾತ್ತು ನಿಮ್ಮನು ಕರೆಯುವೇಸುವ ಪಾದ ಹಿಡುಕಾಂಡೂ,—।
ಎತ್ತಿ, ಕರ್ತನೆ, ನಿನ್ನ ಕೈಯನು,
ಸುತ್ತು ಮುತ್ತಲು ಕವಿದ ಪಾಪದ
ಕತ್ತಲಾಳಗೆಲೆ ರಕ್ಷಿಸೆಮ್ಮನ್ನೆಂದು, ಮೊರೆಯಿಡಿರೀ! ॥೫॥

1922 Gy 6582





ದೇವರ ವಾಕ್ಯದ

ಸಂಕ್ಷಿಪ್ತ ಕಥೆಗಳು

SHORT

BIBLE STORIES

IN

CANARESE



MANGALORE
PFLEIDERER & RIEHM, MISSION BOOKSHOP
AND GOVT. SCHOOLBOOK DEPOT